ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 24

ನವೆಂಬರ್ 11, 2007

ರೂ. 5/-



ಕರ್ನಾಟಕ ರಾಜ್ಯೋತ್ಸವ ಮತ್ತು ರಾಜಕೀಯ ಬಿಕ್ಕಟ್ಟು


ಪೇಜ್ 8



ಮಹಾನ್ ಅಕ್ಟೋಬರ್ ಕ್ರಾಂತಿಯ ಹೊಂಬೆಳಕು

ಮೈಕ್ರೋಸಾಫ್ಟ್ ಒಪ್ಪಂದ ಬೇಕೆ?

ಪೇಜ್ 3



ಪ್ರತ್ಯೇಕ ರಾಜ್ಯ: ಹಾದಿ ತಪ್ಪಿಸುವ ವಾದಗಳು

ಪೇಜ್ 11

ರೈತರ ಆತ್ಮಹತ್ಯೆ ಕೇರಳದಲ್ಯಾಕೆ ಕಡಿಮೆಯಾಗಿದೆ?

ಮಂಗಳೂರು - SEZ ಲಾಭವೇನು? ನಷ್ಟವೇನು?

ಗಡಿಗಳು ಗೋಡೆಗಳೇ?

ಭಾಷೆ ನಮ್ಮ ಸಮಾಜದ ಸಂವಹನದ ಸಾಧನ. ಭಾವನೆ–ವಿಚಾರಗಳ ವಿನಿಮಯ ಮಾಧ್ಯಮ. ಭಾಷೆಯಿಲ್ಲದ ಸಮಾಜವೊಂದನ್ನು ಕಲ್ಪಿಸಿಕೊಳ್ಳುವುದು ಕಷ್ಟಕರ. ಭಾಷೆ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆರೆತಿದೆ. ಹೀಗಾಗಿ ತಮ್ಮ ಭಾಷೆಯ ಕುರಿತ ಪ್ರೀತಿ ಸಹಜ. ಭಾಷೆ ಸಂವಹನ, ಶಿಕ್ಷಣ, ಆಡಳಿತಗಳ ಮಾಧ್ಯಮವಾಗುವುದರಿಂದ ಒಂದು ಭಾಷೆಯ ಜನರು ತಾವೆಲ್ಲ ಒಂದು ಎಂದು ಭಾವಿಸುವುದು ತುಂಬಾ ಸಹಜ. ಇದು ಒಂದು ಪ್ರಜಾಸತ್ತಾತ್ಮಕ ಆಶಯವೂ ಹೌದು.

ಆದರೆ ಇಂದು ಭಾಷಾಭಿಮಾನವೆಂಬ ಮುಖವಾಡದ ಮರೆಯಲ್ಲಿ ಭಾಷಾಂಧತೆ, ಭಾಷಾ ದುರಭಿಮಾನ, ದ್ವೇಷ ಭಾವನೆಗಳನ್ನು ಬೆಳೆಸಲಾಗುತ್ತಿರುವ ಈ ಸಂದರ್ಭದಲ್ಲಿ ಒಂದು ಐತಿಹಾಸಿಕ ದೃಷ್ಟಿಯ ಚಿಂತನಾರ್ಹ ಲೇಖನ.

51ನೆಯ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಲೇಖನ. ಈ ಹಿನ್ನೆಲೆಯಲ್ಲಿ ಹಲವಾರು ವೈಚಾರಿಕ ಲೇಖನಗಳನ್ನೂ ಪ್ರಕಟಿಸಲಾಗುವುದು.

ಕಳೆದ ವಾರದಿಂದ

ಸಾಂಸದಿತಿಕ ಹರವು : ರಾಜಕೀಯ ಗಡಿಯ ಕಲ್ಪನೆಯನ್ನು ಸದಾ ಪ್ರಶ್ನಿಸುವ ಶಕ್ತಿ ಸಂಸದಿತಿಗಿದೆ. ಸಂಸದಿತಿ ಪರಿಮಳದಂತೆ ಪಸರಿಸುತ್ತದೆ. ಅದನ್ನು ಬಂಧಿಸಿಡಲಾಗುವುದಿಲ್ಲ. ನಮ್ಮೆಡೆಗೆ ಹರಿದುಬರುವ ಅಥವಾ ನಮ್ಮಿಂದ ಹೊರಹೋಗುವ ಪರಿಮಳಕ್ಕೆ ಅಡ್ಡಗೋಡೆಗಳನ್ನು ಹೇಗೆ ಹಾಕಲಾರೆವೋ, ಹಾಗೆಯೇ ಸಂಸದಿತಿಯು ನಿರಂತರ ಕೊಡುಕೊಳುಗೆಯೊಂದಿಗೆ ಮುಂದೆ ಸಾಗುತ್ತದೆ. ಅದು ತನ್ನ ಸುತ್ತ ಒಂದು ಪ್ರಭಾವಳಿಯನ್ನು ಸೃಷ್ಟಿಸಿಕೊಳ್ಳುತ್ತದೆಯೇ ಹೊರತು, ಚೌಕಟ್ಟುಗಳನ್ನು ಹಾಕಿಕೊಳ್ಳುವುದಿಲ್ಲ.



ಡಾ. ವಸು
ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಬೆಂಗಳೂರು ವಿ.ವಿ.

ಸಂಸದಿತಿಯನ್ನು ಹೊತ್ತು ಸಾಗುವ ಬಹುಮುಖ್ಯ ಸಾಧನ ಭಾಷೆ. ಸಾಹಿತ್ಯ, ಸಂಗೀತ, ನೃತ್ಯ, ಉಡುಗೆ-ತೊಡುಗೆಗಳು, ಮತಾಚರಣೆಗಳು, ಬದುಕಿನ ರೀತಿನೀತಿಗಳ ಮೂಲಕ ಜನ ತಮ್ಮ ಸಂಸದಿತಿಯನ್ನು ಕಟ್ಟಿಕೊಳ್ಳುತ್ತಾರೆ. ಕನ್ನಡದ ಜನ ಜಗತ್ತಿನಲ್ಲಿ ಎಲ್ಲೆಲ್ಲಿ ನೆಲೆಸಿರುತ್ತಾರೆ ಅಲ್ಲೆಲ್ಲ ಕನ್ನಡದ ಕಂಪು ಹರಿದೇ ಇರುತ್ತದೆ. ಅವರ ಅರಿವಿಗೆ ಬಾರದೆಯೂ ಇರಬಹುದು. ಕನ್ನಡಿಗರು ಒಂದು ಕಾಲಕ್ಕೆ ನೆಲೆಸಿದ್ದ ಪ್ರದೇಶಗಳಲ್ಲಿ ಕನ್ನಡದ ಶಾಸನಗಳು ಕಾಣಬರುತ್ತವೆ. ಅಮೇರಿಕಾದಲ್ಲಿ 'ಅಕ್ಕಾ' ಸಾಹಿತ್ಯ ಸಮ್ಮೇಳನಗಳನ್ನು ಮಾಡಿ ಅದಕ್ಕೊಂದು ಅಧಿಕೃತ ಮೆರುಗನ್ನು ನೀಡುತ್ತಾ ಬಂದಿದ್ದಾರೆ. ಕನ್ನಡದ ಚಲನಚಿತ್ರಗಳು ಕನ್ನಡದ ಪ್ರಭಾವವನ್ನು ಬೀರುತ್ತಿದ್ದರೆ, ಹಿಂದಿ, ತಮಿಳು, ತೆಲುಗು ಚಿತ್ರಗಳು ಕನ್ನಡದ ಜನರ ಮೇಲೆ ಪ್ರಭಾವ ಬೀರುತ್ತಿವೆ. ಭಾಷೆ-ಭಾಷೆಯ ಮೂಲಕ ವ್ಯಕ್ತವಾಗುವ ಸಾಹಿತ್ಯ ಸಂಗೀತ ಸಂಸದಿತಿಯ ನಿರಂತರ ವಾಹನಗಳಾಗಿವೆ. ಭಾರತದಾದ್ಯಂತ ಜನ ಕನ್ನಡಿಗರಂತೆ ಸೀರೆಯನ್ನು ಉಡಲು ಬಯಸಿದರೆ, ಕರ್ನಾಟಕದ ಸಂಗೀತವನ್ನು ಕಲಿಯಲು ಜಗತ್ತಿನಾದ್ಯಂತ ಜನ ಉತ್ಸುಕರಾಗಿದ್ದಾರೆ. ಅಷ್ಟೇ ಮುಕ್ತವಾಗಿ ಕನ್ನಡಿಗರೂ ನೂರಾರು ವಿಚಾರಗಳನ್ನು ಹೊರಗಿನಿಂದ ಪಡೆಯುತ್ತಾ ಬಂದಿದ್ದಾರೆ. ಇಂಗ್ಲೀಷ್‌ನ ವರ್ಡ್ಸ್‌ವರ್ತ್ ಕನ್ನಡಿಗರ ಭಾವಗೀತೆಗಳಲ್ಲಿ ಸೇರಿದ್ದರೆ, ಠಾಗೂರರು ಕನ್ನಡಸಾಹಿತ್ಯಕ್ಕೆ ಒಂದಷ್ಟು ದಾರಿ ತೋರಿದ್ದಾರೆ. ಉರ್ದುವಿಲ್ಲದ ಉತ್ತರ ಕರ್ನಾಟಕದ ಭಾಷೆಯನ್ನಾಗಲೀ ಸಾಹಿತ್ಯವನ್ನಾಗಲಿ ನೆನೆಯಲಾದೀತೆ. ಹಿಂದೂ ಮುಸ್ಲಿಂ ಬೆರೆತ ಶಿಲ್ಪ ಶೈಲಿ ಕರ್ನಾಟಕದ ವಿಶಿಷ್ಟ ಶೈಲಿಯಾಗಿ ವಿಜಯನಗರ-ಬಹುಮನಿ ಸುಲ್ತಾನರ ಕಾಲದಿಂದ ಬೆಳೆದು ಬಂದಿದೆ. ಕರ್ನಾಟಕ ಸಂಸದಿತಿಯನ್ನು ರೂಪಿಸುವಾಗ ಇತರ ಸಂಸದಿತಿಗಳು ನೆರವಾದಂತೆ, ಪರರ ಸಂಸದಿತಿಯಲ್ಲೂ ಕನ್ನಡ ರಮಿಸಿದೆ. ಕನ್ನಡ ಸಾಹಿತ್ಯ ಜಗತ್ತಿನ ಹಲವು ಭಾಷೆಗಳಿಗೆ ತರ್ಜುಮೆಯಾಗಿದೆ. ಸಂಸದಿತಿ ವಿನಿಮಯ ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ಉತ್ತಮ ಕಾರ್ಯನಿರ್ವಹಿಸುತ್ತಿವೆ. ಸರ್ಕಾರ ತನ್ನ ನೀತಿ ನಿರೂಪಣೆಯಲ್ಲಿ ಪ್ರಸಕ್ತ ಪರಿಸ್ಥಿತಿಯಲ್ಲಿ ಗಡಿಯ ಬಗೆಗೆ ಹೋರಾಡುವುದಕ್ಕಿಂತ ಸಾಂಸದಿತಿಕ



ವಿಸ್ತರಣೆಯ ಕಾರ್ಯ ಸೃಜನಶೀಲವಾಗುತ್ತದೆ.

ಸಂಸದಿತಿಯ ವಿನಿಮಯ ನಮ್ಮ ಅಹಂಮಿಕೆಯನ್ನು ನೀಗಿಸುತ್ತದೆ. ಉಳಿವಿಗಾಗಿ ನಡೆಯುವ ಹೋರಾಟ ಒಂದು ಕಡೆಯದಾದರೆ, ಅಹಂಮಿಕೆಯಿಂದ ಮತ್ತೊಬ್ಬರ ಮೇಲಿನ ದೌರ್ಜನ್ಯ ಮತ್ತೊಂದು ಕಡೆ ನಡೆದೇ ಇದೆ. ಇದನ್ನು ಸಾಂಸದಿತಿಕ ರಾಜಕೀಯವೆಂದೇ ಕರೆಯಬೇಕಾಗುತ್ತದೆ. ಕರ್ನಾಟಕದಲ್ಲೇ ಕನ್ನಡ ಭಾಷಾ ಕಲಿಕೆಗಾಗಿ ಹೋರಾಟ ನಡೆದರೆ, ಯಾವ ಹೋರಾಟವೂ ಇಲ್ಲದೆ ಸಂಸದಿತ ಭಾಷೆಯ ಬೋಧನೆ ಶಾಲಾ ಹಂತದಲ್ಲಿ ಮುಂದುವರೆದಿದೆ. ಇದು ಭಾಷಾ ರಾಜಕೀಯವಲ್ಲವೇ? ಸಂಸದಿತಿಯ ಅಂಶಗಳು ಆರ್ಥಿಕ ವಿಚಾರಗಳ ಜೊತೆ ಸೇರಿದಂತೆ ಪೈಪೋಟಿ ಹೆಚ್ಚುತ್ತದೆ. ಕರ್ನಾಟಕದಲ್ಲಿ ಇತರ ಭಾಷಾ ಚಲನಚಿತ್ರಗಳನ್ನು ವಿರೋಧಿಸಿದಾಗ ಅದು ತನ್ನ ಭಾಷೆಯ, ಸಂಸದಿತಿಯ ಉಳಿವಿಗಾಗಿ ಮಾತ್ರವಾಗಿರಲಿಲ್ಲ, ಅದಕ್ಕೂ ಮಿಗಿಲಾಗಿ ಆರ್ಥಿಕ ಪೈಪೋಟಿಯಾಗಿತ್ತು. ತಾರ್ಕಿಕವಾಗಿ 'ಕನ್ನಡ ಚಲನಚಿತ್ರ' ಎಂದರೆ ಚಲನ ಚಿತ್ರದ ಭಾಷೆ ಮಾತ್ರ ಕನ್ನಡವಾಗಿರಬೇಕೆಂದು ಅರ್ಥವೇ, ಅದರ ನಟರೆಲ್ಲರೂ ಕನ್ನಡಿಗರಾಗಿರಬೇಕೆಂದು ಗ್ರಹಿಸಬೇಕೆ, ಬಂಡವಾಳ ಕನ್ನಡಿಗರದೆಂದು ಭಾವಿಸಬೇಕೆ?

ಪರರ ಸಂಸದಿತಿಯನ್ನು ಜನ ಸುಲಭವಾಗಿಯೇನು ಸ್ವೀಕರಿಸುವುದಿಲ್ಲ. ಅದರಲ್ಲೂ ಒತ್ತಾಯಪೂರ್ವಕವಾಗಿ ಕಲಿಸುವುದು ಮತ್ತೂ ಕಷ್ಟಸಾಧ್ಯವಾದುದು. ಬ್ರಿಟೀಷರು ಭಾರತವನ್ನು 200 ವರ್ಷಗಳ ಕಾಲ ಆಳಿದರೂ ಅವರ ಭಾಷೆ ಎಷ್ಟೇ ಹೇರಿದರೂ ಅದು ನಮಗೆ ವಿದೇಶೀಯವಾಗಿಯೇ ಉಳಿದಿದೆ. ಇಂಗ್ಲೀಷ್ ಸಂಸದಿತಿ ಎಲ್ಲವೂ ನಮ್ಮದಾಗಲಿಲ್ಲ. ಬೇಕಷ್ಟನ್ನು ಮಾತ್ರವೇ ಜನ ಸ್ವೀಕರಿಸಿದರು.

ಆರ್ಥಿಕ ಸವಾಲು


ಸಾಂಸದಿತಿಕ ಕರ್ನಾಟಕವನ್ನು ಬೆಳೆಸುವಂತೆ ಆರ್ಥಿಕ ಕರ್ನಾಟಕವೊಂದನ್ನು ಗುರುತಿಸಿಕೊಳ್ಳುವುದು ಅಭಿವೃದ್ಧಿ ದೃಷ್ಟಿಯಿಂದ ಅಗತ್ಯವಾದುದು. ಅಭಿವೃದ್ಧಿ ಕಾರ್ಯ ಎಲ್ಲ ಪ್ರದೇಶಗಳಲ್ಲೂ ಸಮಾನವಾಗಿ ನಡೆಯದೆ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗುತ್ತಿದೆ. ಇದು ಮತ್ತಷ್ಟು ಪ್ರಾದೇಶಿಕ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸುತ್ತಿದೆ. ಏಕೀಕರಣದ ಸಮಯದಲ್ಲಿ ಪ್ರಾದೇಶಿಕ ಆರ್ಥಿಕ ಅಸಮಾನತೆ ಮಾರಕವಾಗಿತ್ತೆಂಬುದನ್ನು ಈ ಹೊತ್ತಿನಲ್ಲಿ ನೆನೆಯಬಹುದು. ಉತ್ತರಕರ್ನಾಟಕದ ಪ್ರಾಂತ್ಯಗಳು ಆರ್ಥಿಕವಾಗಿ ಹಿಂದೆ ಬಿದ್ದಿದ್ದು ಏಕೀಕರಣದಿಂದ ಮೈಸೂರು ಸಂಸ್ಥಾನದ ಪ್ರಗತಿ ಕುಂಟಿತವಾಗಬಹುದೆಂಬುದು ಅವರ ವಾದವಾಗಿತ್ತು. ಕೊಡಗು ಹಾಗೂ ತುಳುನಾಡಿನಲ್ಲಿ ಕೇಳಿಬಂದ ಪ್ರತ್ಯೇಕ ರಾಜ್ಯದ ಕೂಗಿಗೂ ಆರ್ಥಿಕ ಅಸಮಾನತೆ ಒಂದು ಪ್ರಮುಖ ಕಾರಣವಾಗಿದೆ. ಬೆಳೆಯುತ್ತಿರುವ ನಕ್ಸಲೀಯ ಸಮಸ್ಯೆಯಲ್ಲೂ ಆರ್ಥಿಕ ಅಸಮಾನತೆ ಪ್ರಮುಖ ಕಾರಣವೆಂಬುದನ್ನು ಮರೆಯಲಾಗದು. ಮೂಲಭೂತ ಸೌಕರ್ಯಗಳನ್ನು ಎಲ್ಲರಿಗೂ ಒದಗಿಸುವುದು ಇದಕ್ಕಿರುವ ಉತ್ತರ.

ಕನ್ನಡಿಗರ ಅಭಿವೃದ್ಧಿಯೇ ಕನ್ನಡದ ಅಭಿವೃದ್ಧಿ ಎಂಬುದು ಗಮನಕ್ಕೆ ಬಂದಿರುವ ವಿಚಾರ. ಕನ್ನಡಿಗರಿಗೆ ಆದ್ಯತೆ ಎಂಬ ಪ್ರಶ್ನೆ ತಲೆದೋರಿರುವುದು ಆರ್ಥಿಕ ಅವಕಾಶಗಳ ಸಂದರ್ಭದಲ್ಲೇ.

ಸರಳ ಕಲ್ಪನೆಯಲ್ಲಿ ಕನ್ನಡ ಮಾತೃಭಾಷೆಯಾಗಿ ಹೊಂದಿರುವವರೆಂದು ಗ್ರಹಿಸುತ್ತೇವೆ. ಮಾತೃಭಾಷೆ ಯಾವುದೇ ಇರಲಿ ಕನ್ನಡ ರಾಜ್ಯಭಾಷೆಯಾಗಿ ಈ ನಾಡಿನ ಸಂವಹನ ಭಾಷೆಯಾಗಿ ಜನ ರೂಢಿಸಿಕೊಂಡಿದ್ದಾರೆ. ಉರ್ದು, ಮರಾಠಿ, ಕೊಡವ, ತುಳು ಇತ್ಯಾದಿ ಭಾಷೆಗಳನ್ನು ಮಾತೃಭಾಷೆಯಾಗಿ ಹೊಂದಿರುವವರು ಸಹಜವಾಗಿ ದ್ವಿಭಾಷಿಗಳಾಗಿದ್ದಾರೆ. ಯಾವುದೇ ಹೇರಿಕೆಯಿಲ್ಲದೆಯೂ ಕನ್ನಡವನ್ನು ರೂಢಿಸಿಕೊಂಡಿದ್ದಾರೆ. ಭಾರತದ ನಾಗರಿಕರಾಗಿ ಸಂವಿಧಾನ ಬದ್ಧವಾಗಿ ಯಾರು ಯಾವ ರಾಜ್ಯದಲ್ಲಾದರೂ ಬದುಕುವ ಮತ್ತು ವಲಸೆಹೋಗುವ ಅವಕಾಶ ವಿರುವುದರಿಂದ ಸಮಕಾಲೀನ ಅರ್ಥದಲ್ಲಿ ಕನ್ನಡಿಗರೆಂದರೆ ಕನ್ನಡ ಬಲ್ಲವರೆಂದು ಒಪ್ಪಿಕೊಳ್ಳ ಬೇಕಾಗುತ್ತದೆ.

ಆರ್ಥಿಕ ಕರ್ನಾಟಕವೂ ಸಹ ರಾಜಕೀಯ ಗಡಿಯನ್ನು ಮುರಿದು ನಿಲ್ಲುತ್ತದೆ. ಯಾವುದೇ ಪ್ರದೇಶದ ಆರ್ಥಿಕ ಬೆಳವಣಿಗೆ ಇಂದು ಸ್ವಾವಲಂಬಿಯಲ್ಲ.; ನದಿ ನೀರಿನ ವಿವಾದಗಳಲ್ಲಿ ಇದು ಸ್ಪಷ್ಟವಾಗುತ್ತದೆ. ನದಿ ನೀರನ್ನು ಭಾಷಾ ನೆಲೆಯಲ್ಲಿ, ಭಾವುಕ ನೆಲೆಯಲ್ಲಿ ಚರ್ಚಿಸಿ ಸಮಸ್ಯೆಯನ್ನು ಕಗ್ಗಂಟಾಗಿಸಿಕೊಂಡಿದ್ದೇವೆ. ಹರಿಯುವ ನದಿಗೆ ಕನ್ನಡಿಗರು, ತೆಲುಗರು, ತಮಿಳರೆಂಬ ಭೇದ ಭಾವವಿಲ್ಲದಿರುವುದರಿಂದ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ನದಿ ನೀರನ್ನು

ಪುಟ 12 ಕ್ಕೆ



ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ

ಹಿಂದಿನ ಸಂಚಿಕೆಯಿಂದ	6,74,912.00
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ	
ವಿಮಾ ಸಂಗಾತಿಗಳು ಹಾವೇರಿ	1700
ವಿಮಾ ಸಂಗಾತಿಗಳು ಹುಬ್ಬಳ್ಳಿ ಶಾಖೆ 1	3500
ವಿಮಾ ಸಂಗಾತಿಗಳು ಹುಬ್ಬಳ್ಳಿ ಶಾಖೆ 2	2400
ಶಿರಸಿ	2300
ಹೊನ್ನಾವರ	2600
ಕಾರವಾರ	3000
ಪ್ರತಿನಿಧಿಗಳು ರಾಣೆಬೆನ್ನೂರು	2200
ಹುಬ್ಬಳ್ಳಿ ಶಾಖೆ 3	1000
ಬೆಳಗಾಂ	5400
ಧಾರವಾಡ	4000
ಬಿ.ಶ್ರೀಕಾಂತ್. ಹುಬ್ಬಳ್ಳಿ	1000
ಸಿಪಿಐ(ಎಂ), ಗಜೇಂದ್ರಗಡ ಶಾಖೆ	1000
ಸಿಪಿಐ(ಎಂ) ಮೈಸೂರು ಜಿಲ್ಲಾ ಸಂ.ಸಮಿತಿ ಮೂಲಕ	
ಆರ್.ಜಿ.ಭಂಡಾರಿ, ಮೈಸೂರು	1000.00
ಎಸ್.ನಂಜುಂಡಸ್ವಾಮಿ, ಮೈಸೂರು	300.00
ಎನ್.ಕೆ.ಬಾಲಾಜಿರಾವ್	600.00
ಸಿ.ಎಸ್.ನಾಗೇಂದ್ರಶರ್ಮ ಎಲ್‌ಐಸಿ ಮೈಸೂರು	1000.00
ಜಿ.ಕೆ.ಲಕ್ಷ್ಮಿ?ನಾರಾಯಣ, ಮೈಸೂರು	200.00
ವಿಶ್ವಾಮಿತ್ರ, ಎಲ್‌ಐಸಿ, ಮೈಸೂರು	500.00
ಕೆ.ಎಸ್.ನರಸಿಂಹನ್, ಮೈಸೂರು	100.00
ಎಲ್.ಜಗನ್ನಾಥ್	100.00
ಸಿಪಿಐ(ಎಂ) ಬೆಂಗಳೂರು, ಜಿಲ್ಲಾಸಮಿತಿ ಮೂಲಕ	
ಐಟಿಸಿ ವರ್ಕರ್ಸ್ ಯೂನಿಯನ್ ಮೂಲಕ	25100
ವಿಮಾಸಂಗಾತಿಗಳು, ಬೆಂಗಳೂರು	22702
ಒಟ್ಟು	47,802
	7,70,364

ಸಂಪಾದಕೀಯ

ನಿಷ್ಕಾಳಜಿಯ ನಾಯಕರು !

ರಾಜಭವನದ ಮುಂದೆ ಆರಂಭಗೊಂಡ ರಾಜಕೀಯ ದೊಂಬರಾಟವಿನ್ನೂ ಮುಗಿದಿಲ್ಲ. ಸರ್ಕಾರ ರಚಿಸಲು ತಮ್ಮ ಖಬೂಲಿ ತಿಳಿಸಿ ಶಾಸಕಾಂಗ ನಾಯಕರೂ, ಪಕ್ಷದ ಅಧ್ಯಕ್ಷರುಗಳೂ ಪತ್ರಕೊಟ್ಟು ಈ ಕೂಡಲೇ ಸರ್ಕಾರ ರಚನೆಗೆ ಕರೆಯುಬಹುದೆಂದು ಎಡತಾಕಿರುವುದು ಅಧಿಕಾರದಾಹದ ಹಪಾಹಪಿಯನ್ನು ತೋರಿಸುತ್ತದೆ. ರಾಜ್ಯಪಾಲರು ಕೇಳಿದಂತೆ ಜೆಡಿ(ಎಸ್) ಮತ್ತು ಬಿಜೆಪಿಯ ಶಾಸಕರುಗಳ ಪ್ರತ್ಯೇಕ ಪ್ರಮಾಣ ಪತ್ರಗಳನ್ನು ನೀಡಿದ ಕೂಡಲೇ ಸರ್ಕಾರ ರಚಿಸಲು ಕರೆಯುಬೇಕೆಂಬ ಆಗ್ರಹದೊಂದಿಗೆ ಪ್ರತಿಭಟನೆಗಳನ್ನು ಬಿಜೆಪಿ ಸಂಘಟಿಸಿತ್ತು. ಶಾಸಕರ ಸಂಖ್ಯೆಯ ಬಗ್ಗೆ ತಮಗೆ ತೃಪ್ತಿ ತಂದಿದೆ ಎಂದು ರಾಜ್ಯಪಾಲರು ಬಿಜೆಪಿ ನಾಯಕರಿಗೆ ಹೇಳಿದರೂ ಅವರಿಗೆ ತೃಪ್ತಿಯಾಗಿಲ್ಲ, ಹೀಗಾಗಿ ಪ್ರತಿಭಟನೆ ಮುಂದುವರಿಸಿದ್ದಲ್ಲದೇ ಅಖಿಲ ಭಾರತ ನಾಯಕರೂ ಇದರಲ್ಲಿ ಭಾಗವಹಿಸಿದ್ದಾರೆ. ರಾಷ್ಟ್ರಪತಿಯನ್ನು ಕಂಡು ದೆಹಲಿಯಲ್ಲಿ ಮನವಿ ಪತ್ರ ಸಲ್ಲಿಸಿರುವುದು ಸಿಕ್ಕಿರುವ ಅವಕಾಶವನ್ನು ತಪ್ಪಿಸಿಕೊಳ್ಳಲು ಸಿದ್ಧರಿಲ್ಲ ಎಂಬುದನ್ನು ತೋರಿಸುತ್ತದೆ. ಈಗಲೂ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲು ಬಿಜೆಪಿ ಹೊರಟಿದ್ದೂ ಅಧಿಕಾರವೇ ಒಂದಂಶವನ್ನಾಗಿಸಿಕೊಂಡಿದೆ.


ಸರ್ಕಾರ ರಚನೆಗೆ ಅವಕಾಶ ನೀಡಕೂಡದೆಂದು ವಿಧಾನಸಭೆ ವಿಸರ್ಜನೆ ಮಾಡಬೇಕೆಂದು ಕಾಂಗ್ರೆಸ್ ಒತ್ತಾಯಿಸಿದೆ. ಬಿಜೆಪಿ-ಜೆಡಿ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ಜನಾದೇಶಕ್ಕೆ ವಿರುದ್ಧವಾಗಿ, ವಚನಭ್ರಷ್ಟರೂ ಜನದ್ರೋಹಿಗಳು ಆಗಿದ್ದೂ, ಜನರ ವಿಶ್ವಾಸ ಕಳೆದುಕೊಂಡಿರುವ ಇವರಿಗೆ ಸರ್ಕಾರ ರಚಿಸುವ ನೈತಿಕತೆ ಇಲ್ಲವಾಗಿದ್ದು, ಮಧ್ಯಂತರ ಚುನಾವಣೆಗೆ ಹೋಗಬೇಕೆಂದು ಸಿಪಿಐ(ಎಂ) ಆಗ್ರಹಿಸಿ ರಾಜ್ಯಾದ್ಯಂತ ಚಳುವಳಿ ನಡೆಸಿದೆ. ಅತ್ಯಂತ ಸಮಯೋಚಿತ, ಸರಿಯಾದ ಆಗ್ರಹವಾಗಿದೆ - ಜನತೆಯ ಮುಂದೆ ಹೋಗಲು ಆ 'ಜನಪ್ರತಿ'ಗಳು ಹಿಂದೇಟು ಹಾಕುತ್ತಿರುವುದೇ ಅವರ ಪ್ರಭಾವ, ಜನಪ್ರಿಯತೆಯು ಪಾತಾಳದಲ್ಲಿ ಹುಡುಕಲು ಮಾನದಂಡವಾಗುವುದು. ಜ್ಞಾನಪೀಠ ಪುರಸ್ಕೃತರಾದ ಕಾರ್ನಾಡ್, ಅನಂತಮೂರ್ತಿ, ಡಾ. ಮರುಳುಸಿದ್ದಪ್ಪ, ದೇವನೂರ ಮಹಾದೇವ ಮುಂತಾದ ಸಾಹಿತಿಗಳು ಸರ್ಕಾರ ರಚನೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಎಲ್ಲಾ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ರಾಜ್ಯಪಾಲರು ಈಗ ಕೇಂದ್ರಕ್ಕೆ ವಿವರವಾದ ಮಧ್ಯಂತರ ವರದಿಯನ್ನು ಕಳಿಸಿದ್ದಾರೆ. ಮತ್ತೊಂದು ವರದಿಯನ್ನು ಕೇಂದ್ರ ಬಯಸಿದೆ. ಸರ್ಕಾರ ರಚಿಸುವ ಸುತ್ತ ಪ್ರಕ್ರಿಯೆಗಳು ನಡೆದಿವೆಯಾದರೂ ಕೇಂದ್ರ ಸರ್ಕಾರ ಒಂದು ಖಚಿತ ನಿರ್ಣಯಕ್ಕೆ ಬಂದಿಲ್ಲ. ಅಂದರೆ ಇನ್ನೂ ಕಾಲ ಹಿಡಿಯಲೂಬಹುದು. ಈ ಲಂಬನದಿಂದ ಬಹಳಷ್ಟು ನಿರಾಸೆ, ಬೇಸರಕ್ಕೆ ಒಳಗಾದವರೆಂದರೆ ಮಾಧ್ಯಮಗಳು. ಹೇಗಾದರೂ ಮಾಡಿ ಬಿಜೆಪಿಗೆ ಅಧಿಕಾರ ಸಿಕ್ಕುವಂತೆ ಎಲ್ಲಾ ಸಂಹಿತೆಗಳನ್ನು ಮೀರಿ ಯತ್ನಿಸುತ್ತಿರುವುದು ಅತ್ಯಂತ ನಾಚಿಕೆಗೇಡಿನ ವರ್ತನೆಯಾಗಿದೆ. ಇಂತಹ ಮಾಧ್ಯಮಗಳೇ ರಾಜ್ಯದಲ್ಲಿನ ಧಾರುಣ ಸ್ಥಿತಿ, ಜನರ ಬವಣೆಗಳು ಕಾಣದಂತೆ ತೆರೆಯನ್ನು ಹೊದಿಸಿವೆ.

ದೇವೇಗೌಡರು - ಬಿಜೆಪಿ ನಾಯಕರ ನಡುವೆ ಆದ ಚರ್ಚೆ ಅನುಸರಿಸಿ 12 ಅಂಶಗಳ ಪತ್ರವನ್ನು ಬಿಜೆಪಿ ನಾಯಕರಿಗೆ ಬರೆದದ್ದು ವಿಚಿತ್ರ ವ್ಯಾಖ್ಯಾನಗಳಿಗೂ ಕಾರಣವಾಗಿದೆ. ಇದರೊಂದಿಗೆ ಬಿಜೆಪಿಯ ಪ್ರತಿಭಟನೆಗಳಲ್ಲಿ ಜೆಡಿ(ಎಸ್) ಪೂರ್ಣವಾಗಿ ಭಾಗವಹಿಸುತ್ತಿಲ್ಲ. ತಮ್ಮ ಶಾಸಕರನ್ನು ರೆಸಾರ್ಟ್‌ಗಳಲ್ಲಿ ಹಿಡಿದಿಟ್ಟುಕೊಂಡಿದ್ದ ಜೆಡಿ(ಎಸ್) ಅವರನ್ನು ಬಿಡುಗಡೆಗೊಳಿಸಿದೆ.

ಸರ್ಕಾರವೇ ಇಲ್ಲದೇ ಆಡಳಿತದ ಮೇಲೆ ಅಂಕುಶವೇ ಇಲ್ಲದೇ ಅಧಿಕಾರಶಾಹಿಗಳದ್ದೇ ದರ್ಬಾರು ಎಲ್ಲೆಡೆ ಮೆರೆಯುತ್ತಿದೆ. ಜನರ ಪ್ರಶ್ನೆಗಳಿಗೆ ಅಧಿಕಾರಶಾಹಿಯನ್ನು ಕೆಲಸ ಮಾಡಿಸಬೇಕಾದ ಈ ಶಾಸಕ ಮಹಾಶಯರು ಖಾದಿ ಅಂಗಿಯೊಳಗೆ ಕೈಹಾಕಿ ಕಾಲಹರಣ ಮಾಡುತ್ತಿರುವುದು ಜನರ ಪಾಲಿಗೆ ಒಂದು ದುರಂತವೇ ಆಗಿದೆ. ಈ ಸ್ಥಿತಿ ಆದಷ್ಟು ಬೇಗ ತೊಲಗಬೇಕು.

ಪ್ರತ್ಯೇಕರಾಜ್ಯ : ಹಾದಿತಪ್ಪಿಸುವ ಅಪಾಯಕಾರಿ ವಾದಗಳು



■ ಎಸ್.ವೈ.ಗುರುಶಾಂತ್

ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರೋಪಗೊಂಡು, 51ನೇ ರಾಜ್ಯೋತ್ಸವವೂ ಮುಗಿದಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ, ಒಂದು ಭಾಷೆ, ಮಾತನಾಡುವವರೆಲ್ಲಾ ಒಂದುಗೂಡಿ ಕರ್ನಾಟಕ(ಹಿಂದೆ ಮೈಸೂರು) ರಾಜ್ಯ ನಿರ್ಮಾಣವಾದದ್ದು ಅತ್ಯಂತ ಸಂಭ್ರಮದ ಸಂಗತಿ, ಹಾಗೆಂದೇ ಅಂದಿನ ತ್ಯಾಗ, ಬಲಿದಾನಗಳ ಹೋರಾಟವನ್ನು ಸ್ಮರಿಸಿ, ಹೊಸತು ಸಾಧಿಸುವ, ಸವಾಲು ಕೈಗೆತ್ತಿಕೊಳ್ಳುವ ಸಂದರ್ಭವೂ ಆಗಿದೆ. ಈ ಹಿನ್ನೆಲೆಯಲ್ಲಿ ಜನತೆ ರಾಜ್ಯೋತ್ಸವವನ್ನು ಅವರದೇ ಆದ ರೀತಿಗಳಲ್ಲಿ ಸಂಭ್ರಮದಿಂದ ಆಚರಿಸುತ್ತಾರೆ. ಭಾಷೆ ಸಂಸ್ಕೃತಿಯ ಬಗ್ಗೆ ಬದುಕಿನ ಬಗ್ಗೆಯೂ ಸಾರ್ವಜನಿಕ ಸಮಾರಂಭದ ಮಾತುಗಳಾಗಿವೆ.

ಧಕ್ಕೆ ತರುವ ಘಟನೆಗಳು

ಈ ಬಾರಿ 51ನೇಯ ರಾಜ್ಯೋತ್ಸವ ಆಚರಣೆ ಸಂದರ್ಭದಲ್ಲಿಯೇ ಭಾಷಾವಾರು ಪ್ರಾಂತ್ಯದ ರಚನೆಯ ಮೂಲ ಸ್ಫೂರ್ತಿ, ಆಶಯಕ್ಕೆ ಧಕ್ಕೆ ತರುವ ಎರಡು ಘಟನೆಗಳೂ ನಡೆದವು. ಒಂದು ಹೈದರಾಬಾದ್ ಕರ್ನಾಟಕ ಪ್ರದೇಶ ಹಿಂದುಳಿದಿದೆ ಎಂದು ಪ್ರತ್ಯೇಕ ರಾಜ್ಯದ ನಿರ್ಮಾಣಕ್ಕಾಗಿ ಕಪ್ಪುಬಾವುಟ ಹಾರಿಸಿ (ಕನ್ನಡ ಧ್ವಜದ ಬದಲು ಹೈದಾರಬಾದ್ ಕರ್ನಾಟಕ ಬಾವುಟ ಹಾರಿಸಿ) ಆಚರಿಸಿದ್ದು, ಇದರ ನೇತೃತ್ವ ಮಾಜಿ ಸಚಿವ ವೈಜನಾಥ ಪಾಟೀಲರದ್ದು, ಇನ್ನೊಂದೆಡೆ ಕೊಡಗು ಜಿಲ್ಲೆಯಾದ್ಯಂತ ಬಾಣೆ ಜಮೀನಿನ ಹಕ್ಕಿಗಾಗಿ ಒತ್ತಾಯಿಸಿ ನವೆಂಬರ್ 1 ರಂದೇ ಕರಾಳದಿನವನ್ನಾಗಿ, ಆಚರಿಸಲಾಯಿತು. ಜಿಲ್ಲಾ ಬಂದ್ ಸಹ ನಡೆಸಲಾಯಿತು. ಈ ಸಂದರ್ಭದಲ್ಲಿಯೂ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂಬ ಬೇಡಿಕೆಯೂ ಉಚ್ಛ್ರಾಯಗೊಂಡಿತು. ಇದರಲ್ಲಿ ಬಿಜೆಪಿ, ಜೆಡಿ(ಎಸ್), ಕಾಂಗ್ರೆಸ್‌ನ ನಾಯಕರೂ ಇಲ್ಲಿ ಮೈತ್ರಿ ಸಾಧಿಸಿದ್ದು ವಿಶೇಷ.



ಸಂವಿಧಾನದ 371ನೇ ಕಲಂನೊಳಗೆ ಹೈದರಾಬಾದ್-ಕರ್ನಾಟಕ ಪ್ರದೇಶವನ್ನು ಸೇರಿಸಬೇಕೆಂಬುದು ತಮ್ಮದೇ ಬಾವುಟ ಹಾರಿಸಿದ ಪ್ರತ್ಯೇಕತಾವಾದಿಗಳ ಬೇಡಿಕೆ. ಶಿಕ್ಷಣ ಉದ್ಯೋಗದಲ್ಲಿ ಒಂದು ಪ್ರಾತಿನಿಧ್ಯ ಪಾಲು ಸಿಗುವುದು ಎಂಬುದು ಬಯಕೆ. ಹೈದರಾಬಾದ್ ಕರ್ನಾಟಕ ಪ್ರದೇಶ ಹಿಂದುಳಿದಿದೆ. ಪ್ರಾದೇಶಿಕ ಅಸಮಾನತೆ ತೊಲಗಬೇಕು ಎಂಬುದಕ್ಕೆ ಎರಡು ಮಾತಿರಲಾರದು. ಆ ಪ್ರದೇಶ ಅಭಿವೃದ್ಧಿಯಾಗಬೇಕು, ಶಿಕ್ಷಣ-ಉದ್ಯೋಗಗಳ ಅವಕಾಶಗಳು ಹೆಚ್ಚು ಸಿಗಬೇಕು, ಎಂಬುದು ಪ್ರಜಾಸತ್ತಾತ್ಮಕ ಬೇಡಿಕೆ.ಆದರೆ ಸಾಧಿಸುವುದು ಹೇಗೆ? ಪ್ರಾದೇಶಿಕ ಅಸಮಾನತೆಯಂತಹ ಪ್ರಮುಖ ಪ್ರಶ್ನೆಯನ್ನು ಹೇಗೆ ಬಗೆಹರಿಸಬೇಕು? ಕಾರಣವೇನು ಎಂಬ ಬಗ್ಗೆ ಗಂಭೀರವಾದ ಚಿಂತನೆ ಇಲ್ಲದೇ 'ತಾವು ಮುಟ್ಟಿದ್ದೇ ಆನೆ, ಉಸಿರಿದ್ದೇ ಸಿಂಹ ಘರ್ಜನೆ' ಎಂಬ ಧೋರಣೆಯನ್ನು ಪ್ರತ್ಯೇಕತಾವಾದಿಗಳು ತೋರಿಸಿದ್ದಾರೆ.

ಕೊಡಗಿನಲ್ಲಿ ಅದೇ ಸ್ಥಿತಿ. ತಲೆ ತಲಾಂತರಗಳಿಂದ ಸಾಗುವಳಿ ಮಾಡಿಕೊಂಡು ಬಂದ ಜಮೀನು ಕೃಷಿ ಚಟುವಟಿಕೆಗೆ ಬಳಸುತ್ತಾ ಬಂದ ಬಗ್ಗೆ ಜಮೀನು ಕೃಷಿಕರದ್ದಲ್ಲ ಅದು ಸರ್ಕಾರದ್ದು ಎಂದು ಹೊಸ ವ್ಯಾಖ್ಯಾನ ಮಾಡಲಾಗುತ್ತಿದೆ. ಅದರಂತೆ ಕೊಡಗು ಜಿಲ್ಲೆಯಲ್ಲಿ ಭೂ ಮಾಲೀಕತ್ವಕ್ಕೆ ಸಂಬಂಧಿಸಿ ಕೃಷಿಕನಿಗೆ ಭೂ ಒಡೆತನ ನೀಡುವ 1964ರ ಕಾಯ್ದೆಯನ್ನು ಮತ್ತೆ ಮೂಲೆಗೆ ನೂಕಿ ಕೃಷಿಕರನ್ನು ಸಂಕಷ್ಟಕ್ಕೆ ತಳ್ಳಲಾಗಿದೆ. ಹಕ್ಕು ಅನುಭವಿಸುವುದನ್ನು ತಡೆಯಲೆಂದೇ ಮೂರು ಹೊಸ ಸುತ್ತೋಲೆಗಳನ್ನು 2004, 2006,2007 ರಲ್ಲಿ ತರಲಾಗಿದೆ. ಇದರಲ್ಲಿ ಕಾಂಗ್ರೆಸ್ ಪಾಲಿರುವಂತೆ, ಬಿಜೆಪಿ-ಜೆಡಿ(ಎಸ್) ಪಾಲೂ ಇದೆ. ಒಂದು ಪ್ರಬಲ ಹೋರಾಟ ಕೊಡಗಿನಲ್ಲಿಯೂ, ನಂತರ ಅಸೆಂಬ್ಲಿ ಯಲ್ಲಿಯೂ ನಡೆದ ಬಳಿಕ ಸರ್ಕಾರ ಅರೆ ಮನಸ್ಸಿನಿಂದ ಅವುಗಳನ್ನು ಹಿಂತೆಗೆದುಕೊಂಡಿತು. ಮುಖ್ಯಮಂತ್ರಿ, ಕಂದಾಯ ಮಂತ್ರಿಗಳ ಮುಖಭಾವವೇನೇ ಆಗಿರಲಿ ಅದರಂತೆ ಹಿಂದಿನ ಕ್ರಮಗಳು ಪರಿಸ್ಥಿತಿ ಮುಂದುವರಿಯಬೇಕಿತ್ತು. ಆದರೆ ಹಾಗಾಗದೇ ಸುತ್ತೋಲೆ ಹಿಂದೆ ಪಡೆದರೂ, ಅವೇ ಸುತ್ತೋಲೆಗಳು ಚಾಲ್ತಿಯಲ್ಲಿರುವಂತೆ ಸರ್ಕಾರದ-ಕಂದಾಯ ಇಲಾಖೆ ನೋಡಿಕೊಳ್ಳುತ್ತಿದೆ. ಅಂದರೆ ಆ ಕೃಷಿಕರು ಬಾಣೆ ಜಮೀನಿನಲ್ಲಿ ಅನೇಕ ವರ್ಷಗಳಿಂದ ಕಾಫಿ ಬೆಳೆಸಿದ್ದಾರೆ ಬೆಳೆಯುತ್ತಿದ್ದಾರೆ. ಅದರಂತೆ 'ಕಾಫಿ ನೊಂದಾವಣಾ ಪ್ರಮಾಣ ಪತ್ರ (ಸಿ.ಆರ್.ಸಿ.)' ವನ್ನು ಜಿಲ್ಲಾಧಿಕಾರಿಗಳು ನೀಡುತ್ತಿದ್ದರು. ಸಿ.ಆರ್.ಸಿ. ಇದ್ದರೆ ಮಾತ್ರ ಬ್ಯಾಂಕ್‌ಗಳು ಕೃಷಿ ಸಾಲ ನೀಡುವುದು. ಆದರೆ ಈ ಬಾರಿ ಅಂತಹ ಸಿಆರ್‌ಸಿ ಕೊಡುಲಾಗುವುದಿಲ್ಲ ಎಂದು ಸರ್ಕಾರ ನಿರಾಕರಿಸುತ್ತಿದೆ. ಪರಿಣಾಮ ಬ್ಯಾಂಕ್‌ಗಳು ಸಾಲ ನೀಡುವುದನ್ನು ಅಸಾಧ್ಯವೆಂದು ತಳ್ಳಿ ಹಾಕುತ್ತಿವೆ. ಈಗಾಗಲೇ ಬಿಕ್ಕಟ್ಟನ್ನು ಎದುರಿಸುತ್ತಿರುವ, ಸಾಲದ ಬಾಧೆಯಿಂದ ಆತ್ಮಹತ್ಯೆಗೂ ಈಡಾಗುತ್ತಿರುವ ಕೃಷಿಕರಿಗೆ ಈ ನಿರ್ಧಾರ ಅತ್ಯಂತ ಘೋರ ಪರಿಣಾಮ ತರುತ್ತಿದೆ.

ಈ ಬಗ್ಗೆ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಕಾರ್ಯದರ್ಶಿಗಳ ಉಪ ಸಮಿತಿ ವರದಿ ಬಳಿಕ ಕ್ರಮವಹಿಸಲಾಗುತ್ತದೆ ಎಂದು ಸರ್ಕಾರದ ಭರವಸೆಯನ್ನು ಮನಬಂದಂತೆ ತಿರುಚಿ ವ್ಯಾಖ್ಯಾನಿಸುವುದರಲ್ಲಿ ಈ ಅಧಿಕಾರಿಗಳು ನಿಪುಣರು. ಹೀಗಾಗಿ ಬಾಣೆ ಹಕ್ಕಿನ ಹೋರಾಟ ನಡೆದಿದೆ. ಬೇಡಿಕೆಯೇನೋ ಸರಿ. ಆದರೆ ಇದನ್ನೇ ಹಿಡಿದು ನವೆಂಬರ್ 1 ರ ರಾಜ್ಯೋತ್ಸವ ಬಹಿಷ್ಕಾರ ಕರಾಳದಿನ ಕೊಡಗಿನ ಜನತೆಯ ಹಿತಕ್ಕೆ ಮಾರಕ ಎಂಬುದನ್ನು ಅವರ್ಯಾರೂ ಅರಿಯಲಿಲ್ಲ. ವಿಚಿತ್ರವೆಂದರೆ ಇಂತಹ ವೀರಾವೇಶದ, ಕರಾಳದಿನದ ಬೇಡಿಕೆಗಳನ್ನು ಇಟ್ಟವರೇ (ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಈ ಸಮಸ್ಯೆಗೆ ಒಂದಿಲ್ಲೊಂದು ರೀತಿಯಲ್ಲಿ ತಮ ಕಾಣಿಕೆಯನ್ನು ಕೊಟ್ಟವರೇ. ಅಲ್ಲಿನ ರಸ್ತೆ,ವಿದ್ಯುತ್, ಮೂಲ ಸೌಲಭ್ಯಗಳು ಕೊರತೆ, ಬಾಣೆಯಂತಹ ಸಮಸ್ಯೆಗಳಿಗೆ ಪ್ರತ್ಯೇಕ ರಾಜ್ಯವನ್ನೇ ಕೇಳುವುದು ಮದ್ದು ಎಂಬಂತೆ, ಅಂತಹ ಭಾವನೆ ಬೆಳೆಸುವಂತೆ ಆಡಿದರೆ ಅದು ಒಂದು ಹೊಣೆಗಾರಿಕೆ ಮರೆತ, ಬಾಲಿಷತನವಾಗುವುದಲ್ಲವೇ?

ತಾರತಮ್ಯ

ಉದಯವಾರ್ತೆ ವಾಹಿನಿಯಲ್ಲಿ ಚರ್ಚೆ ನಡೆದಿರುವಾಗಲೇ ಫೋನ್‌ನಲ್ಲಿ ಮಾತನಾಡಿದ ಮಾಜಿ ಸಚಿವ ವೈಜನಾಥಪಾಟಿಲ್ 371ನೇ ವಿಧಿಗೆ ಹೈ.ಕ.ವನ್ನು ಸರ್ಕಾರ ಪರಿಗಣಿಸದಿರುವುದು ಪ್ರತ್ಯೇಕ ಧ್ವಜ ಹಾರಿಸಲು ಕಾರಣವೆಂದು ಹೇಳಿದರು. ಈ ಬೇಡಿಕೆ ಈಡೇರಿಸಿದರೆ ಪ್ರತ್ಯೇಕತೆ ಮಾತು ಬಿಡುವಿರೋ ಎಂಬ ಪ್ರಶ್ನೆಗೆ ಬಿಡಬಹುದು ಎಂದರು. ಒಂದು ಬೇಡಿಕೆಯನ್ನು ಜನಚಳುವಳಿಯ ಮೂಲಕ ಸತತವಾಗಿ ಒತ್ತಡತರುವ, ಅಗತ್ಯವಿದ್ದಲ್ಲಿ ಅದು ರಾಜಕೀಯ ಪ್ರಶ್ನೆಯನ್ನಾಗಿಸುವ ಪ್ರಯತ್ನಗಳಾವೂ ಇಲ್ಲದೆ ಒಂದು ವಿಧಿ ಸೇರ್ಪಡೆ, ಹೈಕೋರ್ಟ್ ಪೀಠದಂತಹ ಪ್ರತಿ ವಿಷಯಗಳಿಗೆ ಪ್ರತ್ಯೇಕ ರಾಜ್ಯ ಬೇಕು ಎಂದು ಉರು ಹೊಡೆದವರಂತೆ ಉಲಿಯುವುದು ಬೇಜವಾಬ್ದಾರಿತನ ಮಾತ್ರವಲ್ಲ ಅಪಾಯಕಾರಿ. ಇಂತಹ ಮಾತುಗಳು ಹಿಂದೆ ಆಳುವ ಪಕ್ಷಗಳು ಇದಕ್ಕೆಲ್ಲಾ ಕಾರಣವಾದ ಭೂಮಾಲೀಕ ರಾಜಕೀಯ ಶಕ್ತಿಗಳು ವೈಫಲ್ಯವಡಗಿದೆ. ಇಡೀ ಪ್ರದೇಶದ ಅಭಿವೃದ್ಧಿಯಾಗಬೇಕಾದರೆ ಸಮಗ್ರ ಭೂಸುಧಾರಣೆಯಾಗಲೇಬೇಕು. ಇಲ್ಲೆಲ್ಲು ಶೇ 7 ರಷ್ಟು ಜನರಲ್ಲಿ 40 ರಷ್ಟು ಭೂಮಿ ಕೇಂದ್ರೀಕರಣಗೊಂಡಿದೆ. ಶಿಕ್ಷಣ ನೀಡಿಕೆ, ಹೊಸ ಕೈಗಾರಿಕೆಗಳ ಸ್ಥಾಪನೆ, ನೀರಾವರಿ ಯೋಜನೆಗಳ ಪೂರ್ಣ ಜಾರಿ ಈ ಮೂಲಕ ಮಾನವ ಅಭಿವೃದ್ಧಿ, ಸಾಮಾಜಿಕ, ಅಭಿವೃದ್ಧಿ ಅತ್ಯವಶ್ಯಕವಾಗಿವೆ. ಆರ್ಥಿಕ ಅಭಿವೃದ್ಧಿಗೆ ತಡೆಯಾಗಿರುವ ಭೂಮಾಲಿಕ ಬಂಡವಾಳಶಾಹಿ ವರ್ಗ ರಾಜಕೀಯವನ್ನು ಮರೆಮಾಚಿ, ಹಾದಿ ತಪ್ಪಿಸುವ ಹುನ್ನಾರಗಳಾಗಿವೆ. ಇದರ ಮುಂಚೂಣಿಯಲ್ಲಿ ಉಳಿಗಮಾನ್ಯ ಶಕ್ತಿಗಳೇ ಇರುತ್ತಿವೆ. ರಾಜ್ಯದ ರಾಜಕಾರಣದಲ್ಲಿ ಹೈ.ಕ ಭಾಗದಿಂದಲೇ ವೀರೇಂದ್ರಪಾಟೀಲ್, ಧರಂಸಿಂಗ್‌ರಂಥವರು ಮುಖ್ಯಮಂತ್ರಿ ಗಳಾಗಿದ್ದರು. ಕನಿಷ್ಟ ಪ್ರತಿ ಸಚಿವ ಸಂಪುಟದಲ್ಲಿಯೂ 5ರಿಂದ 6 ಕ್ಯಾಬಿನೆಟ್ ಸಚಿವರಿರುತ್ತಾರೆ. ಹೀಗಿದ್ದಾಗೂ ಯಾಕೆ ಈ ಪ್ರದೇಶ ಅಭಿವೃದ್ಧಿಯಾಗಲಿಲ್ಲ, ಈಗಲೂ ಹಿಂದುಳಿದಿದೆ ಎಂಬ ಬಗ್ಗೆ ಏನಾದರೂ ಕಿಂಚಿತ್ತೂ ಅವಲೋಕನವಿದೆಯೇ? ಹೋಗಲಿ ವೈಜನಾಥ್‌ರನ್ನು ಖರ್ಗೆ ಒಳಗೊಂಡು ಈ ಗಣ್ಯಾತಿಗಣ್ಯರ ಕ್ಷೇತ್ರಗಳು ಹೇಗಿವೆ? ಅವೆಲ್ಲಾ ಅತ್ಯಂತ ದಯನೀಯ ಸ್ಥಿತಿಯಲ್ಲಿರುವುದು ಇವರ ಬಣ್ಣ ಹೊರಹಾಕಲು ಸಾಕಲ್ಲವೇ? ಗುಲಬರ್ಗಾವೇ ಇರಲಿ, ಧಾರವಾಡ ಅಥವಾ ಕೊಡಗು ಎಲ್ಲದ್ದಕ್ಕೂ ಪ್ರತ್ಯೇಕತೆ ಭಾವನೆಯನ್ನು ಹುಟ್ಟುಹಾಕುವುದು, ದೀರ್ಘಾವಧಿಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಉದ್ದೇಶಕ್ಕೆ ಕೊಡಲಿಯೇಟು ನೀಡಲಿದೆ. ಒಂದು

ಪುಟ 14 ಕ್ಕೆ

ಕೆ.ಆರ್.ಪುರಂ : ನಾಗರಿಕ ಸೌಲಭ್ಯಗಳಿಗಾಗಿ ಆಗ್ರಹ

ಕುಡಿಯುವ ನೀರು, ಸಮರ್ಪಕ ಕಸ ವಿಲೇವಾರಿ, ಚರಂಡಿಗಳ ವೈಜ್ಞಾನಿಕ ನಿರ್ವಹಣೆಗಾಗಿ ಹಾಗೂ ಪ್ರದೇಶಕ್ಕೆ ಮೂಲಭೂತ ಸೌಕರ್ಯಬೇಕೆಂದು ಅಕ್ಟೋಬರ್ 16, 2007ರಂದು ಜನವಾದಿ ಮಹಿಳಾ ಸಂಘಟನೆಯ ಪೂರ್ವ ವಲಯ ಸಮಿತಿ ಮಹದೇವಪುರದಲ್ಲಿರುವ ಮಹಾನಗರ ಪಾಲಿಕೆ ಕಛೇರಿ ಎದುರು ಪ್ರತಿಭಟನೆಯನ್ನು ನಡೆಸಿ ಅಧಿಕಾರಿಗಳಿಗೆ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಳ್ಳಲಾಯಿತು.



ಈಗ ಬೆಂಗಳೂರು ನಗರದ ಸುತ್ತಮುತ್ತ ನಗರಸಭೆ/ಪುರಸಭೆಗಳನ್ನು ವಿಸರ್ಜಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸಲಾಗಿದೆ. ಇದು ಸ್ವಾಗತಾರ್ಹ ವಿಷಯ. ಆದರೆ ಮಹಾನಗರ ಪಾಲಿಕೆಯಾದರೆ ನಮ್ಮ ಸ್ಥಳೀಯ ಸಮಸ್ಯೆಗಳ ಪರಿಹಾರ ಆಗುತ್ತದೆ ಅನ್ನುವ ಜನರ ನಿರೀಕ್ಷೆ ಸುಳ್ಳಾಯಿತು.

ಹಿಂದೆ ನಗರಸಭೆಗಳಿದ್ದಾಗ ಪ್ರತಿದಿನ ಸಾಮಾನ್ಯ ಜನರು ಅರ್ಜಿ ಹಿಡಿದು ಕಛೇರಿಗೆ ಅಲೆಯುವ ವಾಡಿಕೆ ಇತ್ತು. ಆಗಲೂ ಸಹ ಸಮಸ್ಯೆಗಳ ಮಹಾಪೂರವೇ ಇತ್ತು. ಈಗಂತೂ ಒಂದು ಪಟ್ಟು ಸಮಸ್ಯೆ ಜಾಸ್ತಿಯಾಗಿದೆಯೆಂದರೆ ತಪ್ಪಾಗದು.

ಕಾವೇರಿ ನೀರು ಬರಲಿಲ್ಲ, ನೀರಿನ ಮಾರಾಟ ನಿಲ್ಲಲಿಲ್ಲ

ಕುಡಿಯುವ ನೀರಿನ ಸಮಸ್ಯೆ ವಿಪರೀತವಿದ್ದು, ಕೆಲವು ಪ್ರದೇಶಗಳಲ್ಲಿ ಜನವಾದಿಯ ಹೋರಾಟದಿಂದ ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡುತ್ತಾರೆ. ಅದು ಸಾಕಾಗುವುದಿಲ್ಲ. ಪ್ರತಿ ಗ್ರಾಮದಲ್ಲಿ ಸಹ ಖಾಸಗಿ ವ್ಯಕ್ತಿಗಳಿಂದ ಬಿಂದಿಗೆಗೆ 1 ರೂ.ನಿಂದ 2 ರೂ.ಗಳವರೆಗೆ ಹಣ ಕೊಟ್ಟುಕೊಂಡು ಕೊಳ್ಳುವ ಪರಿಸ್ಥಿತಿಯಿದ್ದು ಕೂಲಿ ನಾಲಿ ಮಾಡುವ ಜನರು ಬದುಕುವುದು ಕಷ್ಟವಾಗಿದೆ. ಪಾಲಿಕೆಯಿಂದ ಬೋರ್‌ವೆಲ್ ಕೊರೆಸಿದ್ದರೂ ನೀರು ಬಂದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ಖಾಸಗಿಯವರಿಗೆ ಮಾತ್ರ ನೀರು ಸಿಗುತ್ತದೆ. ಅಂದರೆ ಇವರು ಖಾಸಗಿಯವರಿಗೆ ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ನೀರು ಇಲ್ಲದ ಕಡೆ ಬೋರ್‌ವೆಲ್ ಕೊರೆಯುತ್ತಾರೆ? ಹಣ ಮಾತ್ರ ಖರ್ಚಾಗುತ್ತದೆ. ನೀರು ಮಾತ್ರ ಇಲ್ಲ. ಇದು ಸರ್ವೆ ಸಾಮಾನ್ಯ ಸ್ಥಿತಿ ಮತ್ತು ಪಾಲಿಕೆಯ ಸುತ್ತಮುತ್ತಲಿನ ಪ್ರದೇಶಗಳಿಗೆ ಗುತ್ತಿಗೆ ಆಧಾರದಲ್ಲಿ ನೀರು ಸರಬರಾಜು ಮಾಡುವವರು ಸ್ಥಳೀಯ ಶಾಸಕರ ಅನುಯಾಯಿಗಳು ಅನ್ನುವುದನ್ನು ನಾವು ಗಮನಿಸಬೇಕಾಗಿದೆ. ಮತ್ತೊಂದು ಕಡೆಯಲ್ಲಿ ಸರ್ಕಾರ 2 ರಿಂದ 3 ವರ್ಷಗಳಿಂದ 'ಕಾವೇರಿ ನೀರು ಸಂಪರ್ಕ ಒದಗಿಸುತ್ತೇವೆ ಹಣ ಕಟ್ಟಿ' ಎಂದು ಬೊಬ್ಬೆ ಹೊಡೆಯುತ್ತಿತ್ತು. ಸಾಕಷ್ಟು ಜನ ನಮಗೆ ಹಣ ಕಟ್ಟಿದ ಕೂಡಲೇ ಕಾವೇರಿ ನೀರು ಸಿಕ್ಕೇ ಬಿಟ್ಟಿತು ಅನ್ನುವ ಹಾಗೆ ದುಂಬಾಲು ಬಿದ್ದು ಹಣ ಕಟ್ಟಿ ವರ್ಷಗಳೇ ಕಳೆದರೂ ನೀರು ಸಂಪರ್ಕ ಮಾತ್ರ ಕನಸಾಗಿಯೇ ಉಳಿದಿದೆ. ಆದರೆ ಕಾವೇರಿ ನೀರಿಗೆ ಹಣ ಕಟ್ಟದವರಿಗೆ ಮಾತ್ರ ದಂಡ ವಿಧಿಸಲಾಗುತ್ತಿದೆ. ಆದರೆ ಹಣ ಕಟ್ಟಿ ನೀರು ಸಿಗದವರಿಗೆ ಸರ್ಕಾರ ಯಾವ ದಂಡವನ್ನು ತೆರುತ್ತದೆ ಎಂದು ಜನರು ಪ್ರಶ್ನಿಸುವಂತಾಗಿದೆ.

ರೋಗಗಳ ತವರಾಗಿರುವ ಚರಂಡಿ

ಇದೇ ರೀತಿ ಚರಂಡಿಗಳ ಕಾಮಗಾರಿಗಳು ಸರಿಯಿಲ್ಲದೆ ನಿಂತ ನೀರಂತೂ ಮುಂದಕ್ಕೆ ಕದಲುವುದೇ ಇಲ್ಲ. ಕೊಳೆತು ನಾರುತ್ತಾ ವಾಸನೆ ಪೂರ್ತಿಯಾಗಿ ಹರಡಿ ಸಾಂಕ್ರಾಮಿಕ ರೋಗಗಳನ್ನು ಹರಡುವ ಪರಿಸ್ಥಿತಿಯನ್ನು ಸೃಷ್ಟಿಮಾಡಿವೆ. ಕಸ ತೆಗೆಯದೆ ಕಸದ ರಾಶಿಯನ್ನು ಪ್ರತಿ ರಸ್ತೆಯಲ್ಲಿಯೂ ಕಾಣಬಹುದು. ಆದರೆ ಸ್ವಚ್ಛತೆ ಕೆಲಸ ಮೂರು ನಾಲ್ಕು ತಿಂಗಳಾದರೂ ಆಗುವುದಿಲ್ಲ. ಗುತ್ತಿಗೆದಾರರ ಬಿಲ್ ಮಾತ್ರ ಪಾಸಾಗುತ್ತಿರುತ್ತವೆ! ಪಾಲಿಕೆಗೆ ಬರುವ ಔಷಧಿಯ ವಾಸನೆಯೂ ಇಲ್ಲ. ಅವು ಯಾವ ಕಾಳಸಂತೆಯಲ್ಲಿ ಮಾರಾಟವಾಗುತ್ತವೋ ಗೊತ್ತಿಲ್ಲ. ಆರೋಗ್ಯಾಧಿಕಾರಿಗಳು ಮಾತ್ರ ಪ್ರತಿ 3 ದಿನಕ್ಕೊಮ್ಮೆ ಔಷಧಿ, ಸಿಂಪಡಿಸುವುದಾಗಿ ಹೇಳಿಕೊಳ್ಳುತ್ತಾರೆ.

ಇದರಿಂದ ಎಂತಹ ಸಮಸ್ಯೆಯೆಂದರೆ ಕಸ ಕೊಳೆತು ವಾಸನೆ ಬರುವುದರಿಂದ ಬೀದಿ ನಾಯಿಗಳ ಕಾಟಗಳು, ಜಾಸ್ತಿಯಾಗಿ ಮಕ್ಕಳನ್ನು ಕಚ್ಚುವ ಮಟ್ಟಕ್ಕೆ ಹೋಗಿವೆ. ರಸ್ತೆಗಳಿಗಂತೂ ಡಾಂಬರು ಕಾಣದೆ ಹಳ್ಳ ಕೊಳ್ಳಗಳಿಂದ ಕೂಡಿವೆ ಮತ್ತು ಒಳ ಚರಂಡಿಗಳ ವ್ಯವಸ್ಥೆಯಲ್ಲದೆ ಮಲಮೂತ್ರದ ಪಿಟ್‌ಗಳು ರಸ್ತೆಗಳಲ್ಲಿ ಇರುವುದರಿಂದ ಆಗಾಗ್ಗೆ ರಸ್ತೆಗಳನ್ನು ಅಗೆಯಲಾಗುತ್ತದೆ. ಇದು ಸಹ ಒಂದು ಕಾರಣ ರಸ್ತೆಗಳು ಹಾಳಾಗಲು. ಈ ಸಮಸ್ಯೆಗಳ ಬಗ್ಗೆ ಸಾಕಷ್ಟು ಪ್ರದೇಶಗಳಿಂದ ಜನವಾದಿ ಸಂಘಟನೆ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಯನ್ನು ನೀಡಿದೆ. ಆದರೆ ತಾತ್ಕಾಲಿಕ ವ್ಯವಸ್ಥೆ ಮಾಡುವುದು ಮತ್ತು 3 ದಿನಕ್ಕೆ ಸಮಸ್ಯೆಗಳು ಯಥಾಸ್ಥಿತಿಗೆ ಬರುತ್ತಿದ್ದವು. ಇದನ್ನು ಖಂಡಿಸಿ 8 ಬೇಡಿಕೆಗಳನ್ನು ಇಟ್ಟು ಮಹದೇವಪುರದ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.


ಈ ಹೋರಾಟಕ್ಕೆ ಸ್ಪಂದಿಸಿ ಅಧಿಕಾರಿಗಳು ಕ್ರಮ ಜರುಗಿಸದಿದ್ದರೆ ವಾರ್ಡ್ ಕಛೇರಿಗಳಿಗೆ ಬೀಗ ಜಡಿದು ಅಧಿಕಾರಿಗಳನ್ನು ಕಛೇರಿಯಲ್ಲಿ ಕೂಡಿ ಹಾಕುವ ಕೆಲಸ ಮಾಡಬೇಕಾಗುತ್ತದೆಂದು ಪ್ರತಿಭಟನಾಕಾರರು ಎಚ್ಚರಿಕೆಯನ್ನು ನೀಡಿದರು.

ಮನವಿಯನ್ನು ಪಡೆದು ಪಾಲಿಕೆಯ ಉಪ ಆಯುಕ್ತರಾದ ಹೀರಾ ನಾಯಕ ಟೆಂಡರ್ ಕರೆದು ಸಮಸ್ಯೆ ಬಗೆಹರಿಸುವುದಾಗಿ ಭರವಸೆಯನ್ನು ನೀಡಿರುತ್ತಾರೆ. ಈ ಹೋರಾಟದ ನೇತೃತ್ವವನ್ನು ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಗೌರಮ್ಮನವರು ವಹಿಸಿದ್ದರು. ವಲಯ ಸಮಿತಿಯ ಕಾರ್ಯದರ್ಶಿ ಮಂಜುಳ, ಅನುಸೂಯ, ಜಯಮ್ಮ, ಪದ್ಮ, ಗಾಯತ್ರಿ, ಜ್ಯೋತಿ, ಜಯಲಕ್ಷ್ಮಮ್ಮ, ವಿದ್ಯಾವತಿ, ಸುಶೀಲ, ಕಲ್ಪನಾ, ನಾಗರತ್ನರವರು ಭಾಗವಹಿಸಿದ್ದರು. 200 ಜನ ಮಹಿಳೆಯರು ಸುಮಾರು 12 ಬಡಾವಣೆಗಳಿಂದ ಭಾಗವಹಿಸಿದ್ದರು. ○

ಕರ್ನಾಟಕ: ಕೊಳಕು ಪ್ರದರ್ಶನ

ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳು ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಲು ಕೋರಿಕೆ ಸಲ್ಲಿಸಿರುವುದು ಅತ್ಯಂತ ಅಸಹ್ಯಕರ ಪ್ರದರ್ಶನವಾಗಿದೆ. ಅಧಿಕಾರಕ್ಕಾಗಿ ಹಾತೊರೆವ ತತ್ವಭ್ರಷ್ಟ ಬಿಜೆಪಿ ಮತ್ತು ಅತ್ಯಂತ ಅವಕಾಶವಾದಿ ಜೆಡಿ(ಎಸ್) ಪಕ್ಷಗಳ ಕರ್ನಾಟಕದ ಜನತೆಯ ಆಶೋತ್ತರಗಳಿಗೆ ದ್ರೋಹ ಎಸಗಿವೆ.

ಈಗಿನ ಕಸರತ್ತಿನಿಂದ ಹೆಚ್ಚಿಗೆ ಏನನ್ನೂ ಸಾಧಿಸಲಾಗದು. ಜನತೆಯ ಹೊಸ ಜನಾದೇಶ ಪಡೆಯಲು ಚುನಾವಣೆಯೊಂದೆ ಉಳಿದಿರುವ ದಾರಿ. ಇದೇ ವಿವೇಕದ ಹಾಗೂ ಪ್ರಜಾಸತ್ತಾತ್ಮಕ ಕ್ರಮವಾಗಿದೆ ಎಂದು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಅಕ್ಟೋಬರ್ 28ರ ಹೇಳಿಕೆಯಲ್ಲಿ ತಿಳಿಸಿದೆ.


ಅಧಿಕಾರದ ಊಟಕ್ಕೆ ಕಾದೇ ಕೂತವರು

ಸಾಹಿತ್ಯವ್ವಾ - ರಾಜಕಾರಣವ್ವಾ

'ಅಮ್ಮ ಅಮ್ಮ ಕನ್ನಡರಾಜ್ಯೋತ್ಸವಕ್ಕೆ ಸಾಹಿತ್ಯದ ಬಗ್ಗೆ ಪ್ರಬಂಧ ಬರೀಬೇಕಂತೆ. ಸ್ವಲ್ಪ ಹೇಳ್ಕೊಡಮ್ಮ' ಅಂತ ಮಗ ಅಮ್ಮನನ್ನು ಕೇಳಿದ. 'ಏ ಪ್ರಬಂದ ಗಿಬಂಧ ನಿಮ್ಮಪ್ಪನನ್ನು ಕೇಳು, ಮೂರು ಹೊತ್ತು ಬರೀ ಪೇಪರ್ ಓದ್ತಾ ಕೂತಿರ್ತಾರೆ. ಏನೇನೋ ಕೆಲಸಕ್ಕೆ ಬಾರದ್ದನ್ನು ಬರೀತಿರ್ತಾರೆ' ಎಂದು ಅಮ್ಮ ಮಗನನ್ನು ಅಪ್ಪನ ಬಳಿ ಕಳುಹಿಸಿದಳು. ಮಗ ಅಪ್ಪನ ಸಹಾಯ ಕೋರಿದ. ಅಪ್ಪ ಬರೆದುಕೊಟ್ಟ ಪ್ರಬಂಧ ಹೀಗಿತ್ತು.

ಸಾಹಿತ್ಯವೆಂದರೆ ಕತೆ, ಕವನ, ಕಾದಂಬರಿ ಮುಂತಾದವು. ಕತೆ ಕವನ, ಕಾದಂಬರಿಗಳಲ್ಲಿ ಸಾಹಿತಿಗಳು ಹಾಸ್ಯ, ಕರುಣ, ರೌದ್ರ, ಭೀಭತ್ಸ, ಶೃಂಗಾರ ಮುಂತಾದ ನವರಸಗಳನ್ನು ಸೇರಿಸಿ ಜನರಿಗೆ ಮನರಂಜನೆಯನ್ನು, ಸಂದೇಶವನ್ನು ನೀಡುತ್ತಾರೆ. ಸಾಹಿತ್ಯವನ್ನು ತಿಳಿಯಲು ಚೆನ್ನಾಗಿ ಓದಬೇಕು. ಆದರೂ ಕಾವ್ಯ ಮುಂತಾದವು ಸುಲಭವಾಗಿ ಅರ್ಥವಾಗುವುದಿಲ್ಲ. ಹೆಚ್ಚಿನ ಜನ ಓದಿ ತಿಳಿಯುವುದಕ್ಕಿಂತ ನೋಡಿ ತಿಳಿಯುವುದೇ ಜಾಸ್ತಿ. ಹಾಗಾಗಿ ಇಂಥವರು ಸಾಹಿತ್ಯವನ್ನು ಓದುವುದಕ್ಕಿಂತ, ರಾಜಕೀಯವನ್ನು ನೋಡಿ ತಿಳಿಯುವುದನ್ನು ಹೆಚ್ಚು ಇಷ್ಟಪಡುತ್ತಾರೆ.

ಏಕೆಂದರೆ ರಾಜಕೀಯ ತಿಳಿಯಲು ಅಕ್ಷರಸ್ಥರಾಗಬೇಕಾಗಿಲ್ಲ. ಸಾಹಿತ್ಯದಲ್ಲಿ ಇರುವುದಕ್ಕಿಂತ ಹೆಚ್ಚು ಮನರಂಜನೆ. ಕುತೂಹಲ, ಪತ್ತೆದಾರಿ, ಹಾಸ್ಯ ರಾಜಕೀಯದಲ್ಲಿ ಇರುತ್ತದೆ. ಸಾಹಿತ್ಯದ ನವರಸಗಳಿಗಿಂತ ಜಾಸ್ತಿ ರಸಗಳು ರಾಜಕೀಯದಲ್ಲಿ ಇರುತ್ತದೆ. ರಾಜಕೀಯದಲ್ಲಿ ಒಳ್ಳೆ ಸಂದೇಶಗಳು ಇರುತ್ತವೆ. ಉದಾಹರಣೆಗೆ, ಸಾಹಿತಿಗಳು ಜಗಳವಾಡುತ್ತಾರೆ. ಪರಸ್ಪರ ಕಿತ್ತಾಡುವ ಸಾಹಿತಿಗಳ ವೈಮನಸ್ಸು ಯಾವುತ್ತೂ ಶಮನವಾಗುವುದಿಲ್ಲ. ಬಗ್ಗಾಗಿ ಹೆಚ್ಚುತ್ತಲೇ ಇರುತ್ತದೆ. ಆದರೆ ರಾಜಕೀಯದಲ್ಲ ಎಷ್ಟೇ ಕೆಟ್ಟದಾಗಿ, ಕೊಳಕಾಗಿ ಕಿತ್ತಾಟ, ಜಗಳ ಆಡಿದರೂ, ಮತ್ತೆ ಒಂದಾಗುತ್ತಾರೆ. ಎಂಥೆಂತಾ ಪರಮ ಶತ್ರುಗಳೂ ಆಪ್ತ ಮಿತ್ರರಾಗುತ್ತಾರೆ. ಎಂಥಾ ಆದರ್ಶ! 'ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ' ಎನ್ನುವ ಗಾದೆಯ ಹಾಗೆ 'ರಾಜಕಾರಣಿಗಳ ಜಗಳ ಅಧಿಕಾರ ಸಿಗುವ ತನಕ' ಎನ್ನಬಹುದು. ಪರಸ್ಪರ ಅಪ್ಪಿಕೊಂಡು, ಒಬ್ಬರಿಗೊಬ್ಬರು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುತ್ತಾರೆ. ಈ ರಾಜಕೀಯದಲ್ಲಿ ನಡೆಯುತ್ತಿರುವ ವಿಚಿತ್ರ ರಸ, ಭಯಂಕರ ರಸ, ಅಸಹ್ಯ ರಸ ಮುಂತಾದವು ಯಾವ ಸಾಹಿತ್ಯದಲ್ಲೂ ಇಲ್ಲ. ಇಂಥ ರಾಜಕೀಯದಿಂದ ಪತ್ರಿಕೆಗಳಿಗೆ ಕೆಲಸ ಸುಲಭವಾಗಿದೆ. ಅಷ್ಟೊಂದು ಸುದ್ದಿ ಸಮಾಚಾರಗಳು! ಅದರಲ್ಲೇ ಮನರಂಜನೆ! ಇನ್ನು ನ್ಯೂಸ್ ಚಾನಲ್‌ಗಳಿಗೂ ಮನರಂಜನೆಗೆ ಕೊರತೆಯಿಲ್ಲ. ಎಳೆಯುವ ಧಾರಾವಾಹಿಗಳನ್ನು ಬಿಟ್ಟು ರಂಜನೆಗಾಗಿ ಜನ ನ್ಯೂಸ್ ಚಾನಲ್‌ಗಳನ್ನು ನೋಡಲು ಪ್ರಾರಂಭಿಸಿದ್ದಾರೆ.....

ಹೀಗೆ ಪ್ರಬಂಧ ಎರಡನೇ ಪುಟಕ್ಕೂ ಮುಂದುವರೆದಿತ್ತು. ಮಗ ಮೊದಲನೇ ಪುಟವನ್ನು ಓದಲು ಅಮ್ಮನಿಗೆ ಕೊಟ್ಟ. ಅಮ್ಮ ಕೆಂಡಾಮಂಡಲವಾಗಿ, 'ಸಾಕು ನಿಲ್ಲಿಸ್ರೀ, ಇನ್ನೂ ಏನೇನು ಸುಡುಗಾಡು ಗೀಚ್ತಿದೀರಾ' ಎಂದು ಗುಡುಗಿದಳು.

'ಯಾಕೆ, ಯಾಕೆ ಇಷ್ಟು ಕೋಪ ಮಾಡ್ಕೊಂಡಿದ್ದೀಯಾ?' ಎಂದು ಕೇಳಿದ ಅಪ್ಪ. 'ಮತ್ತಿನ್ನೇನ್ರಿ ಮಗ ಸಾಹಿತ್ಯದ ಬಗ್ಗೆ ಪ್ರಬಂಧ ಕೇಳಿದ್ರೆ ನೀವು ಬರೀ ಸುಡುಗಾಡು ರಾಜಕೀಯದ ಬಗ್ಗೆ ಬರ್ದಿದೀರಲ್ರೀ' ಎಂದು ಅಮ್ಮ ರೇಗಿದಳು.

'ಅಯ್ಯೋ ಸಾಹಿತಿಗಳಲ್ಲಿ ರಾಜಕೀಯ ಏನೂ ಕಮ್ಮಿ ಇಲ್ಲ ಕಣ್ರೇ, ಅವರಲ್ಲೂ ಅವಿವೇಕಿಗಳೂ ಇರ್ತಾರೆ. ಅಂತೋರನ್ನ ನೋಡಿದ್ರೆ. ರಾಜಕೀಯದವರೇ ವಾಸಿ ಅನ್ಸುತ್ತೆ' ಎಂದ ಅಪ್ಪ.

'ಸುಮ್ನಿರೀ ಸಾಕು, ನಿಮ್ಮ ಅವಿವೇಕಕ್ಕೇನು ಕಡಿಮೆ? ಪ್ರಬಂಧ ಬರ್ಯೋಕೆ ಹೇಳಿರೋದು ಸಾಹಿತಿಗಳ ಬಗ್ಗೆ ಅಲ್ಲ ಸಾಹಿತ್ಯದ ಬಗ್ಗೆ ನೀವು ಮೂರೊತ್ತು ಪೇಪರ್ ಓದಿ, ನ್ಯೂಸ್ ಚಾನಲ್ ನೋಡಿ ನೋಡಿ ಹಾಳಾಗೋಗಿದ್ದೀರಾ' ಅಂತ ಇನ್ನೂ ಹೇಳ್ತಾನೇ ಇದ್ದಳು ಅಮ್ಮ. ಅಪ್ಪ ಏನೂ ಕೇಳಿಸಿಕೊಳ್ಳದೆ ಮತ್ತೆ ವಾರ್ತೆಗಳನ್ನು ನೋಡುತ್ತಿದ್ರು.

○ ಸಹ್ಯಾದ್ರಿ

ಲಜ್ಜೆಗೇಡಿ ಕೋಮುವಾದಿಗಳ ಅಧಿಕಾರ ದಾಹದ ಆಟದಲ್ಲಿ ಕರ್ನಾಟಕ ರಾಜ್ಯೋತ್ಸವ ಅರ್ಥಪೂರ್ಣ ಆಚರಣೆ ಆಗಲೇ ಇಲ್ಲ. ಯಾಕೆ? ಏನಿದೆ ಇದರ ಹಿಂದೆ?

ಕರ್ನಾಟಕ ರಾಜ್ಯೋತ್ಸವ ಮತ್ತು ರಾಜಕೀಯ ಬಿಕ್ಕಟ್ಟು

ಜಿ.ಎನ್.ನಾಗರಾಜ್

ಕರ್ನಾಟಕದ ಸುವರ್ಣ ರಾಜ್ಯೋತ್ಸವಕ್ಕೆ ತೆರೆಬಿದ್ದು, ಇಡೀ ವರುಷದ ಸುವರ್ಣೋತ್ಸವದ ಎಲ್ಲ ಕಾರ್ಯಕ್ರಮಗಳ ಮುಗಿತಾಯದ ಸಂಭ್ರಮ ಮುಗಿಲು ಮುಟ್ಟಿ ಕರ್ನಾಟಕದ ಜನತೆಯೆಲ್ಲ ಹೊಸ ಉತ್ಸಾಹದೊಂದಿಗೆ ನಾಡಿನ ಮುಂದಿನ ಪ್ರಗತಿಯ ಮಜಲುಗಳನ್ನು ಸಾಧಿಸಲು ಸ್ಫೂರ್ತಿಯನ್ನು ಪಡೆಯಬೇಕಾಗಿದ್ದ ದಿನ 2007 ರ ನವೆಂಬರ್ 1. ಆದರೆ ಈ 50 ವರ್ಷಗಳಲ್ಲಿ ಪ್ರತಿವರ್ಷವೂ ಆಚರಿಸಿಕೊಂಡು ಬಂದ ಸಂಭ್ರಮಗಳು ರಾಜ್ಯೋತ್ಸವದ ಕೊಡುಗೆಯಾಗಿ ಸರ್ಕಾರ ನೀಡುತ್ತಿದ್ದ ಹೊಸ ಯೋಜನೆಗಳು ಅಥವಾ ಪರಿಹಾರಗಳು, ರಾಜ್ಯೋತ್ಸವ ಭಾಷಣದಲ್ಲಿ ನೀಡುತ್ತಿದ್ದ ಭರವಸೆಗಳು ಕೂಡ ಮಾಯವಾಗಿದ್ದವು. ಕರ್ನಾಟಕದ ರಾಜ್ಯೋತ್ಸವದ ಭಾಷಣ ಮಾಡಿದ್ದು ಕರ್ನಾಟಕದ ಪ್ರತಿನಿಧಿಯಲ್ಲ, ಕೆಲವೇ ವರ್ಷಗಳ ಉಸ್ತುವಾರಿಗಾಗಿ ರಾಜ್ಯಕ್ಕೆ ಬಂದ, ರಾಜ್ಯದ ಜನತೆಯ ಆಸೆ ಆಕಾಂಕ್ಷೆಗಳ ಬಗ್ಗೆ ಜನರ ನಾಡಿಮಿಡಿತದ ಬಗ್ಗೆ ಏನೂ ತಿಳಿಯದ ಕೇಂದ್ರ ಸರ್ಕಾರದ ಪ್ರತಿನಿಧಿ ರಾಜ್ಯಪಾಲರು. ಕರ್ನಾಟಕ ಇಂದು ಎದುರಿಸುತ್ತಿರುವ ರಾಜಕೀಯ ಬಿಕ್ಕಟ್ಟಿನ ಪ್ರತಿಫಲ ಇದು.

ಅದೇ ಸಮಯದಲ್ಲಿ ಕರ್ನಾಟಕ ರಾಜ್ಯದ ಮೂರು ನಾಲ್ಕು ಜಿಲ್ಲೆಗಳಲ್ಲಿ ರಾಜ್ಯೋತ್ಸವವನ್ನು ಕರಾಳದಿನವನ್ನಾಗಿ, ಬಂದ್‌ಗಳಾಗಿ ಆಚರಣೆ ಮಾಡಲಾಗಿದೆ. ರಾಜ್ಯದಿಂದ ಪ್ರತ್ಯೇಕವಾಗುವ, ಪ್ರತ್ಯೇಕ ರಾಜ್ಯವಾಗುವ ಘೋಷಣೆಗಳನ್ನು ಹಾಕಲಾಗಿದೆ.

ರಾಜಕೀಯ

ಜೆಡಿ(ಎಸ್) ಪಕ್ಷ ಶಾಸಕರನ್ನು ಒಳಗೊಂಡ ಒಂದು ಪ್ರಧಾನ ತುಂಡು ತಮ್ಮ ಪಕ್ಷದ ರಾಷ್ಟ್ರೀಯ, ರಾಜ್ಯ ನಾಯಕತ್ವವನ್ನು ದೂರ ಇಟ್ಟು ಬಿಜೆಪಿಯ ಜೊತೆ ಕೈಕುಲುಕಲು ಆರಂಭಿಸಿದೆ. ಆ ದಿನಗಳಿಂದಲೇ ಕರ್ನಾಟಕದ ರಾಜಕೀಯದಲ್ಲಿ ಹಿಂದೆಂದೂ ಕಾಣದ ಅನೈತಿಕತೆ, ಗೊಂದಲಗಳು ಹಾಗೂ ಬಿಕ್ಕಟ್ಟುಗಳು ಉದ್ಭವಿಸಿದವು. ಚರ್ಚೆ, ವೈಚಾರಿಕ ಸಂಘರ್ಷ, ರಾಜ್ಯದ ಒಟ್ಟಾರೆ ಜನತೆಯ ಹಿತಕ್ಕೆ ಸಂಬಂಧಿಸಿದ ಸೈದ್ಧಾಂತಿಕ ವಿಷಯಗಳಿಗೆ ಬದಲಾಗಿ, ಕುಡಿತ, ಕುಣಿತ, ಕೇಕೆಗಳ ನಡುವೆ ರೆಸಾರ್ಟ್‌ಗಳಲ್ಲಿ ನಡೆದ ಅನೈತಿಕ ರಾಜಕೀಯದ ಕೂಸು ಈ ಜಾ-ಕೋ (ಕೋಮುವಾದಿ- ಜಾತ್ಯಾತೀತ) ಮೈತ್ರಿಕೂಟ. ಜನತಾದಳದ ಒಳಗೆ ಜಗಳ, ಬಿಜೆಪಿಯ ಒಳಗೆ ಜಗಳ ಜನತಾದಳ-ಬಿಜೆಪಿಗಳ ನಡುವೆ ಜಗಳ ಎಂಬ ಜಗಳಗಳ ಕೊಂಪೆಯಾದ ಸರ್ಕಾರ ಗೊಂದಲಗಳ ನಡುವೆಯೇ ಹೇಗೋ ಬದುಕಿಕೊಂಡು ಬಂದದ್ದು ಈಗ ಇತಿಹಾಸ.

ರಾಜಕೀಯ ಬಿಕ್ಕಟ್ಟಿನ ಹಿಂದೆ ರಾಜಕೀಯ ಹುನ್ನಾರ

ಈ ಜಾ-ಕೋ ಮೈತ್ರಿ ಮುರಿದು ಬೀಳುವ ಕ್ರಿಯೆ ಮತ್ತು ಮರು ಮೈತ್ರಿಯನ್ನು ಮಾಡಿಕೊಳ್ಳುವಲ್ಲಿ ನಡೆದ ಅಸಹ್ಯಗಳು ರಾಜ್ಯದ ಜನರಲ್ಲಿ ವಾಕರಿಕೆ ಬರುವಂತೆ ಮಾಡಿವೆ. ಈ ರೀತಿ ಜನರ ಗಮನವೆಲ್ಲಾ ರಾಜಕೀಯ ನಾಟಕದ ಕ್ಯಾಬರೆ ನರ್ತನದ ಮೇಲೆ ನೆಟ್ಟಿರುವಾಗಲೇ ಅದರ ಒಳಗೊಳಗೇ ಜನತೆಯ ಬದುಕನ್ನು ಹಾಳುಗೆಡುವುವ ಅನೇಕ ರಾಜಕೀಯ ಹುನ್ನಾರಗಳು ನಡೆಯುತ್ತಿವೆ. 2005ರ ಅಂತ್ಯದಲ್ಲಿ ಜೆಡಿ(ಎಸ್)-ಕಾಂಗ್ರೆಸ್ ಮೈತ್ರಿಯನ್ನು ಮುರಿಯಲು ಹಾಗೂ ಒಡೆದು ಹೋಗುತ್ತಿದ್ದ ಬಿಜೆಪಿಯನ್ನು ಉಳಿಸಿಕೊಳ್ಳಲು ಹಾಗೂ ಅಧಿಕಾರಕ್ಕೆ ತರಲು ಷಡ್ಯಂತ್ರವನ್ನು ರೂಪಿಸಿದ್ದು ಆರೆಸ್ಸೆಸ್. ಮೈತ್ರಿ ಮುರಿದು ಬೀಳುವ ಮೊದಲೇ ಮುರಿದು ಬೀಳದಂತೆ ಒತ್ತಡವನ್ನು ಹೇರಲು ಪತ್ರಿಕೆ-ಮಾಧ್ಯಮಗಳಲ್ಲಿ ಸಾಹಿತಿಗಳಾಗಿರುವ ತನ್ನ ಭಂಟರನ್ನು ಕಣಕ್ಕಿಳಿಸಿ ಹತ್ತು ತಿಂಗಳಿಗೂ ಹೆಚ್ಚು ಕಾಲ ವಚನ ಭ್ರಷ್ಟತೆ ಎಂಬ ದೊಡ್ಡ ಹುಯಿಲೆಬ್ಬಿಸಿದ್ದು ಆರೆಸ್ಸೆಸ್. ಆರೆಸ್ಸೆಸ್‌ನ ಕೇಂದ್ರ ಕಛೇರಿಯಲ್ಲಿ ಇತರ ಪಾರ್ಟಿ, ಗೋಷ್ಠಿಗಳಲ್ಲಿ ಅನೇಕ ಸಣ್ಣ ಪುಟ್ಟ ಸಭೆಗಳ ವರದಿಗಳಿವೆ. ದೇವೇಗೌಡರ ಒತ್ತಡ, ಹಟ ಹಾಗೂ ತಂತ್ರಗಳಿಂದ ಮೈತ್ರಿ ಮುರಿದುಬಿದ್ದು ಬಿಜೆಪಿ 'ಧರ್ಮಯುದ್ಧ' ವನ್ನಾರಂಭಿಸಿದಾಗ ಆ ವೀರಾಧಿವೀರರೆಲ್ಲಾ ಯುದ್ಧದ ಕಣದಿಂದ ಓಡಿ ಬರುವಂತೆ ಮಾಡಿದ್ದು ಮತ್ತೆ ಅವಕಾಶ ಸಿಕ್ಕ ಕೂಡಲೇ **ಜೆಡಿ(ಎಸ್)-ಬಿಜೆಪಿಗಳ ನಡುವೆ ಚೌಕಾಶಿ, ಕೊಸರಾಟಗಳ ದಲ್ಲಾಳಿಯಾಗಿ ಮರು ಮೈತ್ರಿಯನ್ನು ಏರ್ಪಡಿಸಿದ್ದು, ದೇವೇಗೌಡರ ಹಠ, ತಂತ್ರಗಳಿಗೆ ಪ್ರತಿತಂತ್ರ ರೂಪಿಸಿದ್ದು, ಆರೆಸ್ಸೆಸ್ ಎಂಬ ಬಿಜೆಪಿ ಮೇಲೆ ಸವಾರಿ ಮಾಡುವ ಅದೃಶ್ಯ ಸವಾರ.**



ಧಾರವಾಡದಲ್ಲಿ ಆರ್‌ಎಸ್‌ಎಸ್ ರಾಷ್ಟ್ರಮಟ್ಟದ ಬೈಠಕ್ - ದೇಶಕ್ಕೆ ಮತ್ತೆ ಕಾದಿದೆ ಗಂಡಾಂತರ

ಆರೆಸ್ಸೆಸ್‌ನ ಈ ಕುತಂತ್ರಗಳ ಹಿಂದೆ ದೊಡ್ಡ ಷಡ್ಯಂತ್ರವೇ ಇದೆ. ಇಡೀ ಭಾರತವನ್ನು ಕೋಮುವಾದೀಕರಣಗೊಳಿಸಿ ಭಾರತದ ಮೇಲೆ ಸಂಘ ಪರಿವಾರದ ಸರ್ವಾಧಿಕಾರವನ್ನು ಹೇರುವುದಿರಲಿ, ಈಗಿರುವ ಬಿಜೆಪಿಯ ಶಕ್ತಿಯನ್ನು ಉಳಿಸಿಕೊಳ್ಳಬೇಕೆಂದರೂ ಕೂಡ ಗೋವಲಯವೆಂದು ಕರೆಯುವ ಹಿಂದಿ ರಾಜ್ಯಗಳಿಗೆ ಸೀಮಿತವಾಗಿರುವ ತನ್ನ ಶಕ್ತಿಯನ್ನು ವಿಸ್ತರಿಸಿಕೊಳ್ಳಬೇಕು. ಅದಕ್ಕೆ ದಕ್ಕಬಲ್ಲ ದುರ್ಬಲ ರಾಜಕೀಯ ಶಕ್ತಿಗಳನ್ನು ಉಳ್ಳ ರಾಜ್ಯ ಕರ್ನಾಟಕವೇ ಎಂದು ಸಂಘ ಪರಿವಾರ ಹಲವು ವರ್ಷ ಹಿಂದೆಯೇ ಗುರುತಿಸಿದೆ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕರಾವಳಿಯಲ್ಲಿ, ಮಲೆನಾಡಿನಲ್ಲಿ, ಈದ್ಗಾ ಮೈದಾನ, ಬಾಬಾಬುಡನ್‌ಗಿರಿಗಳ ವಿಷಯದಲ್ಲಿ ಕೋಮು ಕಿಚ್ಚನ್ನು ಹಬ್ಬಿಸುವುದರಲ್ಲಿ, ಈ ಪ್ರದೇಶದಲ್ಲಿ ಪಟ್ಟ ಭದ್ರ ಭೂ ಮಾಲಕ ಶಕ್ತಿಗಳು, ಭೂ ಮಾಲಕ ಮೂಲದ ಬಂಡವಾಳಶಾಹಿ ಕುಟುಂಬಗಳು, ಗೂಂಡಾ ಪಡೆಗಳು ಗಣಿ ಮಾಲೀಕರಂತಹ ದಿಢೀರ್ ಶ್ರೀಮಂತರುಗಳನ್ನು ಸೆಳೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ಕರಾವಳಿ, ಮಲೆನಾಡು ಮತ್ತು ಮುಂಬಾಯಿ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ರಾಜಕೀಯ ನೆಲೆಗಳನ್ನು ಪ್ರಭಾವವನ್ನು ಪಡೆದುಕೊಂಡಿದೆ.

ದಕ್ಷಿಣ ಕರ್ನಾಟಕದಲ್ಲಿ ವೈಫಲ್ಯ

ಆದರೆ ಇಲ್ಲಿಯವರೆಗೂ ದಕ್ಷಿಣ ಕರ್ನಾಟಕದಲ್ಲಿ ನೆಲೆಯೂರುವ ಬಿಜೆಪಿಯ ಪ್ರಯತ್ನ ಸಫಲವಾಗಿಲ್ಲ. 1989ರ ಚುನಾವಣೆಯ ಮುಂಚೆ ರಾಮಪಾದುಕೆ ರಾಮಜ್ಯೋತಿಗಳ ಹೆಸರಿನಲ್ಲಿ ಕೋಲಾರ, ಚನ್ನಪಟ್ಟಣ, ರಾಮನಗರ, ಮುಂತಾದೆಡೆ ಗ್ರಾಮಾಂತರ ಪ್ರದೇಶಗಳಲ್ಲಿ ಬೆಂಗಳೂರು ನಗರದಲ್ಲಿ ಕೋಮು ಗಲಭೆಗಳನ್ನು ಸಂಘಟಿಸಿದರೂ ಕೂಡ ಕೆಲವು ತಾತ್ಕಾಲಿಕ ಪ್ರಯೋಜನವಾಯಿತೇ ಹೊರತು, ಬೆಂಗಳೂರು, ಮೈಸೂರುನಗರಗಳ ಹೊರತಾಗಿ ಬಿಜೆಪಿಗೆ ಬೇರೂರಲು ಆಗಲಿಲ್ಲ. ಇಲ್ಲಿಯ ಹಳ್ಳಿಗಳ ಸಾಮಾಜಿಕ ರಚನೆ, ಭೂ ಹಂಚಿಕೆಯ ಸ್ವರೂಪದಲ್ಲಿ ಪಾಳೆಯಗಾರಿ ಭೂ ಮಾಲಕರ ಅತಿಯಾದ ಅಟ್ಟಹಾಸ ದೌರ್ಜನ್ಯಗಳಿಗೆ ಸ್ಥಾನವಿಲ್ಲದ್ದರಿಂದಾಗಿ, ಸ್ವತಂತ್ರ ಪ್ರವೃತ್ತಿಯ ಹಾಗೂ ರಾಜಕಾರಣದಲ್ಲಿ ಆಸಕ್ತಿಯಿರುವ ವ್ಯಾಪಕ ಮಧ್ಯಮವರ್ಗದ ರೈತರ ಪ್ರಾಬಲ್ಯದಿಂದಾಗಿ ನೆಮ್ಮದಿಯ ಜೀವನದ ತುಡಿತದಿಂದಾಗಿ ಜನರ ನಡುವೆ ದ್ವೇಷ ನೆಲೆಯೂರಿಸುವುದು ಸಾಧ್ಯವಾಗಿಲ್ಲ.

ಈಗ ಜೆಡಿ(ಎಸ್) ಪಕ್ಷಕ್ಕೆ ಈ ಪ್ರದೇಶದಲ್ಲಿರುವ ಭದ್ರವಾದ ನೆಲೆಯನ್ನು ಬಳಸಿ ಜೆಡಿ(ಎಸ್) ಪಕ್ಷದ ಬೆಂಬಲದ ಆಧಾರವಾದ ವಕ್ಕಲಿಗ ರೈತರು ಮತ್ತು ಇತರ ಜನರ ನಡುವೆ ತಮ್ಮ ಪ್ರಭಾವವನ್ನು ಹಬ್ಬಿಸುವುದು ಸಂಘ ಪರಿವಾರದ ದೀರ್ಘಕಾಲೀನ ತಂತ್ರ. ಹೀಗಾಗಿ ಆರೆಸ್ಸೆಸ್‌ನ ಸಂಘ ಚಾಲಕರುಗಳಿಗೆ ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದು, ಆಗದಿರುವುದು ಎರಡೂ ಕೂಡ ಲಿಂಗಾಯುತರ ನಡುವೆ ಲಿಂಗಾಯಿತ ಪ್ರಧಾನ ಕರ್ನಾಟಕದ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ಇನ್ನಷ್ಟು ವಿಸ್ತರಿಸುವ ಸಾಧನವಾದರೆ, ಜೆಡಿ(ಎಸ್) ಜೊತೆಗಿನ ಮೈತ್ರಿ ಅದಕ್ಕಿಂತ ಮುಖ್ಯವಾದದ್ದು -ವಕ್ಕಲಿಗ ರೈತರ ನಡುವೆ ರೈತರ ನಡುವೆ, ಬೇರಿಳಿಸುವುದು ಕರ್ನಾಟಕದಲ್ಲಿ ಏಕಪಕ್ಷದ ಆಡಳಿತವನ್ನು ಸ್ಥಾಪಿಸಲು ಅತ್ಯಂತ ಅಗತ್ಯ. ಆದಿ ಚುಂಚನಗಿರಿ ಮಠಾಧೀಶರನ್ನು ವಿಶ್ವ ಹಿಂದೂ ಪರಿಷತ್ ವೇದಿಕೆಗಳಲ್ಲಿ ಸಾಕಷ್ಟು ದುರ್ಬಳಿಕೆ ಮಾಡಿಕೊಂಡಿದ್ದರೂ ವಿರಾಟ ಹಿಂದೂ ಸಮಾವೇಶಗಳನ್ನು ಅದ್ದೂರಿಯಾಗಿ ನಡೆಸಿದ್ದರೂ ಇನ್ನೂ ಸಾಧ್ಯವಾಗಿಲ್ಲ. ಅದನ್ನು ಜೆಡಿ(ಎಸ್) ಜೊತೆಯಲ್ಲಿದ್ದು ಕೆಲವು ಕಾಲ, ಕೊನೆಗೆ ತಮ್ಮ ಧೃತರಾಷ್ಟ್ರಾಲಿಂಗನದಲ್ಲಿ ಜೆಡಿ(ಎಸ್) ನ್ನು ವಿಭಜಿಸಿ, ಕರಗಿಸಿ ಸಾಧಿಸಬೇಕೆನ್ನುವುದು ಅವರ ಹುನ್ನಾರ. ಕಾದಂಬರಿಕಾರ ಎಸ್.ಎಲ್.ಭೈರಪ್ಪನವರ ವಿವಾದಪೂರಿತ 'ಆವರಣ'ದಲ್ಲಿ ಪ್ರದಾನ ಪಾತ್ರ ಲಕ್ಷ್ಮಿ ಎಂಬ ಒಕ್ಕಲಗಿತ್ತಿ ಎಂಬುದು ಕೇವಲ ಆಕಸ್ಮಿಕವಲ್ಲ. ಟಿಪ್ಪು ವಿವಾದವನ್ನು ಹುಟ್ಟುಹಾಕಿದ್ದು, ಮತ್ತೆ ಮತ್ತೆ ಕೆದಕುತ್ತಿರುವುದು, ನಾಗಮಂಗಲದಲ್ಲಿ ಕೋಮು ಗಲಭೆಗಳು, ಮಂಡ್ಯದ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಮುಖ್ಯಸ್ಥಾನದಲ್ಲಿ ಕುಳ್ಳಿರಿಸಿರುವುದು ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು.

ಮರುಮೈತ್ರಿಯಿಂದ ಸರ್ಕಾರರಚಿಸಲು ಸಾಧ್ಯವಾದರೆ ಈ ಪ್ರದೇಶದ ರಾಜಕೀಯ ಮುಖಂಡರುಗಳನ್ನು ಒಂದಷ್ಟು ಹೊಡೆದುಕೊಳ್ಳುವುದರ ಜೊತೆಗೆ ಒಕ್ಕಲಿಗ ಅಧಿಕಾರಿ ಬುದ್ಧಿಜೀವಿಗಳ ಮೇಲೆ ಭಾಗಶಃ ಪ್ರಭಾವವನ್ನು ಸ್ಥಾಪಿಸಲು ಸಾಧ್ಯವಾಗುವುದೂ ಕೂಡಾ ಒಂದು ಪ್ರಮುಖ ಗುರಿ.

ಇವೆಲ್ಲಕ್ಕಿಂತ ದೊಡ್ಡ ಸಾಧನೆ ಜನತಾದಳವನ್ನು ಇನ್ನಷ್ಟು ಕುಗ್ಗಿಸುವುದು. ಇಲ್ಲವಾಗಿಸುವುದು ರಾಜ್ಯದಲ್ಲಿ ಎರಡು ಪಕ್ಷಗಳ ಆಡಳಿತಕ್ಕೆ ಎಡೆ ಮಾಡಿಕೊಡುತ್ತದೆ. ಇದು ಬಿಜೆಪಿಗೆ ಬಹಳ ದೊಡ್ಡ ಲಾಭ. ಕರ್ನಾಟಕವನ್ನು ಹಿಂದಿ ರಾಜ್ಯಗಳ ಪಟ್ಟಿಗೆ ಸೇರಿಸಿಕೊಳ್ಳಬಹುದೆಂಬ ಹುನ್ನಾರ ಇದರಲ್ಲಿ ಅಡಗಿದೆ.

ಚಿಗುರಬೇಕಾಗಿದ್ದ ಕರ್ನಾಟಕತ್ವದ ಹೊಸ ಹುಮ್ಮಸ್ಸನ್ನು ಕೊಂದು ಹಾಕಿದ ಸಂಘ ಪರಿವಾರ

ಅಧಿಕಾರ ಹಸ್ತಾಂತರವೆಂಬ ಗೊಂದಲ ಹಲವು ತಿಂಗಳುಗಳ ಕಾಲ ತಾರಕಕ್ಕೇರಿ ರಾಜ್ಯದ ಜನತೆಯ ಅನೇಕ ತುರ್ತು ಸಮಸ್ಯೆಗಳನ್ನು ತಿಂದು ಹಾಕಿತು. ಸುವರ್ಣ ರಾಜ್ಯೋತ್ಸವವನ್ನು ಮುಳುಗಿಸಿತು. 50 ವರ್ಷಗಳಲ್ಲಿ ರಾಜ್ಯ ನಡೆದು ಬಂದ ದಾರಿಯ ಕಡೆ ಕಣ್ಣು ಹೊರಳಿಸಿ ನೋಡಿ, ಚಿಂತನೆ ಮಂಥನಗಳ ನಡುವೆ ಮುಂದಿನ ದಾರಿಯನ್ನು ರೂಪಿಸಿಕೊಳ್ಳುವುದಕ್ಕೆ ಅವಕಾಶವಾದರೂ ಎಲ್ಲಿ? ಕನ್ನಡದ, ಕರ್ನಾಟಕದ ಚೈತನ್ಯ ಕರ್ನಾಟಕ ಏಕೀಕರಣ, ದೇಶದ ಸ್ವಾತಂತ್ರ್ಯದ ಆ ಉತ್ತುಂಗ ಶಿಖರಗಳನ್ನು ತಮ್ಮ ನೆನಪಿನಲ್ಲಿಯೇ ಏರಿ, ಈ ಪರ್ವತಾರೋಹಣದಲ್ಲಿ ಹೊಸ ದಾರಿಗಳನ್ನು ಹುಡುಕಿದ ಕರ್ನಾಟಕತ್ವದ ಕುಲಪುರೋಹಿತ, ಕನ್ನಡದ ಕಣ್ವ ಕನ್ನಡದ ರಾಷ್ಟ್ರಕವಿಗಳನ್ನು ಅವರ ವಿಚಾರಗಳನ್ನು ಮತ್ತೆ ಮನನ ಮಾಡಿಕೊಂಡು ಹೊಸ ಶಿಖರಗಳನ್ನು ಏರುವ ಸ್ಫೂರ್ತಿಯಿಂದ ದೀಪ್ತರಾಗುವ ಸಂದರ್ಭವನ್ನು ಪೂರ್ಣವಾಗಿ ಕೊಂದೇ ಹಾಕಿತು, ಈ ಅನೈತಿಕ ರಾಜಕೀಯ. ಆರೆಸ್ಸೆಸ್ ಎಂಬ ಹಿಂದಿ-ಹಿಂದೂ- ಹಿಂದೂಸ್ಥಾನ್ ಘೋಷಣೆಯ, ವಿವಿಧ ರಾಜ್ಯಗಳ ಜನತೆಯ ದೇಸಿ, ಜವಾರಿ ಚೈತನ್ಯವನ್ನು ಮಟ್ಟ ಹಾಕುವ ಮೂಲ ಉದ್ದೇಶವುಳ್ಳ ಸಂಘ ಪರಿವಾರದ ಭಂಟರು ಪ್ರಮುಖವಾಗಿ ತಾವು ಸೇರಿರುವ ಪತ್ರಿಕೆ, ಮಾಧ್ಯಮಗಳ ಮೂಲಕ ಸಾಂಸ್ಕೃತಿಕ ಲೋಕದವರನ್ನು ದಿಕ್ಕು ತಪ್ಪಿಸಿ ಕರ್ನಾಟಕದ ಚೈತನ್ಯ ಮತ್ತೆ ಏಳುವ, ಕರ್ನಾಟಕ ರಾಜ್ಯದ ಸ್ವಾಯತ್ತತೆಯ, ಕನ್ನಡ ಭಾಷೆಯ ಬೆಳವಣಿಗೆಯ ಹಕ್ಕನ್ನೂ ಪ್ರತಿಪಾದಿಸುವ ಅವಕಾಶವನ್ನು ಕತ್ತು ಹಿಸುಕಿ ಹಸ್ತಾಂತರದ ಗೊಂದಲದ ಗೂಡಾಗಿಸಿದರು. ತಮ್ಮ ಉದ್ದೇಶವನ್ನು ಸಾಧಿಸಿಕೊಂಡರು ಎಂಬ ವಿಷಯ ಎಲ್ಲರಿಂದಲೂ ಮರೆಯಾಗಿದೆ. ಕೇವಲ ಒಂದು ಹಳಹಳಿಯಾಗಿ ಕೆಲವರ ಮನಸ್ಸಿನಲ್ಲಿ ಗೂಡಾಗಿದೆ.



ಮಂಗಳೂರು ವಿಶೇಷ ಆರ್ಥಿಕ ವಲಯ
ಲಾಭವೇನು? ನಷ್ಟವೇನು?

ಸಾಂಸ್ಕೃತಿಕವಾಗಿ ಮಂಗಳೂರಿಗೆ ರಾಜ್ಯದಲ್ಲಿ ವಿಶೇಷ ಸ್ಥಾನ ಮಾನ ಇದೆ. ಇಲ್ಲಿನ ಭಾಷೆ, ಸಂಸ್ಕೃತಿ, ಪರಂಪರೆ ವಿಶಿಷ್ಟ. ಆಚರಣೆಗಳೂ ಅಷ್ಟೇ ವೈವಿಧ್ಯಮಯ. ರಾಜ್ಯದ, ದೇಶದ ಅಭಿವೃದ್ಧಿಗೆ ನೀಡಿದ ಕೊಡುಗೆಯೂ ಅನನ್ಯ.

ಬೀಡಿ, ಹೆಂಚಿನ ಕಾರ್ಖಾನೆ, ಗೋಡಂಬಿ ಫ್ಯಾಕ್ಟರಿಯಿಂದ ಹಿಡಿದು ಹೋಟೆಲ್ ಉದ್ಯಮದವರೆಗೆ ಕರಾವಳಿಯದ್ದೇ ಅಧಿಪತ್ಯ. ಶಿಕ್ಷಣರಂಗದಲ್ಲಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕರಾವಳಿ ಜನರಿಗೆ ಸರಿಸಾಟಿ ಯಾರಿಲ್ಲ ಎಂಬಲ್ಲಿ ಪಕ್ಕ ವೃತ್ತಿ ಪರತೆ ಇದೆ.

ರೈಲು, ವಿಮಾನ, ಬಂದರು, ಹೆದ್ದಾರಿ ಸೇರಿದಂತೆ ಎಲ್ಲ ಮೂಲಭೂತ ಸೌಕರ್ಯವೂ ಕರಾವಳಿ ಜನರ ಪಾಲಿಗೆ ಸಿಕ್ಕಿದೆ. ಹಾಗಾಗಿ ಕೇರಳ, ಮುಂಬೈ, ಗಲ್ಫ್‌ಗೆ ಇಲ್ಲಿನ ಜನ ನಿಕಟ ಸಂಪರ್ಕ ಇಟ್ಟಿಕೊಂಡಿದ್ದಾರೆ, ಆರ್ಥಿಕ ಮೂಲವನ್ನು ಅಭಿವೃದ್ಧಿಪಡಿಸಿದ್ದಾರೆ.

ಕೈಗಾರಿಕಾ ಕ್ಷೇತ್ರದಲ್ಲಿ : ಮಂಗಳೂರು ಕೈಗಾರಿಕಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದೆ. ಮಂಗಳೂರು ತೈಲ ಸಂಸ್ಕರಣಾ ಘಟಕ ಎಂಆರ್‌ಪಿಎಲ್, ಮಂಗಳೂರು ರಸಗೊಬ್ಬರ ಕಂಪನಿ ಎಂ.ಸಿ.ಎಫ್. ನಾಗಾರ್ಜುನ ಉಷ ವಿದ್ಯುತ್ ಸ್ಥಾವರ, ಬಿಎಎಸ್‌ಎಫ್ ಸೇರಿದಂತೆ ಹಲವು ಕೈಗಾರಿಕಾ ಘಟಕಗಳು, ಐಟಿ ಪಾರ್ಕ್, ಇನ್‌ಫೋಸಿಸ್‌ನಂತಹ ಐಟಿ ಉದ್ಯಮಗಳು ಇಲ್ಲಿವೆ. ಯಯ್ಯಾಡಿ ಹಾಗೂ ಬೈಕಂಪಾಡಿಯಲ್ಲಿ ಬೃಹತ್ ಕೈಗಾರಿಕಾ ಪ್ರದೇಶವಿದೆ.


ಎಸ್‌ಇಝಡ್: ಮಂಗಳೂರಿನಲ್ಲಿ ಇಷ್ಟೆಲ್ಲಾ ಇದ್ದರೂ ಇನ್ನಷ್ಟು ಕೈಗಾರಿಕೆಗಳ ಸ್ಥಾಪನೆಗೆ ವೇದಿಕೆ ಸಿದ್ಧವಾಗಿದೆ. ಅವುಗಳಲ್ಲಿ ಎಸ್‌ಇಝಡ್ ಪ್ರಮುಖವಾದದ್ದು. ಎಸ್‌ಇಝಡ್ ಅಧಿಕಾರಿಗಳ ಪ್ರಕಾರ ಈ ಯೋಜನೆಗೆ ಅಂದಾಜು 2500 ಎಕರೆ ಭೂಮಿಯ ಅಗತ್ಯವಿದೆ. ಇಲ್ಲಿಯವರೆಗೆ 1453 ಎಕರೆ ಭೂಮಿ ಸ್ವಾಧೀನಪಡಿಸಲಾಗಿದೆ. 266 ಎಕರೆ ಸರ್ಕಾರಿ ಜಮೀನು ಇದೆ. ಇನ್ನು 721 ಎಕರೆ ಭೂಮಿ ಬೇಕಿದ್ದು, ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ.

ಎಸ್‌ಇಝಡ್‌ನಲ್ಲಿ ಎಂಆರ್‌ಪಿಎಲ್‌ನ ಎಲ್‌ಎನ್‌ಜಿ ಸ್ಥಾವರ ಸ್ಥಾಪನೆಯಾಗಲಿದೆ. ಇದಲ್ಲದೆ ಗಂಜಿಪುರದಲ್ಲಿ ಇಪಿಐಪಿ ಪಾರ್ಕ್‌ಗೆ 201 ಎಕರೆಯಲ್ಲಿ ವೇದಿಕೆ ಸಿದ್ಧವಾಗಿದೆ. ಇನ್ನು ಭಂಟ್ವಾಳದ ತುಂಬೆ ಪ್ರದೇಶದಲ್ಲಿ ಉದ್ಯಮಿಯೊಬ್ಬರು ಬಿಎ ಟೆಕ್‌ಪಾರ್ಕ್ ನಿರ್ಮಿಸುತ್ತಿದ್ದಾರೆ.

ರಾಜ್ಯದಲ್ಲಿ ತಲೆ ಎತ್ತಲಿರುವ 8 ಎಸ್‌ಇಝಡ್‌ಗಳಲ್ಲಿ ಇದೂ ಒಂದು. ನಂದಗುಡಿ, ರಾಮನಗರ, ಪಡುಬಿದರೆ ಎಸ್‌ಇಝಡ್‌ಗೆ ಮಂಜೂರಾತಿ ದೊರೆತಿದೆ. ಶ್ರೀರಂಗಪಟ್ಟಣ, ಹಾಸನ, ಪಣಂಬೂರು, ಬಗಲೂರಿಗೆ ಮಂಜೂರಾತಿ ಸಿಗಬೇಕಷ್ಟೇ. ಎಲ್ಲವೂ ಸುಸೂತ್ರವಾಗಿ ಆಗಿದ್ದರೆ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಮಂಗಳೂರು ಎಸ್‌ಇಝಡ್‌ಗೆ ಪ್ರಧಾನಿ ಚಾಲನೆ ನೀಡುತ್ತಿದ್ದರು.

ವಿಳಂಬವೇಕೆ?: ಎಸ್‌ಇಝಡ್‌ಗೆ ಅಗತ್ಯವಿರುವ 750 ಎಕರೆ ಭೂಮಿ ಸ್ವಾಧೀನ ಪ್ರಕ್ರಿಯೆಗೆ ಈಗ ವ್ಯಾಪಕ ವಿರೋಧ ವ್ಯಕ್ತವಾಗಿದೆ.ಕೃಷಿ ಭೂಮಿ ಬಿಟ್ಟುಕೊಡಲು ಸಿದ್ಧವಿಲ್ಲ ಎಂದು ಅಲ್ಲಿನ ರೈತರು ಹೇಳಿದ್ದಾರೆ. ಪೆರ್ಮುದೆ, ತೆಂಕ ಎಕ್ಕಾರು, ಕುತ್ತೆತ್ತರು, ದೇಲಂತ ಬಿಟ್ಟು ಗ್ರಾಮಗಳ ರೈತರು ಸೇರಿ ಕೃಷಿ ಭೂಮಿ ಸಂರಕ್ಷಣಾ ಸಮಿತಿ ರಚಿಸಿದ್ದಾರೆ. ಈ ಸಮಿತಿ ಸರ್ವೆ ಕಾರ್ಯಗಳಿಗೆ ಅಡ್ಡಿ ಮಾಡಿದೆ.

ಸಮಿತಿಯ ವಾದವೇನು? ಎಸ್‌ಇಝಡ್‌ಗೆ ಸ್ವಾಧೀನಕ್ಕೆ ಒಳಪಡುವ 2035 ಎಕರೆ ಪ್ರದೇಶದೊಳಗೆ ಬರುವ ಈ ನಾಲ್ಕು ಗ್ರಾಮಗಳ ಗ್ರಾಮ ಪಂಚಾಯಿತಿಗಳು, ಭೂ ಸ್ವಾಧೀನ ಪ್ರಕ್ರಿಯೆಯ ವಿರುದ್ಧ ನಿರ್ಣಯ ಕೈಗೊಂಡಿದೆ. ರೈತರ ಒಪ್ಪಿಗೆ ಪಡೆಯದೆ ಸ್ವಾಧೀನ ಮಾಡಬಾರದು ಗ್ರಾಮೀಣ ರೈತರ ಹಾಗೂ ಬಡ ಜನರ ಭೂಮಿಯನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಉದ್ಯಮಿಗಳಿಗೆ ನೀಡುವ ಅಧಿಕಾರಿಗಳು ಈ ಪ್ರಕ್ರಿಯೆಯನ್ನು



ಸ್ಥಗಿತಗೊಳಿಸಬೇಕು. ಇದು ಹೋರಾಟ ಸಮಿತಿಯ ವಾದ. ಈ ಸಮಿತಿಯ ಪ್ರಕಾರ, ಎಸ್‌ಇಝಡ್‌ನಿಂದ ಉದ್ಯೋಗ ಸೃಷ್ಟಿಯಾಗುತ್ತಿಲ್ಲ, ಜನರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಿಲ್ಲ. ಹಾಗಾಗಿ ಎಸ್‌ಇಝಡ್ ಬದಲು ವಿಶೇಷ ಕೃಷಿ ವಲಯ ಸ್ಥಾಪನೆಯಾಗಲಿ ಎಂಬ ವಾದ ಮುಂದಿಟ್ಟಿವೆ.

ಹೋರಾಟದ ಹಾದಿ ಹಿಂದಿರುವ ಕೈಗಳು: ಎಸ್‌ಇಝಡ್ ಹೋರಾಟ ಈಗ ರಾಜ್ಯದ ದೇಶದ ಗಮನ ಸೆಳೆಯುತ್ತಿದೆ. ಮಾಧ್ಯಮಗಳು ನೀಡುವ ವರ್ಣರಂಜಿತ ಚಿತ್ರವೂ ಸೇರಿಕೊಂಡಿದೆ. ಹಾಗಾಗಿ ಈ ಹೋರಾಟಕ್ಕೆ ಸೇರಲು, ಪ್ರಚಾರ ಪಡೆದುಕೊಳ್ಳಲು ನಾನಾ ಸ್ವಯಂ ಸೇವಾ ಸಂಘಟನೆಗಳು ಮುಂದೆ ಬಂದಿವೆ. ವಿದೇಶಿ ಸಂಸ್ಥೆಗಳ ಹಣ ಪಡೆಯುತ್ತಿರುವ ನಾಗರೀಕ ಸೇವಾ ಟ್ರಸ್ಟ್, ವೆಲೆರಡೋ ಮುಂತಾದ ಸಂಸ್ಥೆಗಳು, ಕರ್ನಾಟಕ ಕೃಷಿಕರ ವೇದಿಕೆ, ಹೀಗೆ ಸುಮಾರು 60 ಸಂಘಟನೆಗಳು ಈ ಹೋರಾಟದಲ್ಲಿ ಪಾಲ್ಗೊಂಡಿವೆ.

ಇತ್ತೀಚಿನ ದಿನಗಳಲ್ಲಿ ಈ ಹೋರಾಟ ಪ್ರಬಲವಾಗುತ್ತಿದೆ. ಯಾವುದೇ ಸಮರ್ಪಕ ಬೇಡಿಕೆ ಇಲ್ಲದ, ವಿರೋಧಕ್ಕೆ ವೈಜ್ಞಾನಿಕ ಕಾರಣ ನೀಡದ ಈ ಹೋರಾಟವನ್ನು ಜ್ವಲಂತವಾಗಿಡಲು ಈ ಸಂಘಟನೆಗಳು ಶಕ್ತಿ ಮೀರಿ ಪ್ರಯತ್ನ ನಡೆಸುತ್ತಿವೆ.

ಮಂಗಳೂರು ಅಭಿವೃದ್ಧಿ ಆಗಬೇಕು. ಪರಿಸರಕ್ಕೆ ಹಾನಿಯಾಗದ ಕೈಗಾರಿಕೆಗಳು ಬರಬೇಕು. ಹಾಗೆಯೇ ಜನರ ಬದುಕು ಅಭದ್ರವಾಗದಂತೆ ಸೂಕ್ತ ಪರಿಹಾರ, ಪರ್ಯಾಯ ವ್ಯವಸ್ಥೆಯಾಗಬೇಕು. ಈ ಮೂಲಕ ನೇರ, ಪರೋಕ್ಷ ಉದ್ಯೋಗಗಳು ಸೃಷ್ಟಿ ಆಗಬೇಕು ಎಂಬುದನ್ನು ಜನತೆ ನಿರೀಕ್ಷಿಸುತ್ತಾರೆ. ಮಂಗಳೂರಿಗೆ ಎಂಆರ್‌ಪಿಎಲ್ ಬಂದ ನಂತರ ಎಷ್ಟೋ ಬದಲಾವಣೆ ಕಂಡಿದೆ. ಕಳೆದ 5-6 ವರ್ಷಗಳಲ್ಲಿ ಮಂಗಳೂರಿನ ಚಿತ್ರಣವೇ ಬದಲಾಗಿದೆ. ರಫ್ತು ಪ್ರಮಾಣ ಗಣನೀಯ ಏರಿಕೆಯಾಗಿದ್ದು, ವಿದೇಶಿ ವಿನಿಯಮ ದಾಖಲೆ ಪ್ರಮಾಣಕ್ಕೆ ಬಂದಿದೆ. ಲಕ್ಷಾಂತರ ಜನರಿಗೆ ಪರೋಕ್ಷ ಉದ್ಯೋಗ ಸಿಕ್ಕಿದೆ.

ದಾರಿತಪ್ಪಿದೆ: ಆದರೆ ಎಸ್‌ಇಝಡ್ ವಿರೋಧಿ ಹೋರಾಟ ಸಮಿತಿಯ ಚಳವಳಿ ಯಾವುದೇ ಅರ್ಥಪೂರ್ಣ ಬೇಡಿಕೆ ಮಂಡಿಸಿಲ್ಲ. ಇವೆಲ್ಲಕ್ಕಿಂತ ಮಿಗಿಲಾಗಿ ನಕ್ಸಲ್ ಪರ ಬುದ್ಧಿಜೀವಿಗಳು, ಸಂಘಟನೆಗಳು ಆ ಹೋರಾಟಕ್ಕೆ ತೆರೆಮರೆಯಲ್ಲಿ ಬೆಂಬಲ ನೀಡುತ್ತಿದ್ದಾರೆ. ಈ ಹೋರಾಟವನ್ನು ಮತ್ತೊಂದು 'ನಂದಿಗ್ರಾಮ' ಮಾದರಿ ಹೋರಾಟ ನಡೆಸುವ ಪ್ರೇರಣೆ ನೀಡಿದ್ದಾರೆ.

ಈ ಸಂಘಟನೆಯ ಆಶ್ರಯದಲ್ಲಿ ಕೆಲವು ವಿಚಾರ ಸಂಕಿರಣಗಳು ನಡೆದಿವೆ. ಈ ವಿಚಾರ ಸಂಕಿರಣದ ವೇಳೆ ನಂದಿಗ್ರಾಮದ ದೃಶ್ಯಾವಳಿಯನ್ನು ಪ್ರದರ್ಶಿಸಲಾಯಿತು. ಈ ಹೋರಾಟದಲ್ಲಿ ತೃಣಮೂಲ ಕಾಂಗ್ರೆಸ್‌ಗಿಂತಲೂ ನಕ್ಸಲೀಯರು ಸಕ್ರಿಯವಾಗಿ ಭಾಗವಹಿಸಿದ್ದು, ಎಡರಂಗದ ಮೇಲೆ ಅವರ ದಾಳಿ ಎಲ್ಲರಿಗೂ ಗೊತ್ತೇ ಇದೆ.

ಇಂತಹ ಬೆಳವಣಿಗೆಗಳು ಅಪಾಯಕಾರಿ. ಇನ್ನೂ ಅಪಾಯಕಾರಿಯೆಂದರೆ ಅವರು ಹರಡುತ್ತಿರು ಸುಳ್ಳು ಮಾಹಿತಿ. ಎಡಪಕ್ಷಗಳ ವಿರುದ್ಧ, ಎಡ ಸರ್ಕಾರಗಳ ವಿರುದ್ಧ ಈ ಸಂಘಟನೆಗಳು ಹರಿಯಬಿಟ್ಟ ಸುಳ್ಳುಗಳ ವಿರುದ್ಧ ಜನಾಂದೋಲನ ನಡೆಸಬೇಕಾದ ಅಗತ್ಯ ಇದೆ. ಇದನ್ನೇ ಕರಾವಳಿಯ ಜನತೆ ಎದುರು ನೋಡುತ್ತಿದ್ದಾರೆ.

ಸಿಮ್ಸಿ

ಕುಂದಾಪುರ : ನಾಗರಿಕರ ನೀರಿನ ಬವಣೆ

ಕುಂದಾಪುರ ಪುರಸಭೆ ವ್ಯಾಪ್ತಿಯೊಳಗಿರುವ ಎಲ್ಲಾ ಸಾರ್ವಜನಿಕ ನಲ್ಲಿಗಳನ್ನು ಇದ್ದಕ್ಕಿದ್ದಂತೆ ಕಿತ್ತುಕೊಂಡು ಹೋಗುವುದರ ಮುಖಾಂತರ ಪುರಸಭೆ ನಾಗರಿಕರಿಗೆ ಒಮ್ಮೆಲೇ ಸಂಕಷ್ಟಕ್ಕೆ ದೂಡಿದೆ. ನಲ್ಲಿ ಕೀಳುವುದಕ್ಕೆ ಪುರಸಭೆ ನೀಡಿದ ಕಾರಣ ಪುರಸಭೆ ನಾಗರಿಕರು ADB ಯೋಜನೆಯಡಿ ತಕ್ಷಣವೇ ಖಾಸಗಿ ನೀರಿನ ಸಂಪರ್ಕವನ್ನು ಒತ್ತಾಯದಿಂದ ಪಡೆಯುವಂತೆ ಮಾಡುವುದಾಗಿದೆ. ಸುಮಾರು 2 ವರ್ಷದಿಂದ ಖಾಸಗಿ ಸಂಪರ್ಕಗಳನ್ನು ಪಡೆಯಲು ಪುರಸಭೆ ಒತ್ತಾಯಿಸುತ್ತಿದ್ದರೂ ನಾಗರೀಕರು ಸಂಪರ್ಕ ಹೊಂದಲು ಅಷ್ಟೇನು ಆಸಕ್ತಿ ವಹಿಸುತ್ತಿಲ್ಲ. ನಾಗರಿಕರು ಸಂಪರ್ಕ ಹೊಂದದಿರಲು ಹಲವಾರು ಕಾರಣಗಳಿದ್ದು, ಕೆಲವು ಸಮಸ್ಯೆ, ಪುರಸಭೆ ಕಡೆಯಿಂದಲೇ ಇದ್ದರೂ ಪುರಸಭೆ ಸಾರ್ವಜನಿಕ ನಲ್ಲಿ ಕೀಳುವುದರ ಮುಖಾಂತರ ನಾಗರಿಕರನ್ನು ಸಂಪರ್ಕ ಪಡೆಯಲು ಒತ್ತಾಯಿಸುವ ವಿಧಾನ ಅನುಸರಿಸಿದೆ.

ಕುಂದಾಪುರ ಪುರಸಭೆ ವ್ಯಾಪ್ತಿಯ ಬಹುತೇಕ ಪ್ರದೇಶ ಅಂಟಾದ ಕಪ್ಪು ಕೊಜೆ ಮಣ್ಣಿನಿಂದ ಕೂಡಿದ್ದು ಈ ಪ್ರದೇಶದಲ್ಲಿ ಉಪ್ಪು ಮಿಶ್ರಿತ ನೀರು ದೊರೆಯುವುದರಿಂದ ನಾಗರಿಕರು ಕುಡಿಯುವ ನೀರಿಗಾಗಿ ಪುರಸಭೆ ಒದಗಿಸುವ ಸಾರ್ವಜನಿಕ ನಲ್ಲಿ ನೀರನ್ನೇ ಅವಲಂಬಿಸಬೇಕಾಗಿದೆ. ಹಿಂದಿನಿಂದಲೂ ಬೇರೆ ಬೇರೆ ಪಕ್ಷಗಳ ಅಧಿಕಾರ ಇದ್ದಾಗಲೂ ಕುಡಿಯುವ ನೀರಿನ ಮಹತ್ವವನ್ನು ಮನಗಂಡು ಪುರಸಭೆಯೊಳಗೇ ಹಲವಾರು ಬಾವಿಗಳನ್ನು ತೋಡಿ ನೀರನ್ನು ಟ್ಯಾಂಕಿನಲ್ಲಿ ಸಂಗ್ರಹಿಸಿ ನಲ್ಲಿ ಮುಖಾಂತರ ಪುರಸಭೆಯ ಎಲ್ಲಾ ಮೂಲೆ ಮೂಲೆಗೂ ನೀರು ನೀಡುವ ಪ್ರಯತ್ನ ಆಗಿತ್ತು. ಸಿಪಿಐ(ಎಂ) - ಜನತಾದಳ ಮೈತ್ರಿಕೂಟದ ಅವಧಿಯಲ್ಲಿ ADB ಯೋಜನೆಯಡಿ ಅನುದಾನ ಸಹಿತ ಹಣದಿಂದ ಕುಡಿಯುವ ನೀರಿನ ಯೋಜನೆ ರೂಪಿಸಲಾಗಿತ್ತು. ಕುಂದಾಪುರ ಸಮೀಪದ ಸೌಡ ಎಂಬಲ್ಲಿಂದ ಸಪ್ಪೆ ನೀರಿನ ಹೊಳೆಯಿಂದ ನೀರನ್ನು ಶುದ್ಧೀಕರಿಸಿ ಕುಂದಾಪುರಕ್ಕೆ ಸಾಗಿಸಿ ನಾಗರೀಕರೆಲ್ಲರಿಗೂ ಸರಳ ದರದಲ್ಲಿ ಶುದ್ಧ ನೀರಿನ ವಿತರಣೆಗೆ ಯೋಜನೆ ರೂಪಿಸಲಾಗಿತ್ತು. ಈ ಮಧ್ಯೆ ಕಾಂಗ್ರೆಸ್ ಬೋರ್ಡಿನಲ್ಲಿ ಈ ಯೋಜನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಯೋಜನೆ ಅನುಷ್ಠಾನಗೊಳಿಸಿತ್ತು. ಕುಡಿಯುವ ನೀರನ ಗೃಹ ಸಂಪರ್ಕಕ್ಕೆ 5000 ರೂ. ಮುಂಗಡ ಹಾಗೂ 100 ರೂ. ಮಾಸಿಕ ಬಾಡಿಗೆ ದರ ವಿಧಿಸಿದಾಗ ಸಿ.ಪಿ.ಐ.(ಎಂ) ಇದನ್ನು ವಿರೋಧಿಸಿ ನಾಗರಿಕರ ಸಹಾಯದೊಂದಿಗೆ ಹೋರಾಟ ನಡೆಸಿದಾಗ ಈ ಮುಂಗಡವನ್ನು ಕಾಂಗ್ರೆಸ್ ಬೋರ್ಡ ಅನಿವಾರ್ಯವಾಗಿ 2000 ಕ್ಕೆ ಇಳಿಸಿತು. ಈ ಮಧ್ಯೆ ಬೋರ್ಡ ಇಲ್ಲದೆ ಆಡಳಿತ ಅಧಿಕಾರಿಯವರ ಅವಧಿಯಲ್ಲಿ 5000 ರೂ. ಮುಂಗಡ ವಸೂಲು ಮಾಡಲಾಯಿತು. ಮಾಸಿಕ ದರದಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ವಾಣಿಜ್ಯ ಉಪಯೋಗಕ್ಕೂ ನಿಗದಿಪಡಿಸಿದ ದರ ತೀರಾ ದುಬಾರಿಯಾಗಿರುತ್ತದೆ. ಮೊದಲೇ ಎಚ್ಚರಿಸಿದಂತೆ ತೀರಾ ದುಬಾರಿ ದರ ವಿಧಿಸಿದ್ದರಿಂದ ಪುರಸಭೆ ನಿರೀಕ್ಷಿಸಿದ ಮಟ್ಟದಲ್ಲಿ ಸಾರ್ವಜನಿಕರು ಸಂಪರ್ಕ ಪಡೆಯಲು ಮುಂದಾಗುತ್ತಿಲ್ಲ.

ಇನ್ನು ಹಲವಾರು ತೊಡಕುಗಳು ಯೋಜನೆಯಲ್ಲಿ ಇದೆ. ಯೋಜನೆಯನ್ವಯ ಸಂಪರ್ಕಕ್ಕಾಗಿ ಹಾಕಲಾದ ಮುಖ್ಯ ಲೈನುಗಳು ಕೇವಲ ಮುಖ್ಯರಸ್ತೆಯಲ್ಲಿ ಮಾತ್ರ ಇರುವುದರಿಂದ ನಾಗರಿಕರು ಮುಖ್ಯ ಲೈನಿನಿಂದ ತಮ್ಮ ಮನೆಯವರೆಗೆ ತಾವೇ ಪೈಪ್ ಲೈನ್ ಹಾಕಿಕೊಳ್ಳಬೇಕಾಗಿರುವುದಿಂದ ಅಲ್ಲದೆ ಈ ಲೈನುಗಳನ್ನು ಪುರಸಭೆ ಅನುಮತಿ ನೀಡುವ ಕಂಟ್ರಾಕ್ಟರುಗಳಿಂದಲೇ ಹಾಕಿಸಿಕೊಳ್ಳ ಬೇಕು ಎನ್ನುವುದರಿಂದಾಗಿ ಈ ಕೆಲಸ ದುಬಾರಿಯಾಗಿ ಪರಿಣಮಿಸಿದೆ. ಕೆಲವು ಮನೆಗಳಿಗೆ ಸಂಪರ್ಕ ಪಡೆಯಲು 10000ಕ್ಕೂ ಮಿಕ್ಕಿ ಖರ್ಚು ಮಾಡಬೇಕಾದ ಅನಿವಾರ್ಯತೆ ಇದೆ.

ಬಹಳಷ್ಟು ಮಂದಿ ಪುರಸಭೆ ನಿಗದಿ ಮಾಡಿದ ಮುಂಗಡ ನೀಡಿ ರಶೀದಿ ಮಾಡಿಕೊಂಡಿದ್ದರೂ ಸಂಪರ್ಕ ವೆಚ್ಚ ಭರಿಸಲಾಗದೆ ಒದ್ದಾಡುವಂತಾಗಿದೆ. ಸಂಪರ್ಕಕ್ಕಾಗಿ ಅಳವಡಿಸಿದ ಗೇಟ್‌ವಾಲ್‌ಗಳು ಸಮರ್ಪಕ ಸ್ಥಳದಲ್ಲಿ ಇರದೇ ಇರುವುದರಿಂದ ಕೆಲವಾರು ಗೃಹ ಸಂಪರ್ಕಕ್ಕೆ ಇದು ತೊಡಕಾಗಿದೆ. ಸಾಕಷ್ಟು ಮಂದಿ ಸಂಪರ್ಕಕ್ಕಾಗಿ ಮುಂಗಡ ನೀಡಿ ಕಾಯುತ್ತಿದ್ದರೂ ಪುರಸಭೆಗೆ ತಕ್ಷಣವೇ ಸಂಪರ್ಕ ಒದಗಿಸುವ ಸಾಮರ್ಥ್ಯ ಇಲ್ಲದೆ ಈಗಲೂ ಸಂಪರ್ಕ ನಿಧಾನಗತಿಯಲ್ಲಿ ಸಾಗುತ್ತಿದೆ.

ದುಬಾರಿ ಮಾಸಿಕ ದರ ಇರುವುದರಿಂದ ನಾಗರಿಕರು ತಿಂಗಳ ಬಿಲ್ಲಿಗೆ ಹೆದರಿ ಸಂಪರ್ಕಕ್ಕೆ ಮುಂದಾಗುತ್ತಿಲ್ಲ.

ಇಷ್ಟೆಲ್ಲಾ ಅವ್ಯವಸ್ಥೆ ಇದ್ದರೂ ಪುರಸಭೆ ಸಾರ್ವಜನಿಕ ನಲ್ಲಿಗಳನ್ನು ಏಕಾಏಕಿ ಕಿತ್ತಿರುವುದರಿಂದ ನಾಗರಿಕರು ನೀರಿಗಾಗಿ ಪರದಾಡುವಂತಾಗಿದೆ.

ಈ ಬಗ್ಗೆ ಸಿ.ಪಿ.ಐ.(ಎಂ) ಪಕ್ಷ ತಕ್ಷಣವೇ ಮುಖ್ಯಾಧಿಕಾರಿಗಳನ್ನು ಭೇಟಿ ಮಾಡಿ ನಲ್ಲಿ ಕೀಳುವ ಕೆಲಸ ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಿದೆ. ಸಂಪರ್ಕ ಪಡೆಯಲು ನಾಗರಿಕರಿಗೆ ಇರುವ ಹಲವಾರು ತೊಡಕುಗಳ ಬಗ್ಗೆ ವಿವರವಾಗಿ ಚರ್ಚಿಸಿತು. ಅಗತ್ಯ ಇರುವ ಕಡೆ ನಲ್ಲಿಗಳನ್ನು ಉಳಿಸಿಕೊಳ್ಳುವ ಭರವಸೆ ನೀಡಲಾಯಿತು.

ಬಿಜೆಪಿ ಹಾಗೂ ಕಾಂಗ್ರೆಸ್ ಈ ಬಗ್ಗೆ ಮೌನವಾಗಿದ್ದವು. ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಬಹುಮತ ಸಾಧಿಸಿದ ಬಿಜೆಪಿ ತಾನು ಬೋರ್ಡ ರಚನೆ ಮಾಡಿದ ನಂತರದಲ್ಲಿ ನಲ್ಲಿ ಕೀಳುವ ಪ್ರಯತ್ನ ಮಾಡಿದಲ್ಲಿ ನಾಗರಿಕರ ಅಸಮಧಾನಕ್ಕೆ ಗುರಿಯಾಗುವುದರಿಂದ ಅಧಿಕಾರಿಗಳಿಂದಲೇ ಈ ಕೆಲಸ ಮಾಡಿಸಿರುವುದು ಗುಟ್ಟಾಗಿ ಉಳಿದಿಲ್ಲ. ಉಡುಪಿಯಲ್ಲಿ ಇದೇ ರೀತಿ ಕುಡಿಯುವ ನೀರಿನ ಬೆಲೆಯನ್ನು ಈ ಅವಧಿಯಲ್ಲಿ ಹೆಚ್ಚಿಸಿ ಜನರ ಅಸಮಧಾನಕ್ಕೆ ಕಾರಣವಾಗಿದೆ. ಬಹುಮತದಿಂದ ಆರಿಸಿ ಕಳಿಸಿದ ಕುಂದಾಪುರದ ನಾಗರಿಕರಿಗೆ ಬಿಜೆಪಿ ತನ್ನ ಜನವಿರೋಧಿ ದೋರಣೆಯ ಪ್ರಥಮ ರುಚಿ ತೋರಿಸಿದೆ. ಈ ಹಿಂದಿನ ಬೋರ್ಡನಲ್ಲಿ ನಿರ್ಣಯವಾದ ಕಾಮಗಾರಿಗಳನ್ನೆಲ್ಲಾ ತನ್ನ ಕಾಮಗಾರಿ ಎಂದು ಹೇಳಿಕೊಳ್ಳುವ ಬಿಜೆಪಿ ಮುಖಂಡರು ನಲ್ಲಿ ಕೀಳಿಸಿದ್ದು ಮಾತ್ರ ಅಧಿಕಾರಿಗಳು ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ.

ಪುರಸಭೆಯ ಸಿಬ್ಬಂಧಿಗಳು ಏಕಾ ಏಕಿ ನಲ್ಲಿಗಳನ್ನು ಜನರ ಪ್ರತಿರೋಧದ ನಡುವೆಯೂ ಕಿತ್ತುಕೊಂಡು ಹೋಗುತ್ತಿದ್ದಾರೆ. ಜನತೆಯಿಂದ ಆರಿಸಿ ಹೋದ ಬಿಜೆಪಿ ಸದಸ್ಯರುಗಳು ಮೂಕಪ್ರೇಕ್ಷಕರಂತೆ ನೋಡುತ್ತಾ ನಿಂತಿದ್ದು ದುರಂತವೇ ಸರಿ.

ವಿ.ಚಂದ್ರಶೇಖರ್

ನೆರೆ-ಹೊರೆ

ಪಶ್ಚಿಮ ಬಂಗಾಳ

ಮತ್ತೆ ತೃಣಮೂಲ ಮತ್ತಿತರರ ಹಿಂಸಾಚಾರ

ಪಶ್ಚಿಮ ಬಂಗಾಳದಲ್ಲಿ 2008 ರಲ್ಲಿ ಗ್ರಾಮೀಣ ಚುನಾವಣೆಗಳು ನಡೆಯಲಿವೆ. ಆದ್ದರಿಂದ 2008 ಹತ್ತಿರವಾಗುತ್ತಿರುವಂತೆ ತೃಣಮೂಲ ಕಾಂಗ್ರೆಸ್ ಮತ್ತಿತರ ಪಕ್ಷಗಳ ಹತಾಶೆ ಹೆಚ್ಚುತ್ತಿರುವಂತೆ ಕಾಣುತ್ತಿದೆ. ಅಕ್ಟೋಬರ್ 19ರಂದು ಬೀರ್‌ಭೂಮ್ ಜಿಲ್ಲೆಯ ಕೊಪಾಯ್ ನಲ್ಲಿ ಸುಕುಮಾರ್ ದಾಸ್ ಗ್ರಾಮೀಣ ಪ್ರದೇಶದಲ್ಲಿ ಅವರು ಹರಿಯಬಿಟ್ಟಿರುವ ಹಿಂಸಾಚಾರಕ್ಕೆ ಇತ್ತೀಚಿನ ಬಲಿ. ಇವರು ಸಿಪಿಐ(ಎಂ) ಕೊಪಾಯ್ ಉತ್ತರ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಹಾಗೂ ಕಿಸಾನ್ ಸಭಾ ಕಾರ್ಯಕರ್ತರಾಗಿದ್ದು ಈ ಪ್ರದೇಶದಲ್ಲಿ ಭೂಹೋರಾಟಗಳಿಗೆ ನೇತೃತ್ವ ನೀಡುತ್ತಿದ್ದರು. ಜೋತೇದಾರರು (ಜಮೀನುದಾರರು) ಕಾನೂನು ಬಾಹಿರವಾಗಿ ತಮ್ಮ ಕೈಯಲ್ಲಿಟ್ಟುಕೊಂಡಿರುವ ಭೂಮಿತಿ ಮೀರಿದ ಜಮೀನನ್ನು ಗುರುತಿಸುವ ಈ ಹೋರಾಟದಿಂದಾಗಿ ಆತನ ಕೊಲೆಯಾಗಿದೆ. ಈ ಜೋತೇದಾರರಿಗೆ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ನ ಬೆಂಬಲವಿದ್ದು ಅವರ ಗೂಂಡಾಗಳ ಧಾಳಿಗೆ 42ವರ್ಷದ ಸುಕುಮಾರ್ ದಾಸ್ ಬಲಿಯಾಗಿದ್ದಾರೆ.

ಅಕ್ಟೋಬರ್ 19ರಂದು ಇಂತಹ ಒಂದು ಭೂಮಿತಿ ಮೀರಿದ ಜಮೀನಿನ ಪತ್ತೆ ಮಾಡಿಕೊಂಡು ಬರುತ್ತಿರುವಾಗ ಆತನ ಮೇಲೆ ತೃಣಮೂಲ ಕಾಂಗ್ರೆಸಿನ ಗೂಂಡಾಗಳು ಬಾಂಬುಗಳನ್ನು ಎಸೆದರು. ತೀವ್ರವಾಗಿ ಗಾಯಗೊಂಡ ಅವರು ಕಷ್ಟಪಟ್ಟು ಹತ್ತಿರದ ಸಿಪಿಐ(ಎಂ) ಕಚೇರಿಗೆ ತಲುಪಿದರು. ತಕ್ಷಣವೇ ಆತನನ್ನು ಆಸ್ಪತ್ರೆಗೆ ಒಯ್ದರೂ ಪ್ರಾಣ ಉಳಿಯಲಿಲ್ಲ.



ತೃಣಮೂಲ ಕಾಂಗ್ರೆಸಿನ ನೆಮಾಯ್ ದಾಸ್ ಮತ್ತು ಗುಲಾಂ ಮುಸ್ತಾಫಾ ಬಾಂಬೆಸೆದವರು ಎಂದು ಅವರು ಗುರುತಿಸಿದ್ದು ಅವರಿಬ್ಬರು ಆ ಸ್ಥಳದಿಂದ ಓಡಿಹೋಗುತ್ತಿದ್ದುದನ್ನು ಕಣ್ಣಾರೆ ಕಂಡವರೂ ಹೇಳಿಕೆ ನೀಡಿದ್ದಾರೆ. ಈ ಹಿಂದೆಯೂ ಸುಕುಮಾರ್ ದಾಸ್ ಮೇಲೆ ಗೂಂಡಾಗಳು ಹಲವು ಬಾರಿ ಹಲ್ಲೆ ಮಾಡಿದ್ದರು.

ಈ ನಡುವೆ ನಂದಿಗ್ರಾಮದಲ್ಲಿ ಮತ್ತೆ ತೃಣಮೂಲ ಕಾಂಗ್ರೆಸಿನ ಮತ್ತು ಮಾವೋವಾದಿಗಳು ಎಂದು ಹೇಳಿಕೊಳ್ಳುತ್ತಿರುವ ಗೂಂಡಾಗಳ ಹಿಂಸಾಚಾರ ಆರಂಭವಾಗಿದೆ. ಮತ್ತೆ ಅವರು ಇಲ್ಲಿನ ಹಳ್ಳಿಗಳ ಜನರನ್ನು ಹೊಡೆದೋಡಿಸುವ ಹೀನ ಕೃತ್ಯಗಳಿಗಿಳಿದಿದ್ದಾರೆ. ಅಕ್ಟೋಬರ್ 23 ಮತ್ತು 24ರಂದು ಅವರು ಸುಮಾರು 50 ಹಳ್ಳಿಗರ ಮನೆಗಳನ್ನು ಲೂಟಿ ಮಾಡಿದ್ದಾರೆ. ಅಷ್ಟೇ ಅಲ್ಲ ಲೈಬ್ರರಿಗಳನ್ನೂ ಸುಟ್ಟಿದ್ದಾರೆ. ಎರಡು ದಿನಗಳ ಹಿಂದೆ ಇವರನ್ನು ಹಳ್ಳಿಗರು ಹಿಮ್ಮೆಟ್ಟಿಸಿದ್ದರು. ಆದ್ದರಿಂದ ಈ ಬಾರಿ ಅವರು ಗನ್ನುಗಳು, ಸ್ಫೋಟಕಗಳು, ಮಚ್ಚುಗಳಿಂದ ಸುಸಜ್ಜಿತರಾಗಿಯೇ ಬಂದಿದ್ದರು. ಅತ್ತ ಅವರ ಮುಖಂಡೆ ಮಮತಾ ಬ್ಯಾನರ್ಜಿ ತಾನು ಗಲಭೆ ಪೀಡಿತ ಸ್ಥಳಗಳಿಗೆ ಭೇಟಿ ನೀಡಲೆಂದು ಬರುತ್ತಿದ್ದಾಗ ಹಲ್ಲೆ ಪ್ರಯತ್ನ ನಡೆದಿದ್ದು ಎಡರಂಗ ತನ್ನನ್ನು ಕೊಲ್ಲಲು ಸಂಚು ಹೂಡಿದೆ ಎಂದು ಮತ್ತೊಂದು ನಾಟಕವಾಡಿದ್ದಾರೆ.

ಇಂತಹ ಹಿಂಸಾಚಾರವನ್ನು ವಿರೋಧಿಸಿ ಪುರುಲಿಯಾ ಜಿಲ್ಲೆಯ ರಾನೀಬಂದ್‌ನಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಅದನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಮನ್ ಬಸು ಮಾತನಾಡಿದರು. ಗ್ರಾಮೀಣ ಜನರ ಐಕ್ಯತೆಯನ್ನು ಮುರಿಯಲು ಹತಾಶ ವಿರೋಧ ಪಕ್ಷಗಳು ಈ ಹಿಂಸಾಚಾರಕ್ಕೆ ಇಳಿದಿದ್ದಾರೆ ಎಂದ ಅವರು ನಂದಿಗ್ರಾಮದಲ್ಲಿ ಅಲ್ಲಿಯ ನಿವಾಸಿಗಳ ಒಪ್ಪಿಗೆಯಿಲ್ಲದೆ ಯಾವುದೇ ಉದ್ದಿಮೆಗಳು ಬರುವುದಿಲ್ಲ, ಉದ್ದೇಶಿತ ರಾಸಾಯನಿಕ ಸ್ಥಾವರವನ್ನು ಬೇರೆಡೆಗೆ ಸ್ಥಾಪಿಸಲಾಗುತ್ತದೆ, ಆದ್ದರಿಂದ ಭೂಸ್ವಾಧೀನದ ಪ್ರಶ್ನೆಯೇ ಇಲ್ಲವೆಂದು ಎಡರಂಗ ಸರಕಾರ ಘೋಷಿಸಿ ಬಹಳ ದಿನಗಳಾದ ನಂತರವೂ ಇಂತಹ ಹಿಂಸಾಚಾರಗಳನ್ನು ನಡೆಸುತ್ತಿರುವುದು ಇದನ್ನೆ ತೋರಿಸುತ್ತದೆ ಎಂದರು. ಬಂಗಾಳದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಣಬರುತ್ತಿರುವ ಅಭಿವೃದ್ಧಿಯ ಹೊಸ ಬೆಳವಣಿಗೆಗಳಿಂದ ಇವರಿಗಾಗಿರುವ ಹತಾಶೆಯನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಅವರು ಹೇಳಿದರು.

ಗೋದೂತಾಯಿ ಜನ್ಮ ಶತಾಬ್ದಿ ಸಮಾರೋಪ

ಥಾಣೆಯಲ್ಲಿ ಬೃಹತ್ ರ್‍ಯಾಲಿ

ಅಕ್ಟೋಬರ್ 10 ರಂದು ಮಹಾರಾಷ್ಟ್ರದ ಥಾಣೆ ಜಿಲ್ಲೆಯ ದಹಾಣು ತೆಹಸೀಲಿನ ದಪ್ಚಾರಿ ಎಂಬಲ್ಲಿ ಇಪ್ಪತ್ತು ಸಾವಿರಕ್ಕೂ ಹೆಚ್ಚು ಆದಿವಾಸಿಗಳು ನೆರೆದು ತಮ್ಮ ವಿಮೋಚನೆಗಾಗಿ ಹೋರಾಡಿದ, ಐತಿಹಾಸಿಕ ವಾರಳೀ ಆದಿವಾಸಿ ಬಂಡಾಯಕ್ಕೆ ನೇತೃತ್ವ ನೀಡಿದ ಗೋದಾವರಿ ಪರುಳೇಕರ್ ರವರನ್ನು ನೆನಪಿಸಿಕೊಂಡರು. ಇದರೊಂದಿಗೆ ಗೋದಾವರಿ ಪರುಳೇಕರ್ ಜನ್ಮಶತಾಬ್ದಿ ಆಚರಣೆ ಸಮಾರೋಪಗೊಂಡಿತು. ಈ ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಸಿಪಿಐ(ಎಂ) ಮುಖಂಡರೂ, ರಾಜ್ಯಸಭಾ ಸದಸ್ಯರೂ ಆದ ಸೀತಾರಾಂ ಯೆಚೂರಿ ಮಾತನಾಡಿದರು. ಕಳೆದ ವರ್ಷ ಅಗಸ್ಟ್ 21 ರಂದು ದಹಾಣುವಿನಲ್ಲಿ ಇಂತಹ ಇನ್ನೊಂದು ಬೃಹತ್ ರ್‍ಯಾಲಿಯೊಂದಿಗೆ ಈ ಶತಾಬ್ದಿ ಆಚರಣೆ ಆರಂಭವಾಗಿತ್ತು. ಅದರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಭಾಗವಹಿಸಿದ್ದರು.

ಅಕ್ಟೋಬರ್ 10 ಈ ಪ್ರದೇಶಕ್ಕೆ ಐತಿಹಾಸಿಕ ಮಹತ್ವದ ದಿನ. 1945 ರಲ್ಲಿ ಇದೇ ದಿನದಂದು ಬ್ರಿಟಿಶ್ ಪೋಲೀಸರು ಸ್ಥಳೀಯ ಭೂಮಾಲಕರೊಂದಿಗೆ ಶಾಮೀಲಾಗಿ ಆದಿವಾಸಿ ಬಂಡಾಯದ ಭಾಗವಾಗಿ ನೆರೆದಿದ್ದ ಸಾವಿರಾರು ಆದಿವಾಸಿಗಳ ಮೇಲೆ ತಲ್ವಾಡಾ ಗ್ರಾಮದಲ್ಲಿ ಗೋಳೀಬಾರು ನಡೆಸಿದರು. ಅದರಲ್ಲಿ ಜೇಥ್ಯಾ ಗಂಗಾಡ್ ಮತ್ತು ಇತರ ನಾಲ್ವರು ಆದಿವಾಸಿ ರೈತರು ಹುತಾತ್ಮರಾದರು. ಸರಿಯಾಗಿ 51 ವರ್ಷಗಳ ನಂತರ ಅಕ್ಟೋಬರ್ 10, 1996ರಂದು ತಲಸಾರಿಯಲ್ಲಿ ಗೋದಾವರಿ ಪರುಳೇಕರ್ ರವರ ಅಂತ್ಯ ಸಂಸ್ಕಾರ ನಡೆಯಿತು. ಅದರಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಎಸ್. ರಾಮಚಂದ್ರನ್ ಪಿಳ್ಳೆ ಮತ್ತು ಥಾಣೆ ಜಿಲ್ಲೆಯ ಸಾವಿರಾರು ಜನ ಭಾಗವಹಿಸಿದ್ದರು. ಈ ಎರಡು ಐತಿಹಾಸಿಕ ಘಟನೆಗಳ ಸ್ಮರಣಾರ್ಥ ಈ ರ್‍ಯಾಲಿಯನ್ನು ಸಂಘಟಿಸಲಾಗಿತ್ತು.

ಇದಕ್ಕೆ ಸಿದ್ಧತೆಯಾಗಿ ಥಾಣೆ ಜಿಲ್ಲೆಯ ಹಳ್ಳಿ-ಹಳ್ಳಿಗಳಲ್ಲಿ ನೂರಾರು ಸಭೆಗಳನ್ನು ನಡೆಸಲಾಯಿತು, ಇಪ್ಪತ್ತು ಸಾವಿರಕ್ಕೂ ಹೆಚ್ಚು ಕರಪತ್ರಗಳನ್ನು ಹಂಚಲಾಯಿತು ತಲಸಾರಿ, ದಹಾಣು, ಪಾಲ್ಘರ್, ಜೌಹರ್,ಮೊಖಾಡ, ವಿಕ್ರಂಗಢ್, ವಾಡಾ ಮತ್ತು ಶಹಪುರ್ ತೆಹಸೀಲ್‌ಗಳಿಂದ ಸಾವಿರಾರು ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಟೆಂಪೋಗಳಲ್ಲಿ, ಟ್ರಕ್ಕುಗಳಲ್ಲಿ, ಜೀಪುಗಳಲ್ಲಿ ಬಂದರು. ಸುತ್ತಮುತ್ತಲಿನ ಹಳ್ಳಿಗಳಿಂದ ನಡೆದುಕೊಂಡೇ ಬಂದರು. ತಲಸಾರಿ ತೆಹಸೀಲಿನ ಕಾರ್ಖಾನೆ ಕಾರ್ಮಿಕರೂ ತಮ್ಮ ಕಾರ್ಖಾನೆಗಳನ್ನು ಮುಚ್ಚಿ ಈ ಕೆಂಬಾವುಟದ ರ್‍ಯಾಲಿಯಲ್ಲಿ ಭಾಗವಹಿಸಿದರು. ನಾಶಿಕ್ ಜಿಲ್ಲೆಯ ಸುರ್ಗಾಣಾ ಮತ್ತು ಪೇಠ್ ತೆಹಸೀಲುಗಳ ಮತ್ತು ಇತರ ಬುಡಕಟ್ಟು ಪ್ರದೇಶಗಳ ಆದಿವಾಸಿ ಕಾರ್ಯಕರ್ತರೂ ಇದರಲ್ಲಿ ಭಾಗವಹಿಸಿದರು.



ತೆಹಲ್ಕಾ ಟೇಪುಗಳ ಬಗ್ಗೆ ಮೋದಿ ಏನನ್ನುತ್ತಾರೆ ?

ಕಳೆದ ಸಂಚಿಕೆಯಲ್ಲಿ 2002 ರ ಗುಜರಾತ್ ಗಲಭೆಗಳನ್ನು ಕುರಿತಂತೆ ತೆಹಲ್ಕಾ ಟೇಪುಗಳಿಂದಾಗಿ ದುಷ್ಕರ್ಮಿಗಳಿಂದಲೇ ಆ ಹತ್ಯಾಕಾಂಡದ ಘೋರ ಸತ್ಯಗಳು ಬಯಲಾದ ಬಗ್ಗೆ ವರದಿ ಮಾಡಿದ್ದೇವೆ. ಬಾರಿಯ ವಿಶೇಷವೆಂದರೆ ಬಿಜೆಪಿಯಾಗಲೀ, ಸಂಘ ಪರಿವಾರದ ಬೇರೆ ಯಾವುದೇ ಅಂಗವಾಗಲಿ ಈ ಟೇಪುಗಳು ಸುಳ್ಳು ಎಂದು ಹೇಳಿಲ್ಲ. ಬದಲಿಗೆ ಒಂದು ರೀತಿಯಲ್ಲಿ ನರೇಂದ್ರ ಮೋದಿ ಮತ್ತು ನಾನಾವಟಿ-ಶಹಾ ಆಯೋಗಗಳೆದುರು ಗುಜರಾತ್ ಸರಕಾರದ ವಕೀಲ ಅರವಿಂದ ಪಂಡ್ಯಾ ಈ ಟೇಪುಗಳು ನೈಜ ಎಂದು ಪರೋಕ್ಷವಾಗಿ ದೃಢಪಡಿಸಿದ್ದಾರೆ.

ಒಂದು ಪತ್ರಿಕಾ ಸಂದರ್ಶನದಲ್ಲಿ ಮೋದಿ, ತಾನು ಶಿಕ್ಷಿಸಿದ ಒಬ್ಬ ವ್ಯಕ್ತಿ ತನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡಲು ಸಾಧ್ಯವಿಲ್ಲ ಎಂದರಂತೆ. ಎಲ್ಲವೂ ಮುಖ್ಯಮಂತ್ರಿಗಳ ಸಕ್ರಿಯ ಶಾಮೀಲಿನಿಂದ ಮತ್ತು ರಕ್ಷಣೆಯಲ್ಲಿ ನಡೆಯಿತು ಎಂದ ಬಾಬು ಭಜರಂಗಿಯ ಬಗ್ಗೆ ಈ ಮಾತು ಎಂಬುದನ್ನು ಗಮನಿಸಿ. ಇನ್ನೊಂದು ಕಡೆ ಅರವಿಂದ ಪಂಡ್ಯ ತಾನು ವಿಚಾರಣಾ ಆಯೋಗಗಳ ಇಬ್ಬರು ನ್ಯಾಯಾಧೀಶರ ಬಗ್ಗೆ ಮಾಡಿರುವ ಟಿಪ್ಪಣಿಗಳು ನಿಜವೆಂದು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಒಂದು ಪತ್ರಿಕಾ ಸಮ್ಮೇಳನದಲ್ಲಿ ಅವರು ತಾನು ಆಜ್‌ತಕ್ ಚಾನಲ್‌ನ ಒಂದು ಟಿವಿ ಸೀರಿಯಲ್‌ನ ಪಾತ್ರವಾಗಿ ಆ ಮಾತುಗಳನ್ನು ಹೇಳಿದೆ ಎಂದರಂತೆ. ಒಬ್ಬ ನುರಿತ ವಕೀಲನಿಗೆ ಇತಿಹಾಸದ ಅತ್ಯಂತ ಹೀನ ಹತ್ಯಾಕಾಂಡವೊಂದರ ವಿಚಾರಣೆಯಲ್ಲಿ ತಾನು ಯಾವ ನ್ಯಾಯಾಧೀಶರ ಎದುರು ನಿಲ್ಲಬೇಕಾಗಿದೆಯೋ ಅವರ ಹೆಸರುಗಳನ್ನೆ ಹೊಂದಿರುವ ಹೆಸರುಗಳೇ ಇರುವ ಈ ಸೀರಿಯಲ್ ನಲ್ಲಿ ಹೇಗೆ ನಟಿಸಿದ ಎಂದು ಯಾರಾದರೂ ಕೇಳಲು ಸಾಧ್ಯ ಎಂದೂ ತಿಳಿದಿಲ್ಲವೇ?

ತೆಹಲ್ಕಾ ಟೇಪುಗಳಲ್ಲಿ ಪಂಡ್ಯಾ ನ್ಯಾಯಮೂರ್ತಿ ಕೆ.ಜಿ.ಶಹಾ 'ನಮ್ಮ ಮನುಷ್ಯ' ಎನ್ನುತ್ತಾರೆ. ಅಂದರೆ ಆತ ಸಂಘ ಪರಿವಾರದ ಬೆಂಬಲಿಗ, 2002ರ ಹತ್ಯಾಕಾಂಡ ನಡೆಸಿದವರ ಪರವಾಗಿರುತ್ತಾರೆ ಎಂದು. ಇದು ಕೂಡಾ ಹೊಸ ಸಂಗತಿಯೇನಲ್ಲ. ಆದ್ದರಿಂದಲೇ ಅವರ ನೇಮಕದ ಬಗ್ಗೆ ವಿರೋಧವೆದ್ದು ಎನ್‌ಡಿಎ ಸರಕಾರ ಹೆಸರಿಗಾದರೂ ವಿಶ್ವಾಸಾರ್ಹತೆ ಪಡೆಯಲು . ನ್ಯಾಯಮೂರ್ತಿ ಜಿ.ಟಿ. ನಾನಾವಟಿಯವರನ್ನು ವಿಚಾರಣಾ ಆಯೋಗದ ಮುಖ್ಯಸ್ಥರನ್ನಾಗಿ ನೇಮಿಸಿತು.

ಹೀಗೆ ತೆಹಲ್ಕಾ ಟೇಪುಗಳಲ್ಲಿ ಹೊಸದೆಂಬುದು ಏನೂ ಇಲ್ಲವಾದ್ದರಿಂದ ಇವು ವಾಸ್ತವವಾಗಿ 'ಹಿಂದೂ ಹೃದಯ ಸಾಮ್ರಾಟ' ಎಂಬ ಮೋದಿಯ ಇಮೇಜನ್ನು ಇನ್ನಷ್ಟು ಬಲಗೊಳಿಸಬಹುದು ಎಂಬ ಊಹಾಪೋಹವೂ ಆರಂಭವಾಗಿದೆ.

ಆದ್ದರಿಂದಲೇ ಬಹುಶಃ ಬಿಜೆಪಿ ಇಬ್ಬಂದಿ ನಿಲುವು ತಳೆದಿದೆ. ಒಂದೆಡೆ ಅದನ್ನು ಖಂಡಿಸುತ್ತಲೇ ಇನ್ನೊಂದೆಡೆ ಪಕ್ಷದ 'ಬಂಡಾಯಗಾರರು' ಮೋದಿಯ ಹಿಂದೆ ಬಿದ್ದಿರುವಾಗ ಮತ್ತೊಮ್ಮೆ ಕೋಮು ಧ್ರುವೀಕರಣ ಪಕ್ಷವನ್ನು ಹೇಗಾದರೂ ಮತ್ತೆ ಅಧಿಕಾರಕ್ಕೆ ತರಬಹುದು ಎಂದು ಅದಕ್ಕೆ ಸಂತೋಷವೂ ಆಗುತ್ತಿದೆ ಎನ್ನಲಾಗಿದೆ. 2002ರ ಅಲ್ಪ ಸಂಖ್ಯಾತ-ವಿರೋಧಿ ಹತ್ಯಾಕಾಂಡದ ಬಗ್ಗೆ ಸ್ವಲ್ಪವೂ ಪಶ್ಚಾತ್ತಾಪ ಇಲ್ಲದಿರುವುದನ್ನು ಇದು ತೋರಿಸುತ್ತದೆ ಎಂದು ಕೆಲವು ಚಿಂತಕರ ಆತಂಕ.

ಗುಜರಾತಿನ ಮತದಾರರ ಮೇಲೆ ಈ ಟೇಪುಗಳು ಏನೂ ಪ್ರಭಾವ ಬೀರದಿದ್ದರೂ ಒಂದು ಬದಲಾವಣೆಯಂತೂ ಬರುತ್ತದೆ. ಇತ್ತೀಚೆಗೆ ಮೋದಿ ತಾನೊಬ್ಬ 'ಅಭಿವೃದ್ಧಿ' ಮನುಷ್ಯ ರಾಷ್ಟ್ರೀಯ ಮಟ್ಟದ ಜಾತ್ಯಾತೀತ ಮುಖಂಡ ಎಂದು ತೋರಿಸಿಕೊಡಲು ಯತ್ನಿಸುತ್ತಿದ್ದು ಅದು ಇನ್ನು ಮುಂದೆ ಸಾಧ್ಯವಾಗದು ಎಂದು ಇನ್ನು ಕೆಲವರ ಅಭಿಪ್ರಾಯ. ಇದು ಕೆಲವು ಬಿಜೆಪಿ ರಾಷ್ಟ್ರೀಯ ಮುಖಂಡರಿಗೂ ಸಂತಸ ತಂದ ಸಂಗತಿಯಂತೆ. ಏಕೆಂದರೆ ಆತ ಇನ್ನು ಗುಜರಾತಿಗೇ ಸೀಮಿತವಾಗಿಯೇ ಇರುತ್ತಾರೆ, ದಿಲ್ಲಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ತಮಗೆ ಬೆದರಿಕೆ ಒಡ್ಡಲು ಸಾಧ್ಯವಾಗಲಿಕ್ಕಿಲ್ಲ ಎಂಬುದೇ ಅವರ ಸಂತೋಷಕ್ಕೆ ಕಾರಣವಾಗಿದೆಯಂತೆ!

ರಶ್ಯಾದ ಮಹಾನ್ ಅಕ್ಟೋಬರ್ ಕ್ರಾಂತಿ ಮನುಕುಲದ ಚರಿತ್ರೆಯ ಒಂದು ಮಹತ್ವದ ಮೈಲಿಗಲ್ಲು. ಒಂದು ಯುಗ ಪ್ರವರ್ತಕ ಘಟನೆ. 20-21ನೇ ಶತಮಾನ ಜಗತ್ತಿನ ಚರಿತ್ರೆಯನ್ನು ರೂಪಿಸಿದ ಐತಿಹಾಸಿಕ ವಿದ್ಯಮಾನ. ಮನುಷ್ಯನನ್ನು ಎಲ್ಲ ಬಗೆಯ ಶೋಷಣೆಗಳಿಂದ ವಿಮೋಚನೆಗೈಯುವ, ಹೊಸ ಮನ್ವಂತರದ ಆರಂಭ ಬಿಂದು. ಅದರ ಮಹತ್ವವನ್ನು ಯಾವ ಶಕ್ತಿಯೂ ಕುಗ್ಗಿಸಲು ಸಾಧ್ಯವಿಲ್ಲ.



ಮಹಾನ್ ಅಕ್ಟೋಬರ್ ಕ್ರಾಂತಿಯ ಹೊಂಬೆಳಕು

ಪ್ರಕಾಶ್ ಕಾರಟ್ ಲೇಖನವನ್ನು ಆಧರಿಸಿದ ಬರಹ

ಸುಮಾರು ಏಳೆಂಟು ಸಾವಿರ ವರ್ಷಗಳಷ್ಟಿರಬಹುದಾದ ಮನುಷ್ಯ ನಾಗರೀಕತೆಯ ಇತಿಹಾಸ ಕೆದಕಿ ನೋಡಿದರೆ, ಅಲ್ಲಿ ಎಷ್ಟೆಷ್ಟೋ ರಾಜ್ಯ ಸಾಮ್ರಾಜ್ಯಗಳು ಉದಯಿಸಿ ಮುಳುಗಿವೆ.

ಈಜಿಪ್ಟ್‌ನ ಪಿರಮಿಡ್ಡುಗಳು, ರೋಮ್‌ನ ಅರಮನೆಗಳು, ದೈತ್ಯ ಚೀನಾದ ಮಹಾಗೋಡೆ, ಆಗ್ರಾದ ತಾಜ್‌ಮಹಲ್, ದೆಹಲಿಯ ಕೆಂಪು ಕೋಟೆ, ಹಾಳು ಹಂಪಿಯ ಕಟ್ಟಡ, ದೇಗುಲ, ಸ್ಮಾರಕಗಳು, ಎಷ್ಟೆಷ್ಟೋ ಕೋಟೆ ಕೊತ್ತಲಗಳನ್ನು ನೋಡಿದಾಗ ಚರಿತ್ರೆಯ ಕಣ್ಣೋಟವಿಲ್ಲದ ಮುಗ್ಧ ಜನರಿಗೆ ಇತಿಹಾಸವೆಂದರೆ ಮನಸ್ಸಿನಲ್ಲಿ ಮಾಡುವ ಚಿತ್ರವೇ ಬೇರೆ. ಇದನ್ನು ದುರುಪಯೋಗಪಡಿಸಿಕೊಳ್ಳುವ ಬಲಪಂಥೀಯ ಇತಿಹಾಸಕಾರರು, ಕೋಮುವಾದಿಗಳು ಹಿಂದೆ ಒಂದು ಸುವರ್ಣ ಯುಗವಿತ್ತು ಎಂಬಂತಹ ಕಟ್ಟು ಕತೆಗಳನ್ನು ಹುಟ್ಟು ಹಾಕಿದ್ದಾರೆ.

ಸುವರ್ಣ ಯುಗಗಳಿದ್ದುದು ನಿಜ. ಆದರೆ ಅದು ಆಳುವ ವರ್ಗಕ್ಕೆ ಮಾತ್ರ. ಕೆಳವರ್ಗದ ಜನ, ಭಾರತೀಯ ಸಮಾಜದಲ್ಲಿ ಕೆಳ ಜಾತಿಗಳ ಜನ -ಒಟ್ಟಾರೆ ದುಡಿಯುವ ಜನ ಇತಿಹಾಸದಲ್ಲಿ ಎಂದೂ ನೆಮ್ಮದಿಯಾಗಿ ಇದ್ದ ಬಗ್ಗೆ ಕುರುಹುಗಳಿಲ್ಲ. ದುಡಿಮೆ, ದುಡಿಮೆ, ಅಪಮಾನ, ಹಿಂಸೆ, ಬಂಧನ, ನೋವು ದುಡಿಯುವ ಜನರ ಇತಿಹಾಸದ ಪುಟಗಳಲ್ಲೂ ಅಚ್ಚಳಿಯದೇ ಪಡೆ ಮೂಡಿರುವ ಗುರುತುಗಳು. ದುಡಿಯುವ ವರ್ಗ ಇದರ ವಿರುದ್ಧ ನಿರಂತರವಾಗಿ ಸೆಣೆಸುತ್ತಲೇ ಇದೆ.

ವರ್ಗ ಹೋರಾಟವೇ ಇತಿಹಾಸ

ಇಂತಹ ಚರಿತ್ರೆಯ ಕುರಿತೆ ಮಹಾನ್ ಚಿಂತಕ ಕಾರ್ಲ್ ಮಾರ್ಕ್ಸ್‌ರವರು 'ಇದುವರೆಗಿನ ಇತಿಹಾಸವೆಲ್ಲವೂ ವರ್ಗ ಹೋರಾಟದ ಇತಿಹಾಸ' ಎಂದದ್ದು ಇತಿಹಾಸದ ಬೆಳವಣಿಗೆಯ ಇಂತಹ ಗತಿಯನ್ನು ಬದಲಿಸಿದ ಯುಗ ಪ್ರವರ್ತಕ ಘಟನೆ, 1917ರ ರಷ್ಯಾದ ಮಹಾನ್ ಅಕ್ಟೋಬರ್ ಕ್ರಾಂತಿ.

ಅದುವರೆಗಿನ ಜಗತ್ತಿನಲ್ಲಿ ಎಷ್ಟೆಷ್ಟೋ ಕ್ರಾಂತಿಗಳು ಸಂಭವಿಸಿದ್ದರೂ ಅದು ರಷ್ಯಾದ ಅಕ್ಟೋಬರ್ ಕ್ರಾಂತಿಗೆ ಸಮನಲ್ಲ. ಇದೊಂದು ಸಮಾಜವಾದಿ ಕ್ರಾಂತಿ. ದೇಶವೊಂದರಲ್ಲಿ ಪ್ರಪ್ರಥಮವಾಗಿ ಜಗತ್ತಿನಲ್ಲಿ ದುಡಿಯುವ ವರ್ಗವನ್ನು ಅಧಿಕಾರಕ್ಕೆ ತಂದ ಕ್ರಾಂತಿ, ಅಕ್ಷರಶಃ 'ಅಭೂತ ಪೂರ್ವ' ಕ್ರಾಂತಿ. ಬಂಡವಾಳಶಾಹಿ ವ್ಯವಸ್ಥೆಗೆ ಒಂದು ನಿರ್ದಿಷ್ಟ ಪರ್ಯಾಯ ವ್ಯವಸ್ಥೆಯನ್ನು ಜಾರಿಗೆ ತಂದ ಕ್ರಾಂತಿ.

ಜಗತ್ತಿನ ಮೇಲೆ ಅಚ್ಚಳಿಯದ ಪ್ರಭಾವಗಳು

1917ರ ಮುಂಚಿನ ಜಗತ್ತು ಇಂದಿನ ಜಗತ್ತಿನಂತಿರಲಿಲ್ಲ. ಇಪ್ಪತ್ತನೆಯ ಶತಮಾನದ ಆರಂಭದ ಕಾಲ ಇನ್ನೂ ಸಾಮ್ರಾಜ್ಯಗಳ ಕಾಲವಾಗಿತ್ತು. ಬ್ರಿಟಿಷ್, ಜರ್ಮನಿ, ಆಸ್ಟ್ರೋ-ಹಂಗೇರಿಯನ್, ರಷ್ಯನ್, ಜಪಾನಿ ಸಾಮ್ರಾಜ್ಯಗಳು ಜಗತ್ತನ್ನು ತಮ್ಮ ತಮ್ಮಲ್ಲಿ ಪಾಲು ಮಾಡಿಕೊಂಡು ಬಿಟ್ಟಿದ್ದವು. ಇದರಲ್ಲಿ ಇಟಲಿ, ಪೋರ್ಚುಗೀಸರ ಸಾಮ್ರಾಜ್ಯಗಳೂ ಇದ್ದವು. ಜಗತ್ತಿನ ಬಹುದೊಡ್ಡ ಭಾಗದ ಜನಸಂಖ್ಯೆಯು ಸುಲಿಗೆಕೋರ ದೇಶಗಳ ವಸಾಹತುಗಳಲ್ಲಿ ಅರೆ ವಸಾಹತುಗಳಲ್ಲಿ ದಾಳಿ ದಬ್ಬಾಳಿಕೆಗಳಲ್ಲಿ ಕುಗ್ಗಿ ಬಾಳ್ವೆ ನಡೆಸುತ್ತಿದ್ದರು.

ರಷ್ಯಾದ ಅಕ್ಟೋಬರ್ ಕ್ರಾಂತಿಯು ಈ ಮಾದರಿಯ ವಸಾಹತುಶಾಹಿಗೆ ಚರಮಗೀತೆ ಹಾಡಿತು. ಇಂತಹ ವಸಾಹತುಶಾಹಿಯ ಅಂತ್ಯವು ಮೊದಲನೇ ಮಹಾಯುದ್ಧದೊಂದಿಗೆ ಆರಂಭವಾಯಿತು. ಮೊದಲಮಹಾಯುದ್ಧ ಆರಂಭಗೊಂಡಿದ್ದರ ಹಿಂದೆಯೇ ಅಕ್ಟೋಬರ್ ಕ್ರಾಂತಿಯೂ ಗತಿಸಿತು. ಜಾರ್ ಸಾಮ್ರಾಜ್ಯವನ್ನು ಕಿತ್ತೆಸೆದ 50 ವರ್ಷಗಳಲ್ಲಿ ಜಗತ್ತಿನಲ್ಲಿ ಅಂತಹ ಒಂದೇ ಒಂದು ಸಾಮ್ರಾಜ್ಯವು ಹುಡುಕಿದರೂ ಸಿಗದಂತಾಯಿತು.

ಪ್ರಜಾಪ್ರಭುತ್ವಕ್ಕೆ ಕೊಡುಗೆ :

20ನೇ ಶತಮಾನದ ಕೊನೆಯ ಹೊತ್ತಿನಲ್ಲಿ ಮತ್ತು ಈಗಲೂ-ಜಗತ್ತಿನಲ್ಲಿ ಕಾಣಬರುತ್ತಿರುವ ಪ್ರಜಾಪ್ರಭುತ್ವಗಳು ತಮ್ಮದೇ ಕೊಡುಗೆ ಎಂಬಂತೆ



ಬಂಡವಾಳಶಾಹಿಗಳು ಬೀಗುವುದನ್ನು ನೋಡಬಹುದು. ಜಗತ್ತಿನ ವಿವಿಧ ದೇಶಗಳಲ್ಲಿ ನಡೆಯುತ್ತಿದ್ದ, ಬಂಡವಾಳಶಾಹಿ ವಿರೋಧಿಶಕ್ತಿಗಳನ್ನು ಅಲ್ಲಿನ ಸರ್ವಾಧಿಕಾರದ ವಿರುದ್ದ ಪ್ರಜಾಪ್ರಭುತ್ವ ಪರ ಹೋರಾಟದೊಂದಿಗೆ ಬೆಸೆಯಲಾಯಿತು. ಇದಕ್ಕೆ ಅಕ್ಟೋಬರ್ ಕ್ರಾಂತಿಯೇ ದೊಡ್ಡ ಪ್ರೇರಣೆ.

ದುರದೃಷ್ಟವಶಾತ್ ಈ ಹೋರಾಟದಲ್ಲಿ ಕಮ್ಯುನಿಸ್ಟರು ಎಸಗಿದ ತಪ್ಪುಗಳು ಮತ್ತು ಕೆಲವು ದೌರ್ಬಲ್ಯಗಳಿಂದಾಗಿ ಈ ನಿಟ್ಟಿನಲ್ಲಿ ಪೂರ್ಣವಾದ ಯಶಸ್ಸು ದೊರೆಯಲಿಲ್ಲ.

ಫ್ಯಾಸಿಸಂ ವಿರುದ್ಧ ಮಹಾನ್ ತ್ಯಾಗ-ಬಲಿದಾನ

ಆದರೆ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳ ವಿರುದ್ಧದ ಅತಿದೊಡ್ಡ ಹೋರಾಟವೆಂದರೆ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಹೋರಾಟ. ಹಿಟ್ಲರ್ ನೇತೃತ್ವದ ನಾಜಿ ಪಡೆ, ಇಟಲಿ, ಜಪಾನ್‌ನೊಡಗೂಡಿ ಇಡೀ ಜಗತ್ತನ್ನು ತಮ್ಮ ದುಷ್ಟ ಹಿಡಿತಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ಜಗತ್ತಿನ ಮೇಲೆ ಘೋರ ಯುದ್ಧವನ್ನು ಸಾರಿ ಎರಡನೇ ವಿಶ್ವ ಯುದ್ಧ ಎಂಬ ಮಹಾ ಮಾರಣ ಹೋಮವನ್ನೇ ನಡೆಸುತ್ತಿದ್ದಾಗ ಮನುಕುಲ ಕೇಳಿ-ಕಂಡು ಅರಿಯದ ಘೋರ ಹಿಂಸಾಚಾರಗಳನ್ನು ನಡೆಸುತ್ತಿದ್ದಾಗ ಈ ಕ್ರೂರ ಫ್ಯಾಸಿಸ್ಟ್ ಪಡೆಯನ್ನು ನಿರ್ಣಾಯಕವಾಗಿ ಮಣ್ಣು ಮುಕ್ಕಿಸಿ ಜಗತ್ತನ್ನು ಫ್ಯಾಸಿಸಂನ ಭೀಕರ ಅಪಾಯದಿಂದ ಕಾಪಾಡಿದ್ದು, ಸಮಾಜವಾದಿ ಸೋವಿಯತ್‌ನ ಧೀಮಂತ ಹೋರಾಟ. ಮನುಕುಲವನ್ನೇ ಉಳಿಸಿದ ಈ ಹೋರಾಟದಲ್ಲಿ ಸೋವಿಯತ್ ಒಕ್ಕೂಟದ ಎರಡು ಕೋಟಿ ಜನ ಪ್ರಾಣ ತೆತ್ತರು ಎಂದರೆ ಫ್ಯಾಸಿಸಂ ಅಪಾಯದ ಭೀಕರತೆ ಮತ್ತು ಸಮಾಜವಾದಿ ರಷ್ಯಾ ಮಾಡಿದ ಅಪಾರ ತ್ಯಾಗ ಎರಡು ಏಕಕಾಲಕ್ಕೆ ಅರ್ಥವಾಗುತ್ತದೆ. ಈ ಹೋರಾಟದಲ್ಲಿ ಜಗತ್ತಿನಾದ್ಯಂತ ಸಮಾಜವಾದಿ ಶಕ್ತಿಗಳು ವಹಿಸಿದ ಪಾತ್ರವೂ ಅಮೋಘವೇ. ಯುಗೋಸ್ಲೋವಿಯಾ, ಇಟಲಿ, ಫ್ರಾನ್ಸ್, ಗ್ರೀಸ್, ಪೂರ್ವ ಯುರೋಪ್‌ನಲ್ಲಿ ಫ್ಯಾಸಿಸ್ಟ್ ವಿರೋಧಿ ಕಮ್ಯುನಿಸ್ಟರು, ಚೀನಾದಲ್ಲಿನ ಜಪಾನಿ ಫ್ಯಾಸಿಸ್ಟರ ವಿರುದ್ಧ ಕಮ್ಯುನಿಸ್ಟ್ ಗೆರಿಲ್ಲಾಗಳು ನಡೆಸಿದ ಹೋರಾಟವೇನೂ ಕಡಿಮೆ ಮೌಲ್ಯದ್ದಲ್ಲ. ಪಶ್ಚಿಮದ ಬಂಡವಾಳಶಾಹಿ ದೇಶಗಳಲ್ಲಿ ಪ್ರಜಾಪ್ರಭುತ್ವಗಳು ಅರಳುವುದಕ್ಕೆ ಕಮ್ಯುನಿಸ್ಟರು ದೊಡ್ಡ ಕಾಣಿಕೆ ನೀಡಿದರು ಎನ್ನುವುದು ಪರಿಸ್ಥಿತಿಯ ಒಂದು ದೊಡ್ಡ ವ್ಯಂಗ್ಯವಾಗಿದೆ ಮತ್ತು ವಾಸ್ತವವಾಗಿದೆ.

ಸಂಸದೀಯ ಪ್ರಜಾಪ್ರಭುತ್ವದ ವಿಕಾಸ

ಪಾಶ್ಚಿಮಾತ್ಯ ದೇಶಗಳಲ್ಲಿನ ಬಂಡವಾಳಶಾಹಿ ಪ್ರಭುತ್ವಗಳು ತಮ್ಮ ಆರ್ಥಿಕ ನಿರಂಕುಶಾಧಿಕಾರವನ್ನು ಹೇಗಾದರೂ ಮರೆಮಾಚಿ ರಕ್ಷಣೆ ಮಾಡಿಕೊಳ್ಳುವ ಕಾರಣಕ್ಕಾಗಿ ಸಂಸದೀಯ (ಪಾರ್ಲಿಮೆಂಟರಿ) ಪ್ರಜಾಪ್ರಭುತ್ವಗಳನ್ನು ಜಾರಿಗೆ ತರುವಂತಾಯಿತು. ಸೋವಿಯತ್ ರಷ್ಯಾ ದೇಶದಲ್ಲಿ ಜಾರಿಗೆ ಬಂದ ಸಮಾಜವಾದಿ ವ್ಯವಸ್ಥೆಯು-ಪ್ರಜಾಪ್ರಭುತ್ವ ಎಂದರೆ

ನಕ್ಷತ್ರ ಕಳೆದುಹೋಗಬಹುದೇ?

ಕ್ರಾಂತಿಯು ಘಟಿಸಿದ 74 ವರ್ಷಗಳ ನಂತರ 1991ರಲ್ಲಿ ಸೋವಿಯತ್ ಒಕ್ಕೂಟ ಕುಸಿಯಿತು. ಆ ದೇಶದ ಸಮಾಜವಾದಿ ವ್ಯವಸ್ಥೆಯೂ ಅಲ್ಲಿಗೆ ಕೊನೆಯಾಯಿತು. ಅಲ್ಲಿಂದೀಚೆಗೆ ಮಹಾನ್ ಅಕ್ಟೋಬರ್ ಕ್ರಾಂತಿಯ ಕ್ರಾಂತಿಕಾರಿ ಸತ್ವವನ್ನು ನಿಸ್ಸಾರಗೊಳಿಸುವ, ಅದರ ಕ್ರಾಂತಿಕಾರಿ ಸ್ಫೂರ್ತಿಯನ್ನು ಅಳಿಸಿ ಹಾಕುವ ಪ್ರಯತ್ನ ನಿರಂತರವಾಗಿ ನಡೆಯುತ್ತಿವೆ. ಪಂಚಾಂಗ ಕಳೆದು ಹೋಗಬಹುದು, ನಕ್ಷತ್ರ ಕಳೆದು ಹೋಗಬಹುದೇ? ಅಕ್ಟೋಬರ್ ಕ್ರಾಂತಿ ಮನುಕುಲದ ಮುನ್ನಡೆಗೆ, ನಾಗರೀಕತೆಯ ಒಂದು ಹೊಸ ಮನ್ವಂತರ ಕಡೆಗೆ ದಾರಿ ತೋರಿದ ಒಂದು ದಾರಿ ದೀಪ.

ಈ ಅಕ್ಟೋಬರ್ ಕ್ರಾಂತಿಯು ಅಧಿಕಾರ ಕಬಳಿಸುವ ಉದ್ದೇಶದ ಒಂದು ಪಿತೂರಿಯಾಗಿ ರಲಿಲ್ಲ. ಅದೊಂದು ಕ್ಷಿಪ್ರ ಕ್ರಾಂತಿಯೂ ಆಗಿರಲಿಲ್ಲ, ನಿರಂಕುಶ ಜಾರ್, ಪ್ರಭುತ್ವವನ್ನು ಕಿತ್ತೊಗೆದು ಹೊಸ ಸಮಾಜವನ್ನು ಸೃಜಿಸುವ ಖಚಿತ ಉದ್ದೇಶದಿಂದ ರಷ್ಯಾದ ಜನ ಸಮೂಹ ನಡೆಸಿದ ಒಂದು ನೈಜ ಕ್ರಾಂತಿಯಾಗಿತ್ತು.

ಸೋವಿಯತ್ ಒಕ್ಕೂಟದ ಪತನದ ನಂತರ ಈ ಐತಿಹಾಸಿಕ ಸತ್ಯವನ್ನು ಹೂತು ಬಿಡಲು ಪ್ರಯತ್ನಿಸಲಾಗುತ್ತಿದೆ. ಈ ಕ್ರಾಂತಿಯನ್ನು ಒಂದು ಇತಿಹಾಸದ ವಿಕೃತ ತಿರುವು ಎನ್ನುವ ಅಪಪ್ರಚಾರ ನಡೆದಿದೆ. ಇದು ಹಾಗಾಗಿದ್ದರೆ ಜಗತ್ತಿನಾದ್ಯಂತ ಹತ್ತಾರು ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಳು ಹೊಸ ಶಕ್ತಿಯೊಂದಿಗೆ ಚಿಮ್ಮಿಬರಲು, ಇಂಗ್ಲೆಂಡ್. ಜರ್ಮನಿ ಮುಂತಾದ ಸುಲಿಗೆಕೋರ ದೇಶಗಳು ಹಿಡಿದಿಟ್ಟುಕೊಂಡಿದ್ದ, ಹಲವಾರು ವಸಾಹತುಗಳನ್ನು ಅವುಗಳ ಕೈಯಲ್ಲಿಂದ ಜಾರಿ ಹೋಗುವಂತಹ - ಸರಣಿ ವಸಾಹತು ವಿರೋಧಿ ಹೋರಾಟಗಳಿಗೆ, ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನಗಳಿಗೆ ಈ ಕ್ರಾಂತಿ ಒಂದು ಸ್ಫೂರ್ತಿ ಬಿಂದುವಾಗುವುದು ಸಾಧ್ಯವಿತ್ತೇ? ○

ಸಾಮಾಜಿಕ-ಆರ್ಥಿಕ ರಂಗಗಳಲ್ಲಿ ಪ್ರಜೆಗಳಿಗೆ ಸಮಾನ ಅವಕಾಶಗಳನ್ನು ನೀಡುವುದು ಎಂಬ ಪ್ರಬಲವಾದ ಒತ್ತಡವನ್ನು ರೂಪಿಸಿದವು. ಇದರಿಂದಾಗಿ ಬ್ರಿಟನ್, ಫ್ರಾನ್ಸ್, ಮುಂತಾದ ಯುರೋಪಿಯನ್ ದೇಶಗಳಲ್ಲಿ ನಿರುದ್ಯೋಗ ಭತ್ಯೆ, ಆರೋಗ್ಯ ಸೌಲಭ್ಯ, ಸೌಕರ್ಯಗಳನ್ನು ಜನರಿಗೆ ನೀಡಲಾಯಿತು. ಈಗ 1990ರ ನಂತರ ಅಂದರೆ ಸೋವಿಯತ್ ಒಕ್ಕೂಟದ ಕುಸಿತದ ನಂತರ ಬಂಡವಾಳಶಾಹಿ ದೇಶಗಳಲ್ಲೇ ದುಡಿಯುವ ಜನತೆಗೆ ನೀಡಲಾಗಿದ್ದ ಸೌಲಭ್ಯಗಳನ್ನು ಒಂದೊಂದಾಗಿ ಕಿತ್ತುಕೊಳ್ಳುತ್ತಿರುವುದನ್ನು, ನೋಡಿದರೆ, ಅಲ್ಲಿ ಈ ಎಲ್ಲಾ ಸೌಲಭ್ಯಗಳನ್ನು ನೀಡಿರುವುದಕ್ಕೂ ಮತ್ತು ರಷ್ಯಾದ ಸಮಾಜವಾದಿ ಕ್ರಾಂತಿಗೂ -ಸಮಾಜವಾದಿ ಸಾಮಾಜಿಕ ವ್ಯವಸ್ಥೆಗೂ ನೇರ ಸಂಬಂಧ ಇದೇ ಎನ್ನುವುದು ಗೊತ್ತಾಗುತ್ತದೆ.

ಮಹಿಳಾ ಸಮಾನತೆ, ಹಕ್ಕುಗಳು

ತಾವೇ ಜಗತ್ತಿಗೆ ಪ್ರಜಾಪ್ರಭುತ್ವವನ್ನು ತಂದುಕೊಟ್ಟಿದ್ದು ಎಂಬಂತೆ ಬೀಗುವ ಬ್ರಿಟನ್ನಿನಲ್ಲಿ ಪುರುಷರಿಗೆ ಇದ್ದ ಮತದಾನದ ಹಕ್ಕು 1928 ರವರೆಗೂ ಮಹಿಳೆಯರಿಗೆ ಇರಲಿಲ್ಲ ಎಂಬುದನ್ನು ಗಮನಿಸಬೇಕು.

ರಝಾರ್ ಪ್ರಭುತ್ವದ ಕೊನೆಗಾಲ - ಅರಮನೆಯನ್ನು ಮುತ್ತುತ್ತಿರುವ ಕ್ರಾಂತಿಕಾರಿಗಳು



ಸೋವಿಯತ್ ರಷ್ಯಾದಲ್ಲಿ ಮಹಿಳೆಯರ ಬದಲಾದ ಸ್ಥಾನಮಾನ, ಅವರು ಗಳಿಸಿದ ಲಿಂಗ ಸಮಾನತೆಯು ಜಗತ್ತಿನ ಮೇಲೆ ವ್ಯಾಪಕ ಪರಿಣಾಮ ಬೀರಿತು. ಆಂದೋಲನಗಳೂ ಬಲಗೊಂಡವು. ಅದರ ಫಲವೇ 1928ರ ಮಹಿಳೆಯರಿಗೆ ಮತದಾನ ಹಕ್ಕು ನೀಡುವ ಕಾಯ್ದೆ.

ಸಾಮ್ರಾಜ್ಯಶಾಹಿ ದಾಳಿಗಳ ಹೆಚ್ಚಳ:

ಸೋವಿಯತ್ ಒಕ್ಕೂಟ ದುರ್ಬಲವಾದದ್ದು, ಆ ನಂತರ ಕುಸಿದು ಹೋದದ್ದು ಜಗತ್ತಿನ ಮೇಲೆ ಎರಗಲು ಕಾದು ಕೂತಿದ್ದ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಹಬ್ಬವಾಗಿ ಪರಿಣಮಿಸಿದೆ.

ಅಮೇರಿಕಾ ಮತ್ತು ಅದರ ಮಿತ್ರ ಪಡೆಗಳು ಇರಾಕ್‌ನ ಮೇಲೆ 1991ರಲ್ಲಿ ನಡೆಸಿದ ದಾಳಿಗಳು ಅಫಘಾನಿಸ್ಥಾನದ ಮೇಲಿನ ಯುದ್ಧ, ಯುಗೋಸ್ಲಾವಿಯಾ ಮೇಲೆ ದಾಳಿ, ಮತ್ತೆ 2003ರಲ್ಲಿ ಇರಾಕ್ ಮೇಲೆ ಯುದ್ಧ ಇಂತದುದ್ದನ್ನೆಲ್ಲಾ ನೋಡಿದಾಗ ಪ್ರಬಲ ಸೋವಿಯತ್ ಒಕ್ಕೂಟದ ಅಸ್ತಿತ್ವವ ಅದು ಇದ್ದಾಗ ಎಷ್ಟೆಲ್ಲಾ ದೇಶಗಳ ಮೇಲಿನ ದಾಳಿ, ಯುದ್ಧವನ್ನು ತಡೆಗಟ್ಟಿದೆ ಎಂದು ಊಹಿಸಿಕೊಳ್ಳಬಹುದಾಗಿದೆ.

ಇಂದು ಅಮೇರಿಕಾದ ಅಣತಿಯನ್ನು ಪಾಲಿಸಲು ತಯಾರಿಲ್ಲದ ಕ್ಯೂಬಾ, ಉತ್ತರ ಕೊರಿಯಾ, ವೆನುಜುವೆಲಾ, ಇರಾನ್, ಸಿರಿಯಾದಂತಹ ದೇಶಗಳು ಅಮೇರಿಕಾದಿಂದ ಬೆದರಿಕೆಯನ್ನು ಎದುರಿಸಬೇಕಾಗಿದೆ.

ಸೋವಿಯತ್ ರಷ್ಯಾ ಅನುಭವದಿಂದ ಕಲಿಯಬೇಕಾದ ಪಾಠಗಳು

ಜಗತ್ತಿನ ಪ್ರಥಮ ಸಮಾಜವಾದಿ ಕ್ರಾಂತಿಯು ಬಂಡವಾಳಶಾಹಿಯು ಅಷ್ಟೇನೂ ಬೆಳವಣಿಗೆ ಹೊಂದಿರದ ದೇಶದಲ್ಲಿ ಸಂಭವಿಸಿತು. ಲೆನಿನ್‌ರವರು ರಷ್ಯಾದ ನಂತರ ಜರ್ಮನಿಯಲ್ಲಿ, ನಂತರದಲ್ಲಿ ಜಾಗತಿಕ ಸಮಾಜವಾದಿ ಕ್ರಾಂತಿ ಸಂಭವಿಸಲಿದೆ ಎಂದು ಅಂದಾಜಿಸಿದ್ದರು. ಆದರೆ ಜರ್ಮನಿ ಮತ್ತು ಹಂಗೇರಿಯನ್ ಕ್ರಾಂತಿಗಳನ್ನು 1918-19ರಲ್ಲಿ ಬರ್ಬರವಾಗಿ ಹತ್ತಿಕ್ಕಲಾಯಿತು. ಹೀಗಾಗಿ 'ರಷ್ಯಾ ಒಂದೇ ಒಂದು ದೇಶದಲ್ಲಿ ಸಮಾಜವಾದ' ಎಂಬುದು ಬಯಸಿ ಬಯಸಿ ಆಯ್ಕೆ ಮಾಡಿಕೊಂಡದ್ದೇನಾಗಿರಲಿಲ್ಲ. ಬದಲಿಗೆ ಅದು ಅನಿವಾರ್ಯವಾಗಿ ಹೋಯಿತು.

ಬಂಡವಾಳಶಾಹಿಗೂ ಮುಂಚಿನ ಸ್ಥಿತಿಯಲ್ಲಿದ್ದ ಹಿಂದುಳಿದ ರಷ್ಯಾ ಸಮಾಜವನ್ನು ತೀವ್ರವಾಗಿ ಅಭಿವೃದ್ಧಿಪಡಿಸಬೇಕಾದ ಪರಿಸ್ಥಿತಿ, ಜೊತೆಗೆ ಸುತ್ತಮುತ್ತ ಆವರಿಸಿಕೊಂಡ ಸಾಮ್ರಾಜ್ಯಶಾಹಿ ದೇಶಗಳ ಪಿತೂರಿಗಳು-ಇಂತಹ ಸ್ಥಿತಿಯಲ್ಲಿ ಬಂಡವಾಳಶಾಹಿ ದೇಶಗಳ ಅತ್ಯಂತ ಬೆಳವಣಿಗೆ ಹೊಂದಿದ ಆರ್ಥಿಕತೆಯೊಂದಿಗೆ ಸೆಣಸಬೇಕಾದ ಸವಾಲು ಸೋವಿಯತ್ ರಷ್ಯಾಕ್ಕೆ ಎದುರಾಯಿತು.



ಮಹಿಳೆಯರಿಗೆ ಮತದಾನ ಹಕ್ಕು ನೀಡಿಕೆಗಾಗಿ ಹೋರಾಟ

ಕನ್ನಡದ ಕವಿ ಗೋಪಾಲ ಕೃಷ್ಣ ಅಡಿಗರು ಸುಮಾರು 70 ದಶಕದಲ್ಲಿ ಭಾರತವನ್ನು ವ್ಯಾಪಿಸುತ್ತಿದ್ದ ಕಮ್ಯುನಿಸಂನ ಅಪಾಯಗಳ' ಕುರಿತು ಬರೆದ ಲೇಖನವೊಂದರಲ್ಲಿ ಕಮ್ಯುನಿಸಂ ಬಗೆಗೆ ಜನರಲ್ಲಿ ಬಲಗೊಳ್ಳುತ್ತಿದ್ದ ಒಲವು ಅಗತ್ಯವಿಲ್ಲವೆಂದು ಹೇಳುತ್ತಾ, 'ಕಮ್ಯುನಿಸ್ಟ್ ವ್ಯವಸ್ಥೆ ಬಂದರೆ, ಹೊಲಗದ್ದೆಗಳಲ್ಲಿ ಏನು ಚಿನ್ನ ಬೆಳೆಯುತ್ತದೆಯೇ?' ಎಂದು ಪ್ರಶ್ನಿಸುತ್ತಾರೆ. ಈ ಕೆಳಗಿನ ಉದಾಹರಣೆಯನ್ನು ಅವರು ಸರಿಯಾಗಿ ಗಮನಿಸಿದ್ದರೆ ಖಂಡಿತ ಅವರು ತಮ್ಮ ಹೇಳಿಕೆಯನ್ನು ಬದಲಿಸಿಕೊಳ್ಳಬೇಕಾಗುತ್ತಿತ್ತು.

ಜಗತ್ತಿನ ಬಂಡವಾಶಾಹಿಯು 300 ವರ್ಷಗಳಲ್ಲಿ ಮಾಡಿದ ಸಾಧನೆಯನ್ನು ಸಮಾಜವಾದಿ ರಷ್ಯಾ ಕೇವಲ 30 ವರ್ಷಗಳಲ್ಲಿ ಸಾಧಿಸಿತು. 1917 ರಿಂದ 1945 ರ ಹೊತ್ತಿಗಾಗಲೇ ರಷ್ಯಾ ಸರ್ವಾಂಗೀಣ ಪ್ರಗತಿಯನ್ನು ದಾಖಲಿಸಿ, ಫ್ಯಾಸಿಸ್ಟ್ ಶಕ್ತಿಗಳಿಗೂ ನಿರ್ಣಾಯಕ ಸೋಲುಣಿಸಿ, ಜಗತ್ತಿನ ಒಂದು ಸೂಪರ್ ಪವರ್ ಆಗಿ ತಲೆ ಎತ್ತಿ ನಿಂತಿತು. ಮತ್ತು ಆ ಮೂಲಕ ಇಡೀ ಜಗತ್ತೇ ನಿಬ್ಬೆರಗಾಗುವಂತೆ ಮಾಡಿತು.

ಇಷ್ಟೆಲ್ಲಾ ಸಾಧನೆಗಳು, ಹೆಮ್ಮೆಗಳೂ ಇರುವಾಗಲೇ ಸಮಾಜವಾದದ ನಿರ್ಮಾಣದ ಹಾದಿಯಲ್ಲಿ ಹಲವು ಗಂಭೀರ ಕೊರತೆಗಳು, ತಪ್ಪುಗಳು ಆಗಿ ಹೋಗಿದ್ದವು. ಏಕೆಂದರೆ ರಷ್ಯಾ ತುಳಿದ ಸಮಾಜವಾದದ ಹಾದಿಗೆ ಈ ಹಿಂದಿನ ಯಾವುದೇ ಮಾದರಿಗಳಿರಲಿಲ್ಲ. ಯಾವುದೇ ಉದಾಹರಣೆಗಳೂ ಇರಲಿಲ್ಲ. ಇದು ಹೊಚ್ಚ ಹೊಸ ಹಾದಿಯಾಗಿತ್ತು. ಇಲ್ಲಿ ಎಲ್ಲವೂ ಒಂದು ಬಗೆಯ ಪ್ರಯೋಗವಾಗಿತ್ತು. ಇಲ್ಲಿ ಮೊದಲೇ ಯಾರೋ ನಡೆದ ಹೆಜ್ಜೆ ಗುರುತುಗಳು ಇರಲಿಲ್ಲ. ಸಮಾಜವಾದಿ ಸಿದ್ಧಾಂತದ ಬೆಳಕಿದ್ದರೂ ಸಹ ದಾರಿಯನ್ನು ಹೊಸದಾಗಿಯೇ ಮಾಡಿಕೊಂಡು ಮುನ್ನಡೆಯಬೇಕಾಗಿತ್ತು.

ಅಧಿಕಾರಶಾಹಿಯ ಬೆಳವಣಿಗೆ, ಸಮಾಜವಾದಿ ಪ್ರಜಾಪ್ರಭುತ್ವದ ಮೌಲ್ಯಗಳು ಕ್ರಮೇಣ ದುರ್ಬಲವಾದದ್ದು, ಮುಂದುವರಿದ ಆರ್ಥಿಕತೆಯ ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳಲಾರದ ಆರ್ಥಿಕ ವ್ಯವಸ್ಥೆ, ಸೈದ್ಧಾಂತಿಕ ಬದ್ಧತೆ ಕ್ರಮೇಣ ಸವೆದುಹೋಗಿದ್ದು, ಇತ್ಯಾದಿಗಳಿಂದಾಗಿ ಸಮಾಜವಾದಿ ಪ್ರಜ್ಞೆಯಲ್ಲುಂಟಾದ ಕೊರತೆ... ಇಂತಹ ಕಾರಣಗಳಿಂದಾಗಿ ಸೋವಿಯತ್ ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಿತು.

21ನೇ ಶತಮಾನದಲ್ಲಿ ಸಮಾಜವಾದ:

ಸೋವಿಯತ್ ಒಕ್ಕೂಟದ ಪ್ರಯೋಗ ಒಂದು ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶದೊಳಗೆ ಕೈಗೊಂಡ ಪ್ರಯೋಗವಾಗಿತ್ತು. ಹೀಗಾಗಿ ಅಕ್ಟೋಬರ್

ಪುಟ 14ಕ್ಕೆ

ಅಕ್ಟೋಬರ್ ಕ್ರಾಂತಿ ಹಚ್ಚಿದ ದೀಪಗಳ ಸಾಲು

ದೀಪದಿಂದ ದೀಪ ಹಚ್ಚಿಕೊಳ್ಳಬಹುದು ಎನ್ನುವುದು ನಮಗೆಲ್ಲಾ ತಿಳಿದಿರುವುದೇ. ಮನುಷ್ಯ ಕುಲವನ್ನು. ಎಲ್ಲ ಬಗೆಯ ಶೋಷಣೆಯಗಳಿಂದಲೂ ವಿಮೋಚನೆಗೊಳಿಸುವ ಮಹಾನ್ ಮಾನವೀಯ ಉದ್ದೇಶದ ಅಕ್ಟೋಬರ್ ಕ್ರಾಂತಿ ಜಗತ್ತಿನಲ್ಲಿ ಅಂತಹ ಇನ್ನಷ್ಟು ಕ್ರಾಂತಿಗಳಿಗೆ ಸ್ಫೂರ್ತಿಯಾಯಿತು.

ಜಗತ್ತಿನ ಜನಸಂಖ್ಯೆಯ ಸರಿಸುಮಾರು 5ನೇ ಒಂದು ಭಾಗದಷ್ಟು ಜನರನ್ನು ಚೀನಾ ದೇಶ ಸಾಮ್ರಾಜ್ಯಶಾಹಿಗಳ ಹಿಡಿತದಿಂದ ವಿಮೋಚನೆಗೊಂಡು ಸಮಾಜವಾದಿ ಹಾದಿ ಹಿಡಿಯಿತು. ಉತ್ತರ ಕೊರಿಯಾ, ವಿಯೆಟ್ನಾಂಗಳು ಈ ಹಾದಿಗೆ ಹೊರಳಲು ಮತ್ತೆ ಬಹಳ ಕಾಲವೇನೂ ಬೇಕಾಗಲಿಲ್ಲ. ಆ ಕಾರಣಕ್ಕಾಗಿ ದುಷ್ಟ ಅಮೇರಿಕಾದ ನೇರ ಆಕ್ರಮಣವನ್ನದುರಿಸಿ ದೀರ್ಘ ಪ್ರತಿರೋಧ ತೋರಬೇಕಾಗಿ ಬಂತು ಎಂಬುದು ಬೇರೆ ವಿಚಾರ. ಇವುಗಳಲ್ಲಿ ಚೀನಾ ನಿರಂತರ ಶೇ. 9 ರಷ್ಟು ವಾರ್ಷಿಕ ಬೆಳವಣಿಗೆಯ ಮೂಲಕ ಆರ್ಥಿಕ ಅಭಿವೃದ್ಧಿಯಲ್ಲಿ ದಾಪುಗಾಲಿಡುತ್ತಿದೆ. 21ನೇ ಶತಮಾನದ ಮಧ್ಯ ಭಾಗದ ಹೊತ್ತಿಗೆ ಚೀನಾ ದೇಶವು ತನ್ನನ್ನು ಸರಿಗಟ್ಟಿ ತನ್ನ ಹಾದಿಯಲ್ಲಿ ಗಂಭೀರ ಬೆದರಿಕೆಯಾಗಲಿದೆ ದೈತ್ಯ ಸವಾಲೊಡ್ಡಲಿದೆ ಎಂದು ಆತಂಕಗೊಂಡಿರುವ ಅಮೇರಿಕಾ ಅದನ್ನೇದರಿಸಲು ಪೂರಕವಾದ ವ್ಯೂಹ ರಚನೆಗೆ ಯತ್ನಿಸುತ್ತಿದೆ.1959ರಲ್ಲಿ ಅಮೇರಿಕಾದ ಮೂಗಿನ ತುದಿಯಲ್ಲಿರು ಕ್ಯೂಬಾದ ಕ್ರಾಂತಿ ಹಾಗೂ ಆನಂತರ ಈಗಲೂ ಮುಂದುವರಿದಿರುವ ಹೋರಾಟವಂತೂ ಒಂದು ರೋಮಾಂಚನಕಾರಿ ಅಧ್ಯಾಯ. ಸೋವಿಯತ್ ಒಕ್ಕೂಟದ ಕುಸಿತದ ನಂತರ ಕ್ಯೂಬಾ ಬಿಕ್ಕಟ್ಟಿಗೆ ಸಿಲುಕಿದಾಗ ಕ್ಯೂಬಾದ ಕ್ರಾಂತಿ ಜ್ಯೋತಿ ನಂದಿ ಹೋಗುತ್ತದೆ ಎಂದು ಭಾವಿಸಿದವರೇ ಅಧಿಕ. ಹಿನ್ನಡೆ, ನೋವು, ಕಷ್ಟ ನಷ್ಟಗಳ ಪರಂಪರೆಯನ್ನು ತಮ್ಮ ಸಮಾಜವಾದಿ ಬದ್ಧತೆಯಿಂದ ಹಾದು ಗೆದ್ದು ಬಂದ ಕ್ಯೂಬಾದ ಜನತೆ ಕ್ರಾಂತಿ ಜ್ಯೋತಿಯನ್ನು ಆರಲು ಬಿಡಲಿಲ್ಲ.

ನಿರಾಶೆಯ ಕತ್ತಲು, ದುಷ್ಟ ಶಕ್ತಿಗಳು ಹರಿಯಬಿಟ್ಟ ಚಂಡಮಾರುತ, ಬಿರುಗಾಳಿಯಂತಹ ಸನ್ನಿವೇಶದಲ್ಲೂ ಕ್ಯೂಬಾ ಕಾಪಿಟ್ಟ ಕ್ರಾಂತಿಯ ಹಣತೆ ಇದೀಗ ಆತಂಕಗಳನ್ನು ಮೀರಿ ಮಿನುಗುತ್ತಿದೆ. ಮಾತ್ರವಲ್ಲ ಈ ಜ್ಯೋತಿ ಇಡೀ ಲ್ಯಾಟಿನ್ ಅಮೇರಿಕಾವನ್ನೇ ಬೆಳಗುತ್ತಿದೆ.

ವೆನೆಜುವೆಲಾ, ಬೊಲಿವಿಯಾ, ಉರುಗ್ವೆ, ಬ್ರೆಜಿಲ್ ಮುಂತಾದ ದೇಶಗಳಲ್ಲಿ ಇದೀಗ ಎಡಪಂಥೀಯ, ಜನಪ್ರಿಯ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿವೆ. ಅಮೇರಿಕಾ ಪ್ರಣೀತ ಜಾಗತೀಕರಣ ಬುಡಮೇಲಾಗಿದೆ. ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನದ ಮತ್ತೊಂದು ಮೈಲಿಗಲ್ಲಾಗಿದೆ.

ದಾಳಿ, ಲೂಟಿ, ಕೊಳ್ಳೆಗೆ ಪ್ರತಿರೋಧ

ವಿವಿಧ ದೇಶಗಳ ಮೇಲಿನ ಅಮೇರಿಕಾದ ಮತ್ತು ಮಿತ್ರರ ಆಕ್ರಮಣಗಳು ಕೊಳ್ಳೆ, ಲೂಟಿಗಳಿಗೆ ಜಗತ್ತಿನಾದ್ಯಂತ ಪ್ರತಿರೋಧ ತೀವ್ರಗೊಂಡಿದೆ.

ಇರಾಕ್‌ನ್ನು ಬಲಾತ್ಕಾರವಾಗಿ ಅತಿಕ್ರಮಿಸಿಕೊಂಡಿದ್ದರೂ ಅಮೇರಿಕಾ ಮತ್ತು ಮಿತ್ರರಿಗೆ ಆದೇಶದ ಮೇಲೆ ಹಿಡಿತ ದಕ್ಕಿಲ್ಲ. ಅಷ್ಟು ತೀವ್ರವಾಗಿದೆ ಪ್ರತಿರೋಧ. ಜನರ ನಡುವೆ ಸಂಕುಚಿತವಾದವನ್ನು ಪ್ರಚೋದಿಸುವುದನ್ನು ಬಿಟ್ಟು ಅವರಿಗೆ ಬೇರೇನೂ ಮಾಡಲಾಗುತ್ತಿಲ್ಲ. ಅಮೇರಿಕಾ ಬೆಂಬಲಿತ ಇಸ್ರೇಲ್ ಲೆಬನಾನ್ ಮೇಲೆ ನಡೆಸಿದ ಅನಾಗರೀಕ ದಾಳಿಯನ್ನು ಹೆಜ್‌ಬುಲ್ಲಾ ಸಂಘಟನೆ ಧೀಮಂತಿಕೆಯಿಂದ, ಎದುರಿಸಿ ಹಿಮ್ಮೆಟ್ಟುವಂತೆ ಮಾಡಿದೆ.

ಜಾಗತೀಕರಣದ ನೀತಿಗಳ ವಿರುದ್ಧ, ಸಾಮಾಜಿಕ ಭದ್ರತೆ, ಉದ್ಯೋಗ ಕಡಿತದಂತಹ ಸಾಮ್ರಾಜ್ಯಶಾಹಿ ಪ್ರೇರಿತ ನೀತಿಗಳ ವಿರುದ್ಧ ಕಾರ್ಮಿಕ ಆಂದೋಲನ ಬಂಡವಾಳಶಾಹಿ ದೇಶಗಳಲ್ಲೂ ತೀವ್ರಗೊಂಡಿದೆ. ಬೆಳವಣಿಗೆ ಹೊಂದುತ್ತಿರುವ ದೇಶಗಳ ಆಳುವ ವರ್ಗಗಳೂ ಕೂಡ, ಡಬ್ಲ್ಯೂಟಿಓ ಷರತ್ತುಗಳ ಹೆಸರಿನಲ್ಲಿ ಹೇರಲಾಗುತ್ತಿರುವ ನೀತಿಗಳ ವಿರುದ್ಧ ಪರಸ್ಪರ ಸಹಕಾರಕ್ಕೆ ಮುಂದಾಗಬೇಕಾದ ಒತ್ತಡವನ್ನು ಚಳುವಳಿ ನಿರ್ಮಿಸಿದೆ.





ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ

ಅಜಿಜುನ್ ಕಾನ್ಪೂರದ ಪ್ರಸಿದ್ಧ ನರ್ತಕಿ. ಗೌರವದ ಪರದೆ ಹೊದ್ದ ಸಮಾಜದಿಂದ ಕಡೆಗಣಿಸಲ್ಪಟ್ಟ ಸಮಾಜದ ಹೆಣ್ಣು ಅವಳು. ಹಾಡು ನರ್ತನಗಳಿಂದ ಗಿರಾಕಿಗಳಾಗಿ ಬಂದ ಪುರುಷ ವೃಂದವನ್ನು ಖುಷಿ ಪಡಿಸುವವಳು. ಆದರೆ ಸ್ವಾತಂತ್ರ್ಯದ ತಹತಹ ಮಾತ್ರ ಅಜಿಜುನ್‌ಳ ಅಂತರಂಗದ ಸಾಕ್ಷಿಯಾಗಿತ್ತು. ದೇಶದ ವಿಮೋಚನೆಯ ಹೆಬ್ಬಯಕೆ ಅವಳಿಂದ ಏನೆಲ್ಲ ಮಾಡಿಸಿತು.

ಅಜಿಜುನ್ ಎಂಬ ಆಕೆ

ಕಳೆದ ವರ್ಷ ಗೆಳತಿ ಡಾ. ವಸು ಬರೆದ ತುಂಬ ಮಹತ್ವದ ಪುಸ್ತಕ ಓದಿದ್ದೇನೆ. ಚರಿತ್ರೆಗೆ ಸಂಬಂಧಿಸಿದ್ದು, ಮೌಖಿಕ ಇತಿಹಾಸ. ಈವರೆಗೆ ದಾಖಲಾದ ಚರಿತ್ರೆಯೊಳಗಿನ ಎರಡು ಲೈನುಗಳ ನಡುವಿನ ಮೌನಕ್ಕೆ ಮಾತಾಗಿಸುವ ಜರೂರಿಯನ್ನು ವಸು ಕಟ್ಟಿಕೊಟ್ಟಿದ್ದಾರೆ. ಇತಿಹಾಸವೆನ್ನುವುದು ಕಚ್ಚಾ ವರದಿಗಳನ್ನು ಪಕ್ಕಾಕರಿಸಿ ದಾಖಲಿಸುವುದು ಮಾತ್ರವಲ್ಲ. ಅಥವಾ ಸಾಕ್ಷಿಯಾಧಾರ ಸಹಿತ ದೊರೆತವುಗಳ ವಿಶ್ಲೇಷಣೆ ವಿಮರ್ಶೆ ಅಷ್ಟೇ ಅಲ್ಲ. ಅದೊಂದು ಸತ್ಯಾನ್ವೇಷಣೆ. ಎಷ್ಟೋ ಬಾರಿ ಪುರಾವೆಗಳು ಸಿಗದೇ ಇರಬಹುದು. ಆದರೆ ಪರಿಣಾಮಗಳ ಹಿಂದಿನ ಕಾರಣಗಳನ್ನು ವೈಜ್ಞಾನಿಕ ನೆಲೆಯಲ್ಲಿ ಹುಡುಕುತ ಹೊರಡುವಾಗ ಖಂಡಿತ ವರ್ಗ ಸಂಘರ್ಷದ ಪುಟಗಳು ಬಿಚ್ಚಿಕೊಳ್ಳುತ್ತವೆ. ನಾನಿಲ್ಲಿ ಇತಿಹಾಸವೆಂದರೆ ಏನು ಎಂಬುದರ ಪಾರಿಭಾಷಿಕ ಅರ್ಥ ವಿವರಣೆಗೆ ವ್ಯಾಖ್ಯಾನಕ್ಕೆ ಹೋಗುತ್ತಿಲ್ಲ. ಆದರೆ ಇಲ್ಲಿಯವರೆಗೆ ಅಕ್ಷರ ರೂಪದಲ್ಲಿ ದೃಗ್ಗೋಚರಗೊಂಡ ಇತಿಹಾಸದ ಸಾಲುಗಳ ನಡುವಿನ ಖಾಲಿ ಜಾಗದಲ್ಲಿ ಸತ್ಯ ಸಂಗತಿಗಳು ಇನ್ನೂ ಇನ್ನೂ ಇವೆ. ಅಲ್ಲಿ ನೊಂದವರ ಸಾಮಾನ್ಯರ, ಮಹಿಳೆಯರ ದಲಿತರ, ಗಾಥೆಗಳೇ ಇವೆ ಎಂಬುದನ್ನು ಹೇಳಲಿಚ್ಛಿಸುತ್ತಿದ್ದೇನೆ. ಉಳ್ಳವರು ಬರೆದ ಇತಿಹಾಸದ ಪುಟಗಳಿಂದ ಶೋಷಿತರು ಮಾಯಾವಾಗಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ಅಥವಾ ಯಜಮಾನ ಸಂಸದಿತಿಯ ವಕ್ತಾರರು ಬರೆದ ಚರಿತ್ರೆಯಿಂದ ಮಹಿಳೆಯ ಸಾಧನೆ-ಸಂಗತಿಗಳು ಅಸ್ತಿತ್ವ -ಅಸ್ಮಿತತೆಗಳು ದಾಖಲಾಗದೇ ಹೋಗಿವೆ. ಪ್ರಜ್ಞಾಪೂರ್ವಕವಾಗಿಯೂ - ಅಪ್ರಜ್ಞಾಪೂರ್ವಕವಾಗಿಯೂ.

ಲಿಗಿಲಿಗಿ ಎನ್ನುತ್ತಿದ್ದ ಹೋರಾಟದ ಕಿಡಿ

ಈ ಹೊತ್ತು ಇತಿಹಾಸದ ಕುರಿತು ಮಾತನಾಡಲೇಬೇಕಿದೆ. ಇದೇ ತಿಂಗಳ ಮೊದಲವಾದದಲ್ಲಿ ಎಐಜೆಎಂಎಸ್ ಸಭೆಗೆಂದು ಡೆಲ್ಲಿಗೆ ಹೋಗಿದ್ದೆ. ಲೋಕಲಹರ್ ಹಿಂದಿ ವಾರ ಪತ್ರಿಕೆ ಸಿಕ್ಕಿತು. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದವರ ತ್ಯಾಗ ಬಲಿದಾನಗಳ ಕಥನ ಧಾರಾವಾಹಿಯನ್ನು ಆ ಪತ್ರಿಕೆ ಪ್ರಕಟಿಸುತ್ತಿದೆ: ನಮ್ಮ ಜನಶಕ್ತಿಯಂತೆ. ಸಾಮ್ರಾಜ್ಯಶಾಹಿಯ ಅಟ್ಟಹಾಸದ ವಿರುದ್ಧ ಕೋಮುವಾದದ ಪಿತೂರಿಯ ವಿರುದ್ಧ ಸಮತೆಯ ನಾಡಿಗಾಗಿ, ನೈಜ ಸಮಾನತೆಯ ಸ್ವಾತಂತ್ರ್ಯಕ್ಕಾಗಿ ಸಿಡಿದ ಬಂಡಾಯದ ಕಿಡಿಗಳು ಅಸಂಖ್ಯ. ಜನಸಾಮಾನ್ಯರು ಸಾವಿರಾರು ತೊರೆಗಳಾಗಿ ಹರಿದು ಸಾಮ್ರಾಜ್ಯಶಾಹಿ ಲೋಕದ ಸೂರ್ಯ ಮುಣುಗುವಂತೆ ಮಾಡಿದ್ದಾರೆ. ಈ ನೆಲದ ಮೇಲೆ ನಡೆವ-ನಡೆದ ದೌರ್ಜನ್ಯ ಅನ್ಯಾಯಗಳ ವಿರುದ್ಧ ಸೆಣೆಸುವ ತಾಖತ್ತಿರುವುದು ಜನತೆಗೆ. ಹೀಗೆ ಜನ ವಿಭಾಗದ ಎಲ್ಲ ಹಂತಗಳಿಂದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಬಂಡೆದ್ದ ಇತಿಹಾಸವೇ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮ. ಬ್ರಿಟಿಷರು ಇದನ್ನು 'ಸಿಪಾಯಿ ದಂಗೆ' ಮಾತ್ರ ಎಂದು ಕರೆದು ಇತಿಹಾಸದಲ್ಲಿ ಭಾರತದ ಸ್ವಾತಂತ್ರ್ಯದ ಧೀರ ಪರಂಪರೆಯನ್ನು ಮೊಟಕುಗೊಳಿಸಿ ದಾಖಲಿಸಿದರು. ಮಾತ್ರವಲ್ಲ ಸಂಗ್ರಾಮವನ್ನು ಸಮಾಪ್ತಿಗೊಳಿಸುವ ಹುನ್ನಾರ ಮಾಡಿದರು. ಆದರೆ ಸ್ವಾತಂತ್ರ್ಯ ಹೋರಾಟದ ಕಿಡಿ ಬೂದಿ ಮುಚ್ಚಿದ ಕೆಂಡದಂತೆ ಲಿಗಿ ಲಿಗಿ ಅನ್ನುತ್ತಲೇ ಇತ್ತು ಈಗಲೂ ಸಹಾ.

ಪುರುಷರಷ್ಟೇ ಏನು?

ಇಂಥ ಸ್ವಾತಂತ್ರ್ಯ ಹೋರಾಟದ ಪಂಜಿಗೆ ಎಣ್ಣೆಯಾಗಿ ದುಡಿದು ಮಡಿದವರು ಪುರುಷರು ಅಷ್ಟೇ ಏನು? ಇಲ್ಲ. ಅಸಂಖ್ಯ ಸ್ತ್ರೀ ಸಂಕುಲ ತಾವಿದ್ದ ನೆಲೆಯಲ್ಲಿ ಸಮರ ಧೀರ ತ್ಯಾಗದ ಮುನ್ನುಡಿ ಬರೆದಿದ್ದಾರೆ. ಹೀಗೆ ರಣಕಹಳೆ ಊದಿದವರಲ್ಲಿ ಉತ್ತರ ಪ್ರದೇಶದ ಕಾನ್ಪೂರಿನ ಅಜಿಜುನ್ ಸಹ ಒಬ್ಬಳು. ನಿಮಗೆ ಅಚ್ಚರಿಯಾಗಬಹುದು. ಈ ಸಾಹಸಗಾಥೆ ಬರೆದ ಅಜೀಬುನ್ ಕಾನ್ಪೂರು ಘರಾಣಾದ ನರ್ತಕಿ. ಹೇಗೆ ಮಹಿಳೆಯರ ಹಿರಿಮೆ-ಗರಿಮೆಗಳನ್ನು ಇತಿಹಾಸದ ಪುಟಕ್ಕೆ ತರಲೇ ಇಲ್ಲವೋ ಹಾಗೆ ನರ್ತಕಿಯರ ಕೋಠಾ ಕಲಾವಿದೆಯರ ಬದುಕಿನ ಇನ್ನೊಂದು ಮುಖದ ಸಾಮಾಜಿಕ, ರಾಜಕೀಯ, ಸಾಂಸದಿತಿಕ ಹೋರಾಟದ ಬಗ್ಗೆಯೂ ಇತಿಹಾಸ ಮೌನವಾಗಿಯೇ ಇದೆ.

ಅಜಿಬುನ್ ಕಾನ್ಪೂರದ ಪ್ರಸಿದ್ಧ ನರ್ತಕಿ. ಗೌರವದ ಪರದೆ ಹೊದ್ದ ಸಮಾಜದಿಂದ ಕಡೆಗಣಿಸಲ್ಪಟ್ಟ ಸಮಾಜದ ಹೆಣ್ಣು ಅವಳು. ಹಾಡು ನರ್ತನಗಳಿಂದ ಗಿರಾಕಿಗಳಾಗಿ ಬಂದ ಪುರುಷ ವೃಂದವನ್ನು ಖುಷಿ ಪಡಿಸುವವಳು. ಆದರೆ ಸ್ವಾತಂತ್ರ್ಯದ ತಹತಹ ಮಾತ್ರ ಅಜಿಬುನ್‌ಳ ಅಂತರಂಗದ ಸಾಕ್ಷಿಯಾಗಿತ್ತು. 1832 ರಲ್ಲಿ ಲಕ್ನೋದಲ್ಲಿ ಹುಟ್ಟಿದ ಅಜಜುನ್‌ಳ ತಾಯಿಯೂ ನರ್ತಕಿಯೇ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಭುಗಿಲೆದ್ದಾಗ ಅಜಿಜುನ್ ತುಂಬುಹರೆಯದ ಹುಡುಗಿ. ಸಂಸದಿತಿ ಕಲೆಗೆ ಪ್ರಸಿದ್ಧ ನಗರವಾಗಿದ್ದ ಲಕ್ನೋ ಬಿಟ್ಟು ಕಾನ್ಪೂರಿಗೆ ಬರಲು ಸ್ವಾತಂತ್ರ್ಯ ಚಳುವಳಿಗಾಗಿನ ಕಾರಣವಿರಬಹುದೇ? ವಿಮೋಚನೆಯ ಹೆಬ್ಬಯಕೆ ಅವಳಿಂದ ಏನೆಲ್ಲ ಮಾಡಿಸಿತು. ಪರಾವಲಂಬಿಯಾಗಿ ಪರರ ನಿಗ್ರಹದಲ್ಲಿ ಬದುಕು ನಡೆಸುವ ಜಾಯಮಾನ ಅಜಿಜುನ್‌ಳದ್ದಾಗಿರಲಿಲ್ಲ. ಅವಳ ಈ ಸ್ವಾಭಿಮಾನಿ ವ್ಯಕ್ತಿತ್ವವೇ ಅವಳನ್ನು ಸ್ವಾತಂತ್ರ್ಯ ಹೋರಾಟದ ಅಂಗಳಕ್ಕೆ ಕಳಿಸಿತು.

ಪುರುಷ ವೇಷದಲ್ಲಿ

1857 ಜೂನ್ 27 ರಂದು ಕಾನ್ಪೂರದಲ್ಲಿ ಸ್ವಾತಂತ್ರ್ಯ ಬಂಡಾಯಗಾರರು ಬ್ರಿಟಿಷರ ಮೇಲೆ ಸಶಸ್ತ್ರ ದಾಳಿ ಮಾಡಿದ್ದರು. ಅಜಿಬುನ್ ಸಹ ಪುರುಷ ವೇಷದಲ್ಲಿ ಆ ಸಂಗ್ರಾಮದಲ್ಲಿ ಭಾಗವಹಿಸಿದ್ದಳು ಎಂಬುದಿದೆ. ಅಜಿಜುನ್‌ಳ ದೇಶ ಪ್ರೇಮದ ಬಯಕೆಯ ಸಾಕಾರಕ್ಕಾಗಿ ಅವಳಿದ್ದ ನಿವಾಸವು ಮುಖ್ಯ ಕೇಂದ್ರವಾಗಿತ್ತು. ಕಾನ್ಪೂರದಲ್ಲಿನ ನಾನಾ ಸಾಹೇಬರ ಬಂಡಾಯದ ಪ್ರಥಮ ಯಶಸ್ಸಿನ ಸಂಭ್ರಮದಲ್ಲಿ ಭಾರತದ ಬಾವುಟ ಹಾರಿಸಿ ನಡೆಸಲಾದ ಬೃಹತ್ ರ್‍ಯಾಲಿಯಲ್ಲಿ ಅಜಿಜುನ್ ಧೀರತೆಯಿಂದ ಶಾಮೀಲಾಗಿದ್ದಳು. ಅಜಿಜುನ್‌ಳ ಮನೆಯು ಕೇವಲ ಶ್ರೀಮಂತ ಗಿರಾಕಿಗಳು ಬಂದು ಆನಂದಿಸಿ ನಿರ್ಗಮಿಸುವ ತಾಣ ಮಾತ್ರವಾಗಿರಲಿಲ್ಲ. ಬದಲಿಗೆ ಅದೊಂದು ಜೀವ ಪ್ರೇಮಿಗಳ-ಕ್ರಾಂತಿಕಾರಿ ಸೈನಿಕರ ಭೇಟಿಯ ಕೇಂದ್ರವೂ ಆಗಿತ್ತು. ದೇಶಪ್ರೇಮಿ ಸಿಪಾಯಿ ಶಂಸುದ್ದಿನ ಅಜಿಜುನ್‌ಳ ನಿಕಟವರ್ತಿಯಾಗಿದ್ದ. ಬಂಡಾಯ ಘೋಷಣೆಯ ಮೊದಲ ದಿನ ಅವಳ ಮನೆಗೆ ಭೇಟಿಯಿತ್ತು ಯೋಜನೆ ಮಾಡಿದ್ದಿದೆ. ಹಾಗೂ ನಾನಾ ಸಾಹೇಬರ ಸಂಪರ್ಕವೂ ಅವಳಿಗಿತ್ತು. ಬಂಡಾಯಕ್ಕಾಗಿ ಗುಪ್ತ ಮತ್ತು ಉದಾರ ನಿಧಿಯನ್ನು ಸಂಗ್ರಹಿಸಿದ ಅಜಿಜುನ್ ಸ್ವತಃ ತಾನು ಸಹ ದಂಗೆಯಲ್ಲಿ ಭಾಗವಹಿಸಿ ವೀರಾಂಗನೆಯಂತೆ ಸೆಣಸಿರುವಳು. ಅವಳ ಮನೆಯು ಇಂಥ ಕ್ರಾಂತಿಕಾರಿ ಚಟುವಟಿಕೆಯ ತಾಣವಾಗಿರುವುದಕ್ಕಾಗಿಯೇ ಬ್ರಿಟಿಷ್ ಸಾಮ್ರಾಜ್ಯಶಾಹಿ ಕೆಂಗಣ್ಣು ಸದಾ ಅಂಥ ಕೇಂದ್ರಗಳ ಮೇಲಿರುತ್ತಿತ್ತು.

ಅಜಿಜುನ್ ಸ್ವತಃ ಒಂದು ಮಹಿಳೆಯರ ಪಡೆ ಕಟ್ಟಿ, ಹೋರಾಟದ ಕೆಚ್ಚು ತುಂಬಿದ್ದಳು. ಅಲ್ಲದೆ ಸಶಸ್ತ್ರ ಹೋರಾಟಗಾರರ ಎದೆಯಲ್ಲಿ ಸ್ವಾಭಿಮಾನದ ಕಾವು ಸದಾ ಪ್ರಜ್ವಲಿಸುವಂತೆ ಮಾಡುವ ಕ್ರಾಂತಿಕಾರಿ ಚೈತನ್ಯದಂತೆ ಸಂಚರಿಸುತ್ತಿದ್ದಳು. ಅನೇಕ ಬಂಡಾಯಗಾರ ಪಡೆಗಳೊಂದಿಗೆ ನಿಕಟ ಒಡನಾಟ ಹೊಂದಿದ್ದ ಅಜಿಜುನ್ ದಂಗೆಯಲ್ಲಿ ಗಾಯಗೊಂಡವರಿಗೆ. ಸುಶ್ರೂಷೆಯೂ ಮಾಡುತ್ತಿದ್ದಳು. ಬಂಡಾಯಗಾರರಿಗೆ ಮದ್ದು. ಗುಂಡುಗಳನ್ನು ವಿತರಿಸುವ ಪ್ರಮುಖ ಹೊಣೆಯೂ ಹೊತ್ತಿದ್ದಳು. ಇವಳ ಮುಖ್ಯ ಕಾರ್ಯಾಲಯವು ಮದ್ದು-ಗುಂಡು ಸಂಗ್ರಹ ತಾಣದಲ್ಲಿಯೇ ಇದ್ದು ಸದಾ ಕಟ್ಟೆಚ್ಚರಿಂದ ಠಳಾಯಿಸುತ್ತ. ಕಾವಲು ಕಾಯುತ್ತಿದ್ದಳು. ಸಂರಕ್ಷಣೆಯ ಜಾಗೃತೆಗಾಗಿ ಪಿಸ್ತೂಲಿನೊಂದಿಗೆ ಸಂಚರಿಸುತ್ತಿದ್ದಳು. ದಂಗೆಯ ಹೊತ್ತಿನಲ್ಲಿ ತೀವ್ರ ಗುಂಡು ಕಾಳಗದ ಸಮಯದಲ್ಲಿಯೂ ಅಜಿಜುನ್ ಎದೆಗಾರಿಕೆಯಿಂದ ಭರ್ತಿಯಿರುವ ಬಂದೂಕಿನೊಂದಿಗೆ ಸಂಗಾತಿಗಳ ಒಡಗೂಡಿ ಕಾರ್ಯನಿರತಳಾಗಿರುತ್ತಿದ್ದಳು.

ರೊಚ್ಚುಕೆಚ್ಚು

ಹೀಗೆ ಅಜಿಜುನ್ 1857ರ ದಂಗೆಯಲ್ಲಿ ವೀರ ಪಾತ್ರ ನಿಭಾಯಿಸುವ ಮೂಲಕ, ಅಂದಿನ ಚಾರಿತ್ರಿಕ ಜವಾಬ್ದಾರಿಗೆ ಹೆಗಲು ಕೊಟ್ಟಿರುವಳು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಬೇರೆಲ್ಲ ಜನವಿಭಾಗಕ್ಕೆ ಇರುವಂಥ ಪ್ರತಿರೋಧ ರೊಚ್ಚು-ಕೆಚ್ಚು ನರ್ತಕಿಯರಿಗೂ ಇತ್ತು. ಎಂಬುದನ್ನು ಅಜಿಜುನ್‌ಳಂಥವರು ಸಾಬೀತುಗೊಳಿಸಿದ್ದಾರೆ. ಆದ್ದರಿಂದಲೇ ಶ್ರೀಮಂತ ಸಾಂಸದಿತಿಕ ಕಲಾ ಸಾಹಿತ್ಯಿಕ ಕೇಂದ್ರಗಳಾಗಿದ್ದ ಕೋಠಾಗಳ ಮೇಲೆ ಬಂಡಾಯದ ನಂತರದ ದಿನಗಳಲ್ಲಿ ಬ್ರಿಟಿಷರು ಬಾರ್ಬರಿಕ ಧಾಳಿ ಮಾಡಿ ಶೋಚನೀಯ ಸ್ಥಿತಿಗೆ ತಳ್ಳಿದರು. ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದ್ದ ನರ್ತಕಿಯರು ಸಾಮಾನ್ಯರಾಗಿರಲಿಲ್ಲ. ಶಿಕ್ಷಿತರು, ಪ್ರಚಂಡ ಪಾಂಡಿತ್ಯವುಳ್ಳವರು. ಆಕಾಲದ ಸಾಹಿತ್ಯ ಸಂಸದಿತಿ ಲೋಕದ ಪ್ರಾವಿಣ್ಯ ಹೊಂದಿದವರೂ ಆಗಿದ್ದರು. ದಂಗೆಯ ತರುವಾಯ ಕ್ರಾಂತಿಯ ಕಿಚ್ಚು ಆರಿಸುವ ಪಣತೊಟ್ಟ ಬ್ರಿಟಿಷರು ಈ ಕೋಠಾಗಳ ನರ್ತಕಿಯರನ್ನು ಅಕ್ಷರಶಃ ಬೀದಿಗೆ ತಳ್ಳಿದರು. ಅಷ್ಟು ಮಾತ್ರವಲ್ಲ. ಜನ ಮಾನಸದಲ್ಲಿ ಅವರನ್ನು ಕಳಂಕಿತರು ಚಾರಿತ್ರ್ಯ ಹೀನರನ್ನಾಗಿ ಬಿಂಬಿಸಿದರು. ಚರಿತ್ರೆಯಲ್ಲಿ ಇವರ ಸಾಹಿತ್ಯಿಕ ಸಾಂಸದಿತಿಕ ರಾಜಕೀಯ ಪ್ರಜ್ಞೆಯ ನೆರಳೂ ಬೀಳದಂತೆ ನೋಡಿಕೊಂಡರು. ಇವರ ಹೋರಾಟದ ದಾಖಲೆಗಳು ಸಿಗದಂತೆ ಮಾಡಿದರು. ಆದಾಗ್ಯೂ ಅಜಿಜುನ್‌ಳಂಥ ಅನೇಕ ಮಹಿಳೆಯರ ತ್ಯಾಗ-ಬಲಿದಾನಗಳ ಕಾರಣದಿಂದಲೂ ಈ ದೇಶ ಬದಲಾವಣೆಯತ್ತ ಕ್ರಮಿಸಿದ್ದು ಮರೆಯುವಂತಿಲ್ಲ.

ಲೋಕಲಹರ್ ಓದಿ ಮುಗಿಸುವಾಗ ಥಟ್ಟನೆ ಉಮ್‌ರಾವ್‌ಜಾನ್, ಸರ್ದಾರೇ ಬೇಗಂಳಂಥ ನರ್ತಕಿಯರ ನೆನಪು ಮನದಲ್ಲಿ ಮೂಡಿತು. ನಾನು ಮಹಿಳಾ ಸಂಘದ ಕೆಲಸಗಳಿಗಾಗಿ ದ್ವಿಚಕ್ರ ವಾಹನದ ಮೇಲೆ ಊರಿಂದೂರಿಗೆ ಸಂಚರಿಸುವಾಗ, ಚಿಂಚನ್ಸೂರಿನ ದೇವದಾಸಿ ಶರಣಮ್ಮ 'ತಂಗೀ ಕತ್ತಲಾಗಾಕಿನ ಮೊದಲೇ ಬಾ.... ದಿನಮಾನ ಚೆಂದಿಲ್ಲ...' ಅಂದು ಪಕ್ಕದ ಹಳ್ಳಿಯಿಂದ ಹೊರಳಿ ಬರುವವರೆಗೂ ದಾರಿ ಕಾಯುತ ಕೂತಿರುತ್ತಿದ್ದಳು. ಅವಳಿಗೆ ಭೇಟಿಯಾಗಿ ಒಂದು ರೊಟ್ಟಿ ತಿಂದು ಮರಳಿದ ಮೇಲೆ ಸಮಾಧಾನದಿಂದಿರುತ್ತಿದ್ದಳು. ಹೋರಾಟದ ಸಾಗರದ ಸಾವಿರಾರು ನದಿಗಳಿವು.



ಪ್ರೇಮಾ ಕಾರಂತ ಇನ್ನಿಲ್ಲ

ಖ್ಯಾತ ರಂಗಕರ್ಮಿ, ಚಲನಚಿತ್ರ ನಿರ್ದೇಶಕಿ ಪ್ರೇಮಾ ಕಾರಂತರವರು. ಅಕ್ಟೋಬರ್ 29 ರಂದು ನಿಧನರಾಗಿದ್ದಾರೆ. ರಾಜ್ಯ, ರಾಷ್ಟ್ರಪ್ರಶಸ್ತಿಗಳನ್ನು ಪಡೆದ ಪ್ರಸಿದ್ಧ 'ಫಣಿಯಮ್ಮ' ಚಿತ್ರ ಹಾಗೂ ಹಲವು ಮಕ್ಕಳ ನಾಟಕಗಳಿಗಾಗಿ, ರಂಗಭೂಮಿಗೆ ನೀಡಿದ ತಮ್ಮದೇ ವಿಶಿಷ್ಟ ಕೊಡುಗೆಗಳಿಗಾಗಿ ಪ್ರೇಮಾಕಾರಂತ ಹೆಸರಾಗಿದ್ದರು. ಜನಶಕ್ತಿ ಇವರ ಸಾವಿಗೆ ಸಂತಾಪ ಸಲ್ಲಿಸಿದೆ.

- ಸಂ.



ಅಫಘಾನಿಸ್ತಾನದಲ್ಲಿರುವ ನ್ಯಾಟೊ ಸೈನಿಕ ಪಡೆಗಳು

22.10.2007ರ ಹೊತ್ತಿಗೆ ಅಫಘಾನಿಸ್ತಾನದಲ್ಲಿರುವ ಒಟ್ಟು ಸೈನಿಕರ ಸಂಖ್ಯೆ 41,144. ಇದರಲ್ಲಿ ಭಯೋತ್ಪಾದನೆ ನಿಗ್ರಹದ ಹೆಸರಿನಲ್ಲಿ ಧಾಳಿ ನಡೆಸಿದ ಅಮೇರಿಕಾದ್ದು ಸಿಂಹಪಾಲು 15,108. ಇತರೆ ದೇಶಗಳ ವಿವರ ಈ ಕೆಳಗಿನಂತಿದೆ.

ಅಮೇರಿಕಾ	-	15,108
ಇಂಗ್ಲೆಂಡ್	-	7740
ಜರ್ಮನಿ	-	3155
ಇಟಲಿ	-	2395
ಕೆನಡಾ	-	1730
ನೆದರ್‌ಲ್ಯಾಂಡ್	-	1516
ಟರ್ಕಿ	-	1220
ಫ್ರಾನ್ಸ್	-	1073
ಪೋಲೆಂಡ್	-	937
ಆಸ್ಟ್ರೇಲಿಯಾ	-	907
ಸ್ಪೈನ್	-	715
ಇತರರು	-	4648
		41144

ಹಿಂದೆ ಅಫಘಾನಿಸ್ತಾನದ ನಜೀಬುಲ್ಲಾ ಸರಕಾರದ ಆಹ್ವಾನದ ಮೇಲೆ ತನ್ನ ತಡೆಗಳನ್ನು ಕಳಿಸಿದ ಅಂದಿನ ಸೋವಿಯತ್ ಯೂನಿಯನ್ನಿನ ಮೇಲೆ ಹರಿಯಾಯ್ದ ಅಮೇರಿಕಾ ನೇತೃತ್ವದ ನ್ಯಾಟೋ ದೇಶಗಳು ಐದು ವರ್ಷ ಕಳೆದರೂ ತಮ್ಮ ಸೈನ್ಯವನ್ನು ವಾಪಾಸು ತೆಗೆದುಕೊಳ್ಳುವ ಬಗ್ಗೆ ಯಾವುದೇ ಸೊಲ್ಲು ಎತ್ತುತ್ತಿಲ್ಲ.

ರೈತರ ಆತ್ಮಹತ್ಯೆ: ಕೇರಳದಲ್ಲಿ ಕಡಿಮೆಯಾದದ್ದು ಹೇಗೆ?

ಕೇಂದ್ರ ಸರ್ಕಾರ ಸಾಲದ ಬಡ್ಡಿಮನ್ನಾ ಘೋಷಿಸಿದ್ದರೂ, 2004 ರಲ್ಲಿ ಪಡೆದ ಫಲಾನುಭವಿಗಳಿಗೆ ಅನ್ವಯವಾಗುವುದಿಲ್ಲ. ದೊಡ್ಡ ರೈತ ವಿಭಾಗಕ್ಕೆ ಸಿಗದ ಬಡ್ಡಿ ಮನ್ನಾ, ಸಹಕಾರಿ ಬ್ಯಾಂಕ್‌ಗಳಿಂದ ಸಿಗದ ಸಾಲ, ರೈತರಿಗೆ ಮಾರಕವಾದ ಕೇಂದ್ರ ಸರ್ಕಾರದ ಏಷಿಯಾ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ, ರೂಪಾಯಿ ಬೆಲೆ ಹೆಚ್ಚಳ ರಫ್ತು ಬೆಳೆ ಬೆಳೆವ ರೈತರಿಗೆ ಹೊಡೆತ ರೈತರನ್ನು ಆತ್ಮಹತ್ಯೆಗೆ ತಳ್ಳುತ್ತಿವೆ. ಇದಕ್ಕೆಲ್ಲಾ ಕೇರಳ ಸರ್ಕಾರದ ಪರಿಹಾರದ ಪ್ರಯತ್ನವೇ ಅಲ್ಲಿನ ರೈತರ ಆತ್ಮಹತ್ಯೆಯನ್ನು ತೀವ್ರವಾಗಿ ಕಡಿಮೆ ಮಾಡಿದೆ.

ಉತ್ತರ ಭಾರತದ ಪಂಜಾಬ್ ರಾಜಸ್ಥಾನ ಮಧ್ಯಭಾರತದ ಮಹಾರಾಷ್ಟ್ರ, ದಕ್ಷಿಣ ಭಾರತದ ಆಂಧ್ರ, ಕರ್ನಾಟಕ ಹಾಗೂ ಕೇರಳ ರಾಜ್ಯಗಳಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗಿತ್ತು. ಕೇಂದ್ರದಲ್ಲಿ ಯುಪಿಎ ಸರಕಾರ ಅಧಿಕಾರಕ್ಕೆ ಬಂದ ಹೊಸತರಲ್ಲಿ ಬ್ಯಾಂಕುಗಳ ಮೂಲಕ ಸಾಲ ನೀಡಿಕೆ ಹೆಚ್ಚು ಮಾಡಿದ್ದರ ಫಲವಾಗಿ ಹಾಗೂ ಇನ್ನಿತರ ಕಾರಣಗಳಿಂದಾಗಿ ರೈತರ ಆತ್ಮಹತ್ಯೆಯಲ್ಲಿ ಇಳಿಮುಖ ಕಂಡಿತ್ತು. ಆದರೆ ಪುನಃ ರೈತರ ಆತ್ಮಹತ್ಯೆ ಹೆಚ್ಚುತ್ತಿರುವುದನ್ನು ಕಾಣುತ್ತೇವೆ.

ಅಲ್ಲಿ ಆತ್ಮಹತ್ಯೆಗಳು ಕುಗ್ಗಿವೆ

ಕಳೆದ ಜನವರಿಯಿಂದ ಜೂನ್ ತಿಂಗಳವರೆಗಿನ 6 ತಿಂಗಳಲ್ಲಿ ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿ 600ಕ್ಕೂ ಹೆಚ್ಚು ರೈತರ ಆತ್ಮಹತ್ಯೆಗಳು ವರದಿಯಾಗಿವೆ. ಕರ್ನಾಟಕದ ಬೀದರ್, ರಾಯಚೂರು, ಧಾರವಾಡ ಮತ್ತಿತರ ಭಾಗಗಳಲ್ಲಿ ರೈತರ ಆತ್ಮಹತ್ಯೆಗಳು ಮುಂದುವರಿದಿವೆ. ಸಾಮಾನ್ಯವಾಗಿ ವಾಣಿಜ್ಯ ಬೆಳೆ ಬೆಳೆಯುವ ಮಧ್ಯಮ ವರ್ಗದ ರೈತರು ಆತ್ಮಹತ್ಯೆಗೆ ಶರಣುಹೋಗುತ್ತಿದ್ದಾರೆ. ಕಗ್ಗತ್ತಲ ನಡುವೆಯೂ ಬೆಳಕಿನ ಕಿಂಡಿ ಎಂಬಂತೆ ಕೇರಳದಲ್ಲಿ ಮಾತ್ರ ಆತ್ಮಹತ್ಯೆಗೆ ಶರಣಾಗುತ್ತಿರುವ ರೈತರ ಸಂಖ್ಯೆ ತೀವ್ರ ಇಳಿಮುಖಗೊಳ್ಳುತ್ತಿದೆ. ಹೆಸರಾಂತ ಆರ್ಥಿಕತಜ್ಞ ಹಾಗೂ ಕೇರಳ ರಾಜ್ಯ ಯೋಜನಾ ಆಯೋಗದ ಸದಸ್ಯರಾಗಿರುವ ಪ್ರಭಾತ್ ಪಟ್ನಾಯಕ್ ಮತ್ತು ಅಲ್ಲಿನ ರೈತ ಸಂಘಟನೆಯ ಮುಖಂಡರ ಪ್ರಕಾರ ಕೇರಳದಲ್ಲಿ ರೈತರ ಆತ್ಮಹತ್ಯೆ ಹೆಚ್ಚು ಕಡಿಮೆ ನಿಂತಿದೆ. ಕೇರಳದಲ್ಲಿ ಹೆಚ್ಚಿನ ಆತ್ಮಹತ್ಯೆಗಳು ವಾಣಿಜ್ಯ ಬೆಳೆ ಬೆಳೆಯುವ ವೈನಾಡ್ ಜಿಲ್ಲೆಯಲ್ಲಿ ನಡೆದಿದೆ. ವೈನಾಡ್ ಜಿಲ್ಲಾ ಕರ್ಷಕ ಸಂಘರ್ಷ ಸಮಿತಿ ನೀಡಿದ ಅಂಕಿಅಂಶದ ಪ್ರಕಾರ 2001ರಲ್ಲಿ ಆ ಜಿಲ್ಲೆಯಲ್ಲಿ 56 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. 2004ರಲ್ಲಿ 131ಕ್ಕೆ ಏರಿದ್ದು 2005ರಲ್ಲಿ 86, 2006ರಲ್ಲಿ 48ಕ್ಕೆ ಇಳಿದಿದೆ. 2007ರ ಆರಂಭದಲ್ಲಿ ಮಾತ್ರ 7 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡ ವರದಿಯಾಗಿದೆ.

ವಿರುದ್ಧದ ಪರಿಸ್ಥಿತಿ

ಇದಕ್ಕೆ ವಿರುದ್ಧವಾದ ಪರಿಸ್ಥಿತಿ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿದೆ. ವಿದರ್ಭ ಜನಾಂದೋಲನ ಸಮಿತಿ ನೀಡಿದ ವರದಿಯ ಪ್ರಕಾರ 2006ರಲ್ಲಿ 1452 ರೈತ ಆತ್ಮಹತ್ಯೆಗಳು ನಡೆದಿದ್ದರೆ, 2007ರಲ್ಲಿ ಈವರೆಗೆ 827 ಆತ್ಮಹತ್ಯೆಗಳು ಆಗಿವೆ. ಹಾಗೆಯೇ ಆಂಧ್ರಪ್ರದೇಶ ರೈತ ಸಂಘಂ ನೀಡಿದ ಅಂಕಿ ಅಂಶಗಳ ಪ್ರಕಾರ 2004ರಲ್ಲಿ 1709 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು 2006ರಲ್ಲಿ 370ಕ್ಕೆ ಇಳಿದಿದ್ದರೂ, 2007ರಲ್ಲಿ ಸೆಪ್ಟೆಂಬರ್ 23ರವರೆಗೆ 522 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ ಕೇರಳದಲ್ಲಿ ಆತ್ಮಹತ್ಯೆ ಕಡಿಮೆಯಾಗಿದ್ದರೂ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಆತ್ಮಹತ್ಯೆ ಸಂಖ್ಯೆ ಹೆಚ್ಚಾಗಿದೆ.

ಸಾಲದ ಆಯೋಗ ರಚನೆ

ಪ್ರಭಾತ್ ಪಟ್ನಾಯಕ್ ಅವರ ಪ್ರಕಾರ ಕೇರಳದಲ್ಲಿ ಆತ್ಮಹತ್ಯೆ ಕಡಿಮೆಯಾಗಿರುವುದಕ್ಕೆ ಪ್ರಮುಖ ಕಾರಣ ಸಾಲ ಪರಿಹಾರ ಆಯೋಗದ ರಚನೆ ಮತ್ತು ಹೆಚ್ಚು ಆತ್ಮಹತ್ಯೆಗೆ ಒಳಗಾದ ವೈನಾಡು ಜಿಲ್ಲೆಯಲ್ಲಿ ಪ್ರತಿಯೊಂದು ಆತ್ಮಹತ್ಯೆ ಪ್ರಕರಣಗಳಲ್ಲಿ ಸಾಲದ ಪ್ರಮಾಣವನ್ನು ಪರಿಶೀಲಿಸಿ ಅದಕ್ಕೆ ತಕ್ಕ ಪರಿಹಾರವನ್ನು ನೀಡಿದ ಫಲವಾಗಿ ಅಲ್ಲಿನ ರೈತರಲ್ಲಿ ಭರವಸೆ ಮೂಡಿದೆ. ಹಾಗೆಯೇ ಆತ್ಮಹತ್ಯೆಯ ಸಂಖ್ಯೆ ಕಡಿಮೆ ಆಗಿದೆ. ಇಂತಹ ಪರಿಹಾರಕ್ಕಾಗಿ ಈ ವರ್ಷದ ಬಜೆಟ್ಟಿನಲ್ಲಿ 130 ಕೋಟಿ ರೂ.ಯನ್ನು ತೆಗೆದಿರಿಸಲಾಗಿದೆ.

ಆದರೂ ಕೃಷಿಗೆ ಸಂಬಂದಪಟ್ಟಂತೆ ಕೇಂದ್ರ ಸರಕಾರದ 4 ಪ್ರಮುಖ ನೀತಿಗಳು ಕೇರಳ ಮತ್ತು ಇತರ ರಾಜ್ಯಗಳ ರೈತರ ಮೇಲೆ ದುಷ್ಪರಿಣಾಮ ಬೀರಲಿವೆ ಎಂದು ಹೇಳುತ್ತಾರೆ ಪ್ರಭಾತ್ ಪಟ್ನಾಯಕ್.

ಕೇಂದ್ರ ಸರಕಾರ ಇತ್ತೀಚೆಗೆ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದಾಗಿ ಹೇಳಿದ್ದರೂ, ಕೃಷಿ ಬಿಕ್ಕಟ್ಟಿಗೆ ಪ್ರಮುಖ ಕಾರಣವಾದ ಲಾಭದಾಯಕ ಬೆಲೆಯ ವಿಚಾರದಲ್ಲಿ ಏನನ್ನೂ ಹೇಳಲಿಲ್ಲ. ಅಲ್ಲದೆ, ಇತ್ತೀಚೆಗೆ ಘೋಷಿಸಿದ ಬಡ್ಡಿ ಮನ್ನಾ ಕೂಡಾ 2004ರಲ್ಲಿ ಪರಿಹಾರ ಪಡೆದ ಫಲಾನುಭವಿಗಳಿಗೆ ಅನ್ವಯವಾಗುವುದಿಲ್ಲ. ಅಂದರೆ ರೈತ ಸಮುದಾಯದ ಬಹು ದೊಡ್ಡ ವಿಭಾಗಕ್ಕೆ ಬಡ್ಡಿ ಮನ್ನಾ ಕೂಡಾ ಸಿಗುವುದಿಲ್ಲ.

2. ರಾಜ್ಯ ಸಹಕಾರಿ ಬ್ಯಾಂಕುಗಳಿಗೆ ಮರುಸಾಲವನ್ನು ನೀಡುವ ಕೇಂದ್ರ ಸರಕಾರ ನಿಯಂತ್ರಿತ ನಬಾರ್ಡ್ ಎಂಬ ಹಣಕಾಸು ಸಂಸ್ಥೆಯು ಕೆಟ್ಟ ಸಾಲಗಳನ್ನು (ಎನ್‌ಪಿಎ) ಹೊಂದಿರುವ ಬ್ಯಾಂಕುಗಳಿಗೆ ಸಾಲ ನೀಡುವುದಿಲ್ಲ ಎಂದು ಬೆದರಿಕೆ ಹಾಕಿದೆ. ರಾಜ್ಯ ಸಹಕಾರಿ ಬ್ಯಾಂಕುಗಳಿಗೆ ನಬಾರ್ಡ್ ಸಾಲ ನೀಡದಿದ್ದಲ್ಲಿ, ಆ ಬ್ಯಾಂಕುಗಳು ರೈತರಿಗೆ ಸಾಲ ನೀಡುವುದನ್ನು ನಿಲ್ಲಿಸಬೇಕಾಗುತ್ತದೆ. ಆಗ ಪುನಃ ರೈತರು ಖಾಸಗಿ ಲೇವಾದೇವಿಗಾರರಲ್ಲಿಗೆ ಹೋಗಿ ಹೆಚ್ಚು ಬಡ್ಡಿ ತೆರಬೇಕಾಗುತ್ತದೆ. 'ವಿಷಚಕ್ರ' ಸುತ್ತುತ್ತದೆ.

3. ಇತರೆ ಏಷಿಯಾ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಕೇಂದ್ರ ಸರಕಾರ ಸಹಿ ಹಾಕಿದುದರ ಫಲವಾಗಿ ವಾಣಿಜ್ಯ ಬೆಳೆ ಬೆಳೆಯುವ ರೈತರಿಗೆ ಹಾನಿಯಾಗಲಿದೆ. ಇತರೆ ದೇಶಗಳಲ್ಲಿ ದೊರಕುವ ಕಡಿಮೆ ದರದ ವಾಣಿಜ್ಯ ಬೆಳೆಗಳಿಂದಾಗಿ, ಅದನ್ನು ಆಮದು ಮಾಡಿಕೊಳ್ಳುವ ದೊಡ್ಡ ವ್ಯಾಪಾರಸ್ಥರಿಗೆ ಹಾಗೂ ಅದನ್ನು ಕೈಗಾರಿಕಾ ಉತ್ಪನ್ನಗಳಿಗೆ ಬಳಸುವ ಉದ್ದಿಮೆದಾರರಿಗೆ ಪ್ರಯೋಜನವಾದರೂ ರೈತರಿಗೆ ಹಾನಿಯಾಗಲಿದೆ. ಆದರೆ ಹಾನಿಗೊಳಗಾದ ರೈತರಿಗೆ ಸರಕಾರದಿಂದಾಗಲೀ, ಉದ್ದಿಮೆದಾರರಿಂದಾಗಲೀ ಪರಿಹಾರವಿಲ್ಲ.

4. ರೂಪಾಯಿ ಬೆಲೆಯಲ್ಲಿ ಹೆಚ್ಚಳ ಕಾಣುತ್ತಿರುವುದರಿಂದ ರಫ್ತು ವ್ಯಾಪಾರದ ಮೇಲೆ ಅವಲಂಬಿತವಾಗಿರುವ ವಾಣಿಜ್ಯ ಬೆಳೆಗಳಾದ ತೆಂಗು, ಕಾಫಿ, ಯಾಲಕ್ಕಿ, ಕರಿಮೆಣಸು ಇತ್ಯಾದಿ ಬೆಳೆಗಳನ್ನು ಬೆಳೆಯುವ ರೈತ ಕಂಗಾಲಾಗಿದ್ದಾನೆ. ಅಂದರೆ ಒಂದು ವರ್ಷದ ಹಿಂದೆ 1 ಡಾಲರಿಗೆ ಸಾಧಾರಣ 48 ರೂ.ವರೆಗೆ ಸಿಗುತ್ತಿತ್ತು. ಇಂದು ಅದು ಸುಮಾರು 40 ರೂ.ಗೆ ಕುಸಿದಿದೆ. ಡಾಲರು ದುರ್ಬಲವಾಗಿ ರೂಪಾಯಿ ಬಲಗೊಂಡಿದೆ. ಆ ಪ್ರಕಾರ ಹಿಂದೆ 1000 ಡಾಲರಿನ ಯಾಲಕ್ಕಿ ಮಾರಾಟ ಮಾಡಿದರೆ 48,000 ರೂ. ಸಿಗುತ್ತಿತ್ತು. ಈಗ 1000 ಡಾಲರ್ ಬೆಲೆಯ ಯಾಲಕ್ಕಿ ಮಾರಾಟ ಮಾಡಿದರೆ, 40,000 ರೂ. ಮಾತ್ರ ಸಿಗುತ್ತದೆ. ಇದರಿಂದ ರೈತನಿಗೆ ಸಿಗುವ ಬೆಲೆ ಕಡಿಮೆಯಾಗುತ್ತದೆ. ಇದಕ್ಕೆ ಪರಿಹಾರವಾಗಿ ಚಿಕ್ಕಾಸೂ ಕೂಡ ಕೊಡಲು ಸಾಧ್ಯವಿಲ್ಲವೆಂದು ವಾಣಿಜ್ಯ ಮಂತ್ರಿ ಕಮಲ್‌ನಾಥ್ ಹಾಗೂ ಹಣಕಾಸು ಮಂತ್ರಿ ಚಿದಂಬರಂ ಘೋಷಿಸಿದ್ದಾರೆ. ಆದ್ದರಿಂದ ರಫ್ತು ಆಧಾರಿತ ವಾಣಿಜ್ಯ ಬೆಳೆ ಬೆಳೆಯುವ ರೈತ ದಿವಾಳಿಯಾಗುತ್ತಾನೆ.

ಒಟ್ಟಾರೆಯಾಗಿ ಜಾಗತೀಕರಣದ ಭಾಗವಾಗಿ ಜಗತ್ತು ಕಿರಿದಾಗುತ್ತಿರುವ ಸಂದರ್ಭದಲ್ಲಿ 'ರೈತ ಸಮುದಾಯ' ಜರ್ಜರಿತವಾಗುತ್ತಿದೆ. ಇಂದಿನ ಸಂದರ್ಭದಲ್ಲಿ ಆತ್ಮಹತ್ಯೆಯಲ್ಲ ಸಂಘರ್ಷ ಎಂಬ ಘೋಷಣೆ ಹಳ್ಳಿಯಿಂದ ದಿಲ್ಲಿಯವರೆಗೆ ಮೊಳಗಬೇಕಾಗಿದೆ.

■ ಬಾಲಕೃಷ್ಣ ಶೆಟ್ಟಿ



ಇದು ರೈತರ ಆತ್ಮಹತ್ಯೆಯಲ್ಲವೇ?

ಇತ್ತೀಚೆಗೆ ರೈತರ ಆತ್ಮಹತ್ಯೆಯ ಸಂಖ್ಯೆಯನ್ನು ಕಡಿಮೆ ಮಾಡಿ ತೋರಿಸುವ ಕೆಲಸವನ್ನು ಹಲವು ರಾಜ್ಯ ಸರಕಾರಗಳು ಮಾಡುತ್ತಿವೆ. ಉದಾಹರಣೆಗೆ ಕರ್ನಾಟಕ ಸರಕಾರವು ನೀಡಿದ ಅಧಿಕೃತ ಅಂಕಿ ಅಂಶದ ಪ್ರಕಾರ 2000-01ರಲ್ಲಿ 2630 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2003-04ರಲ್ಲಿ ಅದು 706ಕ್ಕೆ ಇಳಿದಿದ್ದು, 2004-05ರಲ್ಲಿ 271 ಹಾಗೂ 2005-06ರಲ್ಲಿ 124ಕ್ಕೆ ಇಳಿದಿದೆ. ಆದರೆ ವಾಸ್ತವ ಪರಿಸ್ಥಿತಿಯೇ ಬೇರೆ. ಇದು ಯಾಕೆ?

ಯಾವುದೇ ದೂರದೃಷ್ಟಿಯಿಲ್ಲದೆ ಜಾಗತೀಕರಣ ನೀತಿಗಳನ್ನು ಜ್ಯಾರಿಗೊಳಿಸಿದ ಸಂದರ್ಭದಲ್ಲಿ ಕೃಷಿ ಬಿಕ್ಕಟ್ಟಿನಿಂದಾಗಿ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು ವಿಪರೀತಕ್ಕೇರಿದಾಗ ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಎಸ್.ಎಂ.ಕೃಷ್ಣ ಸರಕಾರ ವೀರೇಶ್ ಸಮಿತಿಯನ್ನು ನೇಮಿಸಿತು. ಆ ವರದಿಯ ಒಂದು ಪ್ರಮುಖ ಅಂಶವೆಂದರೆ ನೇರವಾಗಿ ಕೃಷಿಗೆಂದು ಬ್ಯಾಂಕಿನಿಂದ ಸಾಲ ಪಡೆದು ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡರೆ ಮಾತ್ರ ಅದನ್ನು ರೈತನ ಆತ್ಮಹತ್ಯೆಯೆಂದು ಪರಿಗಣಿಸಿ ಸರಕಾರದಿಂದ ಕುಟುಂಬದವರಿಗೆ ಪರಿಹಾರ ನೀಡಲಾಗುತ್ತಿತ್ತು. ಇಲ್ಲವಾದರೆ ಇಲ್ಲ. ಇದರಿಂದ ಅಂಕಿಅಂಶದ ಪ್ರಕಾರ ರೈತರ ಆತ್ಮಹತ್ಯೆ ಕಡಿಮೆ ಆಗಿದೆ. ಆದರೆ ವಾಸ್ತವವಾಗಿ ಇದು ಸರಿಯಲ್ಲ.

ಉದಾಹರಣೆಗೆ ರೈತ ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಸಿಗದೆ, ಮಗಳ ಮದುವೆಗೋ ಹಿರಿಯರ ವೈದ್ಯಕೀಯ ವೆಚ್ಚಕ್ಕೋ ಸಾಲ ಮಾಡಿದರೆ, ಆ ಸಾಲ ತೀರಿಸಲಾಗದೆ ರೈತ ಆತ್ಮಹತ್ಯೆ ಮಾಡಿಕೊಂಡರೆ, ಅದು ಕೃಷಿ ಬಿಕ್ಕಟ್ಟಿನಿಂದಾಗಿ ಉಂಟಾದ ಆತ್ಮಹತ್ಯೆಯಲ್ಲ! ಸರಕಾರದ ಕಾನೂನಿನ ಪ್ರಕಾರ ಅಂತಹವರಿಗೆ ಪರಿಹಾರವಿಲ್ಲ!

ಸರಕಾರದ ನೀತಿ ಎಷ್ಟು ಕಠೋರವಾಗಿದೆಯೆಂದರೆ, ಸಂಪ್ರದಾಯದ ಪ್ರಕಾರ ಜಮೀನು ತಂದೆಯ ಹೆಸರಿನಲ್ಲಿದ್ದು, ಮಗ ಬೇಸಾಯ ಮಾಡುತ್ತಿದ್ದರೆ, ಅದರಿಂದ ಉಂಟಾದ ನಷ್ಟದಿಂದ ಮರುಗಿದ ಮಗ ಆತ್ಮಹತ್ಯೆ ಮಾಡಿಕೊಂಡರೆ ಅದು ಕೃಷಿ ಬಿಕ್ಕಟ್ಟಿನಿಂದ ಉಂಟಾದ ಆತ್ಮಹತ್ಯೆಯಲ್ಲ. ಏಕೆಂದರೆ ಸರಕಾರಿ ದಾಖಲೆಗಳ ಪ್ರಕಾರ ಜಮೀನು ಮಗನ ಹೆಸರಿನಲ್ಲಿ ಇಲ್ಲವಲ್ಲ. ಆದ್ದರಿಂದ ಆತ್ಮಹತ್ಯೆ ಮಾಡಿಕೊಂಡವನು ರೈತನಲ್ಲ.

ಇದು ಜನಸಾಮಾನ್ಯರ ಬಗ್ಗೆ ಕಾಳಜಿ ಇಲ್ಲದ ಅಧಿಕಾರದ ಅಂಧಕಾರದಲ್ಲಿ ಮುಳುಗಿರುವ ರಾಜಕಾರಣಿಗಳ ಮಾತು. ಆದ್ದರಿಂದಲೇ ಅಂದು ವೀರೇಶ ಸಮಿತಿಯ ವರದಿಯನ್ನು ಮುಂದಿಟ್ಟುಕೊಂಡು, 'ಎಸ್.ಎಂ.ಕೃಷ್ಣರವರು ಹೇಳಿದ ಮಾತು, "ರೈತ ಪರಿಹಾರದ ಹಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ." ಇಂದು ಶಂಕರ್ ಸಿಂಘ್ ವಘೇಲಾ ಅದೇ ಮಾತನ್ನು ಮುಂದುವರಿಸುತ್ತಿದ್ದಾರೆ. 'ವಿದರ್ಭದ ರೈತ ಆಲಸಿ, ಆದ್ದರಿಂದ ದುಡಿಯದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ' ಎಂದು ಹೇಳಿದ್ದಾರೆ.

ಸಂಕಟಗಳಿಂದ ದೇವದಾಸಿಯರ ಮುಕ್ತಿಗಾಗಿ ಹೋರಾಟ

ದೇವದಾಸಿ ನಿಷೇಧ ಕಾನೂನು 1982 ರಲ್ಲಿ ಜಾರಿಗೆ ಬಂತು. ಆದರೂ ಕೂಡ ಇಲ್ಲಿಯವರೆಗೆ ಸರಿಸುಮಾರು 25ವರ್ಷಗಳವರೆಗೂ ಈ ಪದ್ಧತಿಗೆ ಕಡಿವಾಣ ಹಾಕಲು ಯಾವ ಸರಕಾರಕ್ಕೂ ಸಾಧ್ಯವಾಗಿಲ್ಲ. ಗ್ರಾಮೀಣ ಪ್ರದೇಶದ ಮೂಢನಂಬಿಕೆಗಳ ಸುಳಿಗೆ ಸಿಲುಕಿ ಆಚೆಬಾರದೆ ಬದುಕು ಸಾಗಿಸುತ್ತಿರುವ ಹಾಗೂ ಮೇಲುವರ್ಗದ ಕಪಿಮುಷ್ಠಿಯಲ್ಲಿ ಸಿಲುಕಿ ಒದ್ದಾಡುತ್ತಿರುವ ಭೂ ಮಾಲಕರ ಗುಲಾಮರಾಗಿ ಜೀವನದ ನೊಗ ಎಳೆಯುತ್ತಿರುವ ದಲಿತರನ್ನು ದಲಿತ ಮಹಿಳೆಯರನ್ನು ತಮ್ಮ ಕಾಮವಾಂಛೆ ತೀರಿಸಿಕೊಳ್ಳುವ ಬಯಕೆಯಿಂದ ಗ್ರಾಮೀಣ ಪ್ರದೇಶದ ಮೇಲುವರ್ಗ ದೇವದಾಸಿ ಎಂಬ ಅನಿಷ್ಟ ಪದ್ಧತಿಯನ್ನು ಜಾರಿಗೆ ತಂದಿದೆ.

ಅದು ಇಲ್ಲಿಯವರೆಗೆ ಕಣ್ಣಿಗೆ ಕಂಡರೂ ಕಾಣದಂತೆ ಅವಿರತವಾಗಿ ಸಾಗುತಿದೆ. ದಲಿತರು ಹಿಂದುಳಿದವರು ಜಾಗೃತರಾಗಿ ಸಾಕ್ಷರರಾಗಿ ಸಂಘಟಿತರಾಗಿ ಈ ಅನಿಷ್ಟ ಪದ್ಧತಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ.

ಮನೆಯ ಅಂಗಳದಲ್ಲಿ ಆಡುವ ಹಾಲುಗಲ್ಲದ ಹಸುಗೂಸನ್ನು ಜೀವನದ ಕುರಿತಂತೆ ಏನೊಂದು ತಿಳುವಳಿಕೆ ಇಲ್ಲದ ವಯಸ್ಸಿನಲ್ಲಿ, ಸುಂದರ ಕನಸುಗಳನ್ನು ಕಂಡು ಚಂದದ ಜೀವನ ರೂಪಿಸಿಕೊಳ್ಳುವ ದಿನಗಳಲ್ಲಿ, ಅವಳಿಗೆ ಅರಿವಿಲ್ಲದಂತೆ ಬಲವಂತವಾಗಿ ಬಲತ್ಕಾರದಿಂದ ದೇವದಾಸಿ ಪದ್ಧತಿಗೆ ದೂಡುವ ವ್ಯವಸ್ಥೆ ಇದು. ಒಂದು ಜೀವವನ್ನು ಯಾವ ರೀತಿ ಕಾಡಿಸಿ ನೋಯಿಸಿ ಬೀದಿಗೆ ಬೀಳಿಸಿ ಯಾರ ಸಹಕಾರ ಇಲ್ಲದೆ ಜೀವನದ ಕೊನೆ ಘಟ್ಟದಲ್ಲಿ ನೀರು, ಕೂಳಿಗೂ ಪರದಾಡುವ ಸ್ಥಿತಿಗೆ ತಳ್ಳುಲಾಗುತ್ತದೆ. ಈ ವ್ಯವಸ್ಥೆಗೆ ಹಿಡಿಶಾಪ ಹಾಕಿ ಅನಾಥ ಸಾವು ಸಾಯುವ ದುರಂತ ಈ ಮಹಿಳೆಯರದ್ದು. ಅಂತಹ ಲಕ್ಷ ಲಕ್ಷ ತಾಯಂದಿರ ನೋವು, ಅಳಲು, ಅಸಹಾಯಕತೆ ಯಾವ ಸರ್ಕಾರವು ಕೇಳುವ ಕೆಲಸ ಮಾಡಿಲ್ಲ. ಅಂತಹ ಮಹಿಳೆಯ ಹೊಟ್ಟೆಗೆ ಅನ್ನ ಹಾಕುವ ಕೆಲಸವಾಗಿಲ್ಲ. ಆಕೆಯ ತಲೆಗೊಂದು ಸೂರು ನೀಡುವ ಚಿಂತೆ ಯಾರಿಗೂ ಇಲ್ಲ. ಆ ತಾಯಿಗೆ ನಿವೃತ್ತಿ ವೇತನ ವೃದ್ಧಾಪ್ಯವೇತನ ಯಾವುದಕ್ಕೂ ಸರ್ಕಾರ ಸ್ಪಂದಿಸುತ್ತಿಲ್ಲ. ಆಕೆಯ ಕೈಗಳಿಗೆ ಕನಿಷ್ಠ ಕೂಲಿ ನೀಡುವ ಕನಸು ಯಾರಿಗೂ ಇಲ್ಲ. ಆದೆಲ್ಲಾ ಒತ್ತಟ್ಟಿಗಿರಲಿ ದೇವದಾಸಿ ಎಂಬ ಅನಿಷ್ಟ ಪದ್ಧತಿಯಿಂದ ಸಾವಿರಾರು ಮುಗ್ಧ ಕೂಸುಗಳನ್ನು ರಕ್ಷಿಸುವ ಕಾಳಜಿಯೂ ಸರಕಾರಕ್ಕಿಲ್ಲ.

ರಾಜ್ಯದಲ್ಲಿರುವ ದೇವದಾಸಿಯರ ನಿರ್ದಿಷ್ಟ ಅಂಕಿ ಅಂಶ ಸರ್ಕಾರಕ್ಕೆ ಗೊತ್ತಿಲ್ಲ. ಆ ದಿಸೆಯಲ್ಲಿ ಸರ್ವೆ ಕಾರ್ಯ ಮುಗಿಸಿ ಆ ತಾಯಂದಿರಿಗೆ ದೇವದಾಸಿ ಪ್ರಮಾಣಪತ್ರ ಕೊಡಬೇಕು. ಅದರಂತೆ ಜೂನ್ 12, 2007ರಂದು ಸರ್ಕಾರ ಒಪ್ಪಿಕೊಂಡಿರುವ ನಿವೃತ್ತಿ ವೇತನ ಶೀಘ್ರದಲ್ಲಿ ಜಾರಿಯಾಗಬೇಕು. ದೇವದಾಸಿಯರಿಗೆ ಸೂರು ನೀಡುವ ಕೆಲಸವಾಗಬೇಕು. ದೇವದಾಸಿಯರಿಗೆ ಅಂಗನವಾಡಿ ಸಹಾಯಕಿಯ ಕೆಲಸ ನೀಡಬೇಕು. ಅಲ್ಲದೆ ಅವರ ಕಲಿತಂತಹ ಹೆಣ್ಣು ಮಕ್ಕಳಿಗೆ ಅಂಗನವಾಡಿ ಕಾರ್ಯಕರ್ತರ ಹುದ್ದೆ ಒದಗಿಸಬೇಕು. ದೇವದಾಸಿಯರಿಗೆ ಅಂತ್ಯೋದಯ ಹಳದಿ ಪಡಿತರ ವ್ಯವಸ್ಥೆ ಮಾಡಿ ಹಸಿದ ಹೊಟ್ಟೆಗೆ ತುತ್ತು ಅನ್ನ ನೀಡುವ ದೊಡ್ಡ ಕೆಲಸವಾಗಬೇಕು.

ಈ ದಿಸೆಯಲ್ಲಿ ಮೇಲಿನ ಎಲ್ಲಾ ಬೇಡಿಕೆಗಳನ್ನಿಟ್ಟು ದೇವದುರ್ಗದಲ್ಲಿ 06.10.2007 ರಂದು ದೇವದಾಸಿ ವಿಮೋಚನಾ ಸಂಘದಿಂದ ಒಂದು ದಿನದ ಧರಣಿ ನಡೆಸಲಾಯಿತು. ಈ ಹೋರಾಟದಲ್ಲಿ ನೂರಾರು ದೇವದಾಸಿಯರು ತಮ್ಮ ಕೆಲಸ ಬದಿಗೊತ್ತಿ ಕೂಲಿಯನ್ನು ಮರೆತು ಆಸೆಯ ಕಣ್ಣುಗಳಲ್ಲಿ ಕಷ್ಟದ ಕಂಬನಿ ತುಂಬಿಕೊಂಡು. ಸುಡುವ ಭೂಮಿಯ ಲೆಕ್ಕಿಸದೆ ಉತ್ಸಾಹದ ಹೆಜ್ಜೆ ಹಾಕುತ್ತಾ, ಉರಿವ ಬಿಸಿಲಿಗಂಜದೆ, ಬೀಸುವ ಝಳಕ್ಕೆ ಹೆದರದೆ ಆಳುವ ಜನರ ವಿರುದ್ಧ, ಶೋಷಣೆಯ ಸಮಾಜದ ವಿರುದ್ಧ ದೊಡ್ಡ ಧ್ವನಿ ಎತ್ತಿದ್ದರು. ತಹಶೀಲ್ದಾರ್ ಕಛೇರಿಯ ಮುಂದೆ ನಡೆದ ಈ ಹೋರಾಟದ ತೀವ್ರತೆ ಕಂಡ ತಹಶೀಲ್ದಾರ್ ಕೂಡಲೇ ಮಹಿಳೆಯರ ಸಮ್ಮುಖದಲ್ಲಿ ಬಂದು ಸದ್ಯದಲ್ಲಿಯೇ ದೇವದಾಸಿಯರ ಸರ್ವೆ ಮುಗಿಸಿ ಪ್ರಮಾಣ ಪತ್ರ ಕೊಡುವ ಹಾಗೂ ಅಂತ್ಯೋದಯ ಕಾರ್ಡ್ ನೀಡುವ ಭರವಸೆ ನೀಡಿದರು. ವಸತಿ ಯೋಜನೆಯಡಿ ಎಲ್ಲಾ ದೇವದಾಸಿಯರಿಗೆ ಮನೆ ನೀಡುವುದಾಗಿ, ಹೊಸದಾಗಿ ಬಂದಿರುವ ಅಂಗನವಾಡಿಯಲ್ಲಿ ದೇವದಾಸಿಯರಿಗೆ ಮತ್ತು ಅವರ ಮಕ್ಕಳಿಗೆ ಕೆಲಸ ನೀಡುವುದಾಗಿ ಭರವಸೆ ನೀಡಿದ ನಂತರ ಹೋರಾಟವನ್ನು ಹಿಂತೆಗೆದು ಕೊಳ್ಳಲಾಯಿತು. ಹೋರಾಟದ ನೇತೃತ್ವವನ್ನು ದೇವದಾಸಿ ವಿಮೋಚನಾ ಸಂಘದ ಗೌರವಾಧ್ಯಕ್ಷ ಶಂಶುದ್ದೀನ್ ನಾಗಡದಿನ್ನಿ, ಅಧ್ಯಕ್ಷರಾದ ದೇವಮ್ಮ ಕಾರ್ಯದರ್ಶಿ ಸೀತಾ, ಸಿ.ಐ.ಟಿ.ಯು.ನ ಗಿರಿಯಪ್ಪ ಪೂಜಾರ, ಪ್ರಾಂತ ರೈತ ಸಂಘದ ಹನುಮನಗೌಡ ಮದರಕಲ್, ನರಸಣ್ಣ ನಾಯಕ, ಕೃಷಿ ಕೂಲಿ ಕಾರ್ಮಿಕರ ಸಂಘದ ತಿಪ್ಪಯ್ಯ ನಾಯಕ, ಗ್ರಾಮ ಪಂಚಾಯತ್ ನೌಕರ ವರ್ಗದ ಜೆ.ಮಲ್ಲಿಕಾರ್ಜುನ ವಹಿಸಿದ್ದರು.

ವರದಿ: ಶಂಶುದ್ದೀನ್ ನಾಗಡದಿನ್ನಿ

ಗಡಿಗಳು ಗೋಡೆಗಳೇ?

ಪುಟ 2 ರಿಂದ

ಹಂಚಿಕೊಳ್ಳುವ ಸಂಸದಿತಿಯನ್ನು ಮರೆಯಬೇಕಾಗಿದೆ.

ಆರ್ಥಿಕ ಬಲ ಭಾಷೆಗೆ ಬಲ ತಂದುಕೊಡುತ್ತದೆಂಬುದು ಸರ್ವವಿಧಿತವಾದ ವಿಚಾರ. ಬ್ರಿಟಿಷರ ಆರ್ಥಿಕ ಸಾಮರ್ಥ್ಯ ಇಂಗ್ಲೀಷ್‌ಗೆ ಮಾನ್ಯತೆಯನ್ನು ತಂದುಕೊಟ್ಟಿತು. ಹಾಗೆಯೇ ಇಂದು ಚೀನಾ ಮತ್ತು ಜಪಾನ್ ತಮ್ಮ ಆರ್ಥಿಕ ಬಲವನ್ನು ಹೆಚ್ಚಿಸಿಕೊಳ್ಳುವ ಮೂಲಕ ಯುರೋಪ್, ಅಮೇರಿಕಾ ರಾಷ್ಟ್ರಗಳು ಚೀನಿ ಹಾಗೂ ಜಪಾನಿ ಭಾಷೆಗಳ ಕಲಿಕೆ ಆದ್ಯತೆಯನ್ನು ಪಡೆದುಕೊಳ್ಳುತ್ತಿದೆ.

ಭಾಷಾವಾರು ರಾಜ್ಯಗಳು

ಭಾಷಾವಾರು ಕಲ್ಪನೆಗೆ ಮೊದಲು ಚಾಲನೆ ಕೊಟ್ಟವರು ಗಾಂಧೀಜಿ. 1920ರಲ್ಲಿ ಗಾಂಧೀಜಿ ಕಾಂಗ್ರೆಸ್‌ನ್ನು ಪ್ರವೇಶಿಸಿದಾಗ ಅದಕ್ಕೊಂದು ಸ್ವರೂಪವನ್ನು ಕೊಟ್ಟರು. ಭಾಷಾವಾರು ಆಧಾರದ ಮೇಲೆ ಪ್ರದೇಶ ಕಾಂಗ್ರೆಸ್ ಎಂದು ಕಾಂಗ್ರೆಸ್‌ನ್ನು ವಿಕೇಂದ್ರೀಕರಿಸಿದರು. ಇದೇ ಮುಂದುವರಿದು ಸ್ವಾತಂತ್ರ್ಯ ಚಳುವಳಿಯ ಜೊತೆ ಜೊತೆಯಲ್ಲಿ ಭಾಷಾವಾರು ಪ್ರಾಂತ್ಯಗಳು ತಮ್ಮ ಐಡೆಂಟಿಟಿಗಾಗಿ ಹೋರಾಡ ತೊಡಗಿದವು. ಕರ್ನಾಟಕದ ಏಕೀಕರಣ ಹೋರಾಟ ಆರಂಭವಾಯಿತು. ಆಲೂರು ವೆಂಕಟರಾಯರು ಕರ್ನಾಟಕ ಗತ ವೈಭವವನ್ನು ಬರೆದರು. ಬಿ.ಎಂ.ಶ್ರೀ ಅವರು ಹಳ್ಳಿ ಹಳ್ಳಿಗಳಲ್ಲಿ ಕನ್ನಡದ ಪ್ರಜ್ಞೆಯನ್ನು ಬೆಳೆಸಿದರು. ಮುದವೀಡು ಕೃಷ್ಣರಾವ್ ಅವರಿಂದ ಕುವೆಂಪುವರೆಗೆ ಕವಿಗಳು, ಸಾಹಿತಿಗಳು, ರಾಜಕಾರಣಿಗಳು, ಪತ್ರಿಕೆಗಳು, ಸಂಘ ಸಂಸ್ಥೆಗಳು ಇದಕ್ಕಾಗಿ ಹೋರಾಟ ನಡೆಸಿದರು. ನೆರೆಹೊರೆಯ ರಾಜ್ಯಗಳೂ ತಮ್ಮ ತಮ್ಮ ರಾಜ್ಯಗಳಲ್ಲಿ ಕನ್ನಡಿಗರಂತೆಯೇ ಹೋರಾಟ ಮಾಡಿದ್ದಾರೆ. ಅದರಲ್ಲೂ ಆಂಧ್ರಪ್ರದೇಶ ಮುಂಚೂಣಿ ಯಲ್ಲಿತ್ತು. ರಾಜ್ಯ ಪುನರ್ ವಿಂಗಡಣಾ ಸಮಿತಿ 1956ರಲ್ಲಿ ಕರ್ನಾಟಕದ ಗಡಿಯನ್ನು ಗುರುತಿಸಿತು. ಕನ್ನಡ ಭಾಷಾ ಬಹುಸಂಖ್ಯಾತರಿರುವ ಕಾಸರಗೂಡು, ಊಟಿ, ಶ್ರೀಶೈಲ, ಮಡಕಶಿರಾ ಮುಂತಾದ ಪ್ರದೇಶಗಳು ಕರ್ನಾಟಕದಿಂದ ಹೊರಗುಳಿದವು. ಹಾಗೆಯೇ ಪರಭಾಷಾ ನೆಲೆಗಳು ಕರ್ನಾಟಕದ ಒಳಸೇರಿದವು. ಗಡಿಯನ್ನು ಗುರುತಿಸುವಾಗ ಹಳ್ಳಿ, ಅಥವಾ ಊರುಗಳು ಘಟಕಗಳಾಗದೆ ಜಿಲ್ಲೆಗಳನ್ನು ಘಟಕಗಳಾಗಿ ನೋಡಲಾಯಿತು. ಇಂತಹ ರಾಜಕೀಯ ಗಡಿಯನ್ನು ಗುರುತಿಸುವಾಗ ಮೇಲೆ ಚರ್ಚಿಸಿದ ರಾಜಕೀಯ ಅಂಶಗಳು, ನಿರಂತರ ವಲಸೆಯಿಂದ ಬದಲಾಗುವ ಭೌಗೋಳಿಕ ನೆಲೆಗಳು, ಭಾಷಾ ನೆಲೆಯ ಹೋರಾಟಗಳು, ರಾಜಕೀಯ ಒತ್ತಡಗಳು ಕಾರಣವಾಗಿವೆ.

ದ್ವಿಭಾಷಾ ನೆಲೆಗಳು

ಎರಡು ಭಾಷಾ ಪ್ರದೇಶದ ಎಲ್ಲೆಯಲ್ಲಿ ಬದುಕುವ ಜನರನ್ನು ವಿಭಿನ್ನವಾಗಿ ನೋಡಬೇಕಾದ ಅಗತ್ಯವಿದೆ. ಸಹಜವಾಗಿ ಅವರು ಎರಡು ಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಕರ್ನಾಟಕ -ಆಂಧ್ರ ಗಡಿಯಲ್ಲಿ ಬದುಕುವ ಜನರು ಕನ್ನಡ - ತೆಲುಗು ಭಾಷೆಗಳೆರಡನ್ನು [illegible]. ಮತ್ತ ಕೆಲವರು ಕನ್ನಡ- [illegible] ಗಳನ್ನು ತಮ್ಮದಾಗಿ [illegible]

ಬರಹವನ್ನು ಮುಂದುವರೆಸಿದರೂ, ಸಂಪರ್ಕ ಮಾಧ್ಯಮವಾಗಿ ತೆಲುಗು ಭಾಷೆಯನ್ನು ಬಳಸುತ್ತಿದ್ದಾರೆ. ಕೋಲಾರದ ಕೆಲವು ಶಾಲೆಗಳಲ್ಲಿ ಉರ್ದು ಹೆಚ್ಚಾಗಿ ಬಲ್ಲ ಮಕ್ಕಳಿಗೆ ಕನ್ನಡದ ಓದು ಬರಹ ತೊಡಕಾಗುತ್ತಿದೆ. ಬೆಳಗಾಂನ ಭಾಗದಲ್ಲಿ ಕನ್ನಡ ಬಲ್ಲವರಾದರೂ ಮರಾಠಿಯನ್ನು ಹೆಚ್ಚಾಗಿ ಬಳಸುವ ಜನ ವಾಸಿಸುತ್ತಿದ್ದಾರೆ. ಹಾಗೆಯೇ ಶ್ರೀ ಶೈಲಂನ ಕನ್ನಡಿಗರು ತಮ್ಮ ರಾಜ್ಯದ ಕಾರಣಕ್ಕಾಗಿ ತೆಲುಗನ್ನು ಕಲಿತರೂ ಕನ್ನಡ ಅವರ ಮಾತೃಭಾಷೆ ಅಥವಾ ಸಂಪರ್ಕ ಭಾಷೆಯಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂದು ಹೊಸ ಸೂತ್ರವನ್ನು ಕಂಡುಕೊಳ್ಳಬೇಕಾಗಿದೆ.

ದ್ವಿಭಾಷಿಗರಿಗಾಗಿ ಸರಿಯಾದ ಚಿಂತನೆಯಿಲ್ಲದೆ ಗಡಿ ಪ್ರದೇಶದ ಜನ ನರಳುವಂತಾಗಿದೆ. ಇಂದಿನ ಗಡಿ ಸಮಸ್ಯೆಗಳನ್ನು ಪರಿಗಣಿಸುವಾಗ ಒಂದು ಭಾಷೆಯನ್ನಾಡುವ ಜನರು ಮತ್ತೊಂದು ರಾಜ್ಯದಲ್ಲಿರಬೇಕೆ ಬೇಡವೇ ಎಂದು ಹೋರಾಡುವುದಕ್ಕಿಂತ ಆಧುನಿಕತೆಯ ಅನಿವಾರ್ಯತೆ ಗಳಿಗೆ ಅನುಗುಣವಾಗಿ ಹೆಚ್ಚು ವಿಸ್ತಾರವಾದ ತಳಹದಿಯ ಮೇಲೆ ಯೋಜನೆಗಳು ರೂಪಿತ ವಾಗಬೇಕು. ಗಡಿಗಳು, ರಾಜ್ಯಗಳು ಆಡಳಿತದ ಅನುಕೂಲಕ್ಕಾಗಿ ಮತ್ತು ಸಂಸದಿತಿಯ ರಕ್ಷಣೆಗಾಗಿ ಇವೆಯೇ ಹೊರತು, ಜನರ ಪ್ರಗತಿಯ ದೃಷ್ಟಿಯಿಂದ ಗಡಿಗೆರೆಗಳನ್ನು ಮೀರಿದ ಬಾಂಧವ್ಯ ಬೆಳೆಯಬೇಕು. ಬೆಳಗಾಂನ ಸಮಸ್ಯೆಗೆ ಈ ನಿಟ್ಟಿನಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ. ಬೆಳಗಾಂನ ಮರಾಠಿಗರು ತಮ್ಮ ಮಕ್ಕಳನ್ನು ಬಯಸಿದಲ್ಲಿ, ಮಹಾರಾಷ್ಟ್ರದಲ್ಲಿ ಓದಿಸಲು ಅವಕಾಶ ಕಲ್ಪಿಸಬೇಕು. ಬೆಳಗಾಂ ಪ್ರದೇಶದ ಶಾಲೆಗಳಲ್ಲಿ ಕನ್ನಡ ಮತ್ತು ಮರಾಠಿ ಎರಡೂ ಭಾಷೆಯ ಅಧ್ಯಯನಕ್ಕೆ ಅವಕಾಶ ಕಲ್ಪಿಸಬೇಕು. ಗಡಿ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸಬೇಕು. 'ಗಡಿ' ಎಂದರೆ ಅಭಿವೃದ್ಧಿಯ ದೃಷ್ಟಿಯಿಂದಲೂ ಅಂಚಿನ ಜನರೆಂದು [illegible]ಬೇಕಿಲ್ಲ. ಅಭಿವೃದ್ಧಿಯಲ್ಲಿ [illegible] ಅಸಮತೋಲನವನ್ನು ತಪ್ಪಿಸಿದರೆ [illegible] ಗಡಿ [illegible] ಹೋರಾಟಗಳೂ [illegible].

[illegible]ಗಾಗಿ

ಹೋರಾಡುವುದು ಎಷ್ಟು ಮುಖ್ಯವೋ ಅದರೊಳಗೆ ಬದುಕುತ್ತಿರುವ ಅಲ್ಪ ಸಂಖ್ಯಾತರ ಭಾಷೆಗಳನ್ನು ಉಳಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಲಿಪಿ ಇರುವ ಇಲ್ಲದಿರುವ, ಭಾಷೆಗಳ ಉಳಿವು ಈ ನೆಲದ ಜವಾಬ್ದಾರಿ. ಯಾವ ಭಾಷೆ ಸತ್ತರೂ ಅದರ ಜೊತೆ ಜ್ಞಾನ ಭಂಡಾರ ನಾಶವಾದಂತೆ.

ಬೆಂಗಳೂರಿನಲ್ಲಿ ನವೆಂಬರ್ 12ರಂದು ಕಾರ್ಮಿಕ ಸಂಘಗಳ ಜಂಟಿ ರಾಜ್ಯ ಸಮಾವೇಶ

ಅಸಂಘಟಿತ ಕಾರ್ಮಿಕರಿಗೆ ಸಂರಕ್ಷಣಾತ್ಮಕ ಶಾಸನಕ್ಕಾಗಿ ಮತ್ತು ಡಿಸೆಂಬರ್ 4 ಮತ್ತು 5ರಂದು ದೇಶವ್ಯಾಪಿಯಾಗಿ ನಡೆಯುವ ಸತ್ಯಾಗ್ರಹವನ್ನು ಯಶಸ್ವಿಗೊಳಿಸಲು ನವೆಂಬರ್ 12ರಂದು ರಾಜ್ಯ ಸಮಾವೇಶವನ್ನು ನಡೆಸಲು ರಾಜ್ಯದ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾಸಮಿತಿ ನಿರ್ಧರಿಸಿದೆ.

ಅಕ್ಟೋಬರ್ 19ರಂದು ಬೆಂಗಳೂರಿನ ಸೂರಿಭವನದಲ್ಲಿ ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಎಚ್.ವಿ.ಅನಂತಸುಬ್ಬರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಭೆಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಸೇರಿದಂತೆ, ಎಐಟಿಯುಸಿ, ಸಿಐಟಿಯು, ಯುಟಿಯುಸಿ, ಟಿಯುಸಿಸಿ, ಬ್ಯಾಂಕ್, ವಿಮೆ, ರಕ್ಷಣಾ ವಲಯ; ರೈಲ್ವೆ ಹಾಗೂ ಕೇಂದ್ರ ಸರ್ಕಾರಿ ನೌಕರರ ಸಂಘಗಳ ರಾಜ್ಯ ಮುಖಂಡರು ಭಾಗವಹಿಸಿದ್ದರು.

ರಾಜ್ಯ ಸಮಾವೇಶ

ಸ್ಥಳ : ಗುರುನಾನಕ್ ಭವನ, (ಸಮಯ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ) ವಸಂತನಗರ ಕ್ವೀನ್ಸ್ ರಸ್ತೆ ಹತ್ತಿರ, ಬೆಂಗಳೂರು.

ಜಿಲ್ಲಾ ಸಮಾವೇಶ : ಎಲ್ಲಾ ಜಿಲ್ಲೆಗಳಲ್ಲಿ ನವೆಂಬರ್ 25ರೊಳಗೆ ಸಮಾವೇಶಗಳನ್ನು ನಡೆಸಲು ನಿರ್ಧರಿಸಲಾಗಿದೆ.

ನವೆಂಬರ್ 7 ರಂದು ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲಿ ರಾಷ್ಟ್ರೀಯ ಪ್ರತಿಭಟನಾ ದಿನವನ್ನು ಆಚರಿಸಲಾಗುವುದು

ಜನಶಕ್ತಿ ಓದುಗ ಬಂಧುಗಳೇ, ಚಂದಾದಾರ, ಏಜೆನ್ಸಿದಾರರೇ ದಯಮಾಡಿ ನಿಮ್ಮ ದೂರನ್ನು ಇಲ್ಲಿ ಕೊಡಿ, ವಿಚಾರಣೆಯನ್ನು ಇಲ್ಲೇ ಮಾಡಿ

'ಜನಶಕ್ತಿ' ಪತ್ರಿಕೆಯ ಚಂದಾದಾರರನ್ನು ತಲುಪದೇ ಇರುವುದು, ತಡವಾಗಿ ತಲುಪುವುದು ಇಂತಹ ವಿಷಯಗಳಲ್ಲಿ [illegible]

[illegible]

ಮೊಬೈಲ್ : 9486431594

[illegible]

ಮೈಕ್ರೋಸಾಫ್ಟ್ ಜೊತೆ ಒಪ್ಪಂದ ಬೇಕೆ ?

ಎಷ್ಟೋ ರಾಜ್ಯಗಳು ಸಾಫ್ಟ್‌ವೇರ್ ಬಳಕೆಗೆ ಯಾವುದೇ ಶುಲ್ಕ-ಬೆಲೆ ತೆರಬೇಕಾಗಿಲ್ಲದ್ದ 'ಲೈನೆಕ್ಸ್' ಬಳಕೆ ಮಾಡುತ್ತಿದ್ದರೆ ನಮ್ಮ ರಾಜ್ಯ ಸರ್ಕಾರ ಸುಲಿಗೆಕೋರ 'ಮೈಕ್ರೋಸಾಫ್ಟ್'ನೊಂದಿಗೆ, ಒಪ್ಪಂದ ಮಾಡಿಕೊಂಡಿದೆ ದೋಷಪೂರಿತ ಕನ್ನಡ ಬಳಕೆಯೇ ಸರ್ಕಾರಕ್ಕೆ ಖುಷಿಯೇ.

ಕಳೆದ ತಿಂಗಳು ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಮೈಕ್ರೋಸಾಫ್ಟ್ ಕಂಪನಿಯೊಂದಿಗೆ ತಿಳುವಳಿಕೆ ಪತ್ರವೊಂದಕ್ಕೆ ಸಹಿ ಹಾಕಿದ್ದಾರೆ. ಒಂದು ಪರಿಣಾಮಕಾರಿ ಮತ್ತು ಪಾರದರ್ಶಕ ವ್ಯವಸ್ಥೆಯುಳ್ಳ ಸಾರ್ವಜನಿಕ ಆಡಳಿತಕ್ಕಾಗಿ ಈ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಪತ್ರಿಕಾ ವರದಿಗಳು ತಿಳಿಸಿವೆ.

ಬೃಹತ್ ಬಹುರಾಷ್ಟ್ರೀಯ ಕಂಪನಿಯಾಗಿರುವ ಮೈಕ್ರೋಸಾಫ್ಟ್, ಒಂದು ಜಾಗತಿಕ ಮಟ್ಟದ ದೈತ್ಯ ಏಕಸ್ವಾಮ್ಯ ಕಂಪನಿಯಾಗಿದೆ. ಇಂಥಹ ಕಂಪನಿಯೊಡನೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದವಾದರೂ ಎಂಥಹುದು ಎಂದು ಅರಿಯಬೇಕಾದರೆ, ಮೊದಲಿಗೆ, ಮೈಕ್ರೋಸಾಫ್ಟ್ ಕಂಪನಿಯು ತಾನು ಸರ್ಕಾರಕ್ಕೆ ನೀಡಲಿರುವ (ಮೂಗಿಗೆ ತುಪ್ಪ ಸವರುವ) ನೆರವುಗಳತ್ತ ಒಮ್ಮೆ ಕಣ್ಣು ಹಾಯಿಸಬೇಕು.

ಮೈಕ್ರೋಸಾಫ್ಟ್‌ನ ಡಿಜಿಟಲ್ ತಂತ್ರಜ್ಞಾನದ ಆಮಿಷ:

ಶಿಕ್ಷಣ ಕ್ಷೇತ್ರಗಳು, ಸರ್ಕಾರದಿಂದ ನಾಗರೀಕರಿಗೆ ಒದಗಿಸುವ ಸೇವೆಗಳು, ಇ-ಆಡಳಿತ, ಮಾಹಿತಿ ತಂತ್ರಜ್ಞಾನ ನಿರ್ವಹಣೆ ಮುಂತಾದ ಕ್ಷೇತ್ರಗಳಲ್ಲಿ ಕಾಗದ-ರಹಿತ ಆಡಳಿತ ಒದಗಿಸಲು ಮೈಕ್ರೋಸಾಫ್ಟ್ ಕಂಪನಿಯು ಸಾಫ್ಟ್‌ವೇರ್ ಉತ್ಪನ್ನಗಳನ್ನು ಅಳವಡಿಸಿಕೊಳ್ಳುವತ್ತ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಡಿಜಿಟಲ್ ಹೆದ್ದಾರಿಯಲ್ಲಿ ಹೆಚ್ಚೆಚ್ಚು ಮಾಹಿತಿಯನ್ನು ಅತಿ ಕಡಿಮೆ ಸಮಯದಲ್ಲಿ ರವಾನಿಸಲು ಸರ್ಕಾರಕ್ಕೆ ನೆರವು ನೀಡಲು ತಾನು ಶ್ರಮಿಸುವುದಾಗಿ ಕಂಪನಿ ಹೇಳಿಕೆ ನೀಡಿದೆ.

ಇದರ ಭಾಗವಾಗಿ, ವಿದ್ಯಾರ್ಥಿಗಳಿಗೆ ಶಿಕ್ಷಣ ಕಾರ್ಯಕ್ರಮವನ್ನು ಕಂಪನಿಯು ಹಮ್ಮಿಕೊಂಡಿದೆ. ಇದಕ್ಕಾಗಿ ಸರ್ಕಾರಿ ಸಂಸ್ಥೆಯಾದ ಮಾಹಿತಿ ತಂತ್ರಜ್ಞಾನ ಶಿಕ್ಷಣ ಗುಣಮಟ್ಟ ಮಂಡಳಿ (ಬೈಟ್ಸ್) ಯೊಂದಿಗೆ ತಿಳುವಳಿಕೆ ಪತ್ರವೊಂದಕ್ಕೆ ಕಂಪನಿಯು ಸಹಿ ಹಾಕಿದ್ದು, ಮೈಕ್ರೋಸಾಫ್ಟ್ ಶಿಕ್ಷಣ ಮೈತ್ರಿ ಕಾರ್ಯಕ್ರಮದ ಭಾಗವಾಗಿ, ಏಳು ತಿಂಗಳ ಕಾಲದ ತರಬೇತಿ ಕಾರ್ಯಕ್ರಮವನ್ನು ಯೋಜಿಸಿದೆ. ಕಂಪನಿಯು ಇತ್ತೀಚಿನ ಸಾಫ್ಟ್‌ವೇರ್ ಅಭಿವೃದ್ಧಿ ಸಾಧನಗಳು ಮತ್ತು ಉತ್ಪನ್ನಗಳನ್ನು ವಿದ್ಯಾರ್ಥಿಗಳಿಗೆ ನೀಡುವುದಾಗಿ ಮತ್ತು ತಾನು ಆರಂಭಿಸಿರುವ 'ಶಿಕ್ಷಕರ ಸಂಪರ್ಕ ಸೇತುವೆ' ಕಾರ್ಯಕ್ರಮದ ಮೂಲಕ ಜಗತ್ತಿನಾದ್ಯಂತ ಇತರೆ ಶಿಕ್ಷಕರೊಂದಿಗೆ ಸಂಪರ್ಕ ವ್ಯವಹಾರ ಹೊಂದಲು ಶಿಕ್ಷಕ/ಉಪನ್ಯಾಸಕರಿಗಾಗಿ ತಾನು ವೆಬ್‌ಸೈಟ್ ಒಂದನ್ನು ಸ್ಥಾಪಿಸುವುದಾಗಿ ತಿಳಿಸಿದೆ. ತರಬೇತುದಾರರ ತರಬೇತಿ ಕಾರ್ಯಕ್ರಮವನ್ನು ಸಹ ಆಯೋಜಿಸುವುದಾಗಿ ಅದು ತಿಳಿಸಿದೆ.

ಮೈಕ್ರೋಸಾಫ್ಟ್ ಕಂಪನಿಯಿಂದ ಕನ್ನಡಕ್ಕೆ ದುರ್ಗತಿ

ಕಂಪನಿಯು ತಾನು ಈ ಹಿಂದೆ ಮಾರುಕಟ್ಟೆಗೆ ಬಿಡುಗಡೆ ಮಾಡಿರುವ 'ವಿಂಡೋಸ್ - ಎಕ್ಸ್‌ಪಿ' ಎಂಬ ಆಪರೇಟಿಂಗ್ ಸಿಸ್ಟಂನಲ್ಲಿ ಅಳವಡಿಸಿರುವ ಕನ್ನಡ ಭಾಷೆಯಲ್ಲಿ ಪಡಿಮೂಡುವ ಅಕ್ಷರಗಳಲ್ಲಿ ಹಲವಾರು ದೋಷಗಳಿವೆ. ಇದರ ಬಗ್ಗೆ ಅಂದಿನಿಂದಲೂ ಕನ್ನಡ ಬಲ್ಲ ಸಾವಿರಾರು ತಂತ್ರಜ್ಞರು ಕಂಪನಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರೂ



ಕಂಪನಿಯು ಆ ತಪ್ಪುಗಳನ್ನು ಸರಿಪಡಿಸದೆ ಕನ್ನಡ ಭಾಷೆಯನ್ನು ಕೊಲ್ಲುವ ಕಾಯಕವನ್ನು ಇಂದಿಗೂ ಮುಂದುವರಿಸಿದೆ. ಅಲ್ಲದೆ, ಕಂಪನಿಯು ಇತ್ತೀಚೆಗೆ ತಾನೇ ಮಾರುಕಟ್ಟೆಗೆ ಬಿಡುಗಡೆ ಮಾಡಿದ 'ವಿಂಡೋಸ್-ವಿಸ್ಟಾ' ಎಂಬ ಆಪರೇಟಿಂಗ್ ಸಿಸ್ಟಂನಲ್ಲೂ ಕೂಡ ತಪ್ಪುಗಳ ಸರಮಾಲೆ ಹಾಗೆಯೇ ಮುಂದುವರಿದಿದ್ದು, ತಪ್ಪುಗಳನ್ನು ಅದು ಸರಿಪಡಿಸಿಕೊಂಡಿಲ್ಲ. ಈ ಕಂಪನಿಗೆ ಲಾಭ ದೃಷ್ಟಿಯಲ್ಲಿದೆಯೇ ಹೊರತು ಉತ್ತಮ ಗುಣಮಟ್ಟದ ತಂತ್ರಾಂಶದ ಜವಾಬ್ದಾರಿಯನ್ನು ಪಾಲಿಸುತ್ತಿಲ್ಲ. **ರಾಜ್ಯ ಸರ್ಕಾರದ ಈ ಒಪ್ಪಂದದಿಂದಾಗಿ, ಕಂಪನಿಯು ಸೃಷ್ಟಿಸಿರುವ ದೋಷಪೂರಿತ ಕನ್ನಡವೇ ಅಧಿಕೃತ ಕನ್ನಡವೂ ಆಗಬಲ್ಲ ಎಲ್ಲ ಸಾಧ್ಯತೆಗಳೂ ಇವೆ.**

ರಾಜ್ಯದ ಮಾರುಕಟ್ಟೆಗಾಗಿ ಮೈಕ್ರೋಸಾಫ್ಟ್ ಕಾರ್ಯತಂತ್ರ

ವಿದ್ಯುನ್ಮಾನ-ಆಡಳಿತಕ್ಕೆ ಒತ್ತು ನೀಡುತ್ತಿರುವ ಈವೊತ್ತು ಭಾರತದಲ್ಲಿ ಸರ್ಕಾರವೇ ಮೈಕ್ರೋಸಾಫ್ಟ್ ಕಂಪನಿಯ ದೊಡ್ಡ ಗ್ರಾಹಕನೂ ಕೂಡ. ಅಂತೆಯೇ ರಾಜ್ಯದಲ್ಲೂ ಕೂಡ ಸರ್ಕಾರದ ಬೇಡಿಕೆಯೂ ಸೇರಿದಂತೆ ದೊಡ್ಡ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳಲು ಮೈಕ್ರೋಸಾಫ್ಟ್ ಕಾರ್ಯತಂತ್ರ ರೂಪಿಸುತ್ತಿದೆ.

ಸರ್ಕಾರವು ಒಮ್ಮೆ ತನ್ನ ಎಲ್ಲ ದಾಖಲಾತಿಗಳು ಮತ್ತು ಪ್ರಕ್ರಿಯೆಗಳನ್ನು ಈ ಕಂಪನಿಯ ತಂತ್ರಾಂಶದಿಂದ ರೂಪುಗೊಳಿಸಿದ ನಂತರ, ಮುಂದೊಂದು ದಿನ ಅದೇ ದಾಖಲಾತಿಗಳು ಮತ್ತು ಪ್ರಕ್ರಿಯೆಗಳನ್ನು ಇತರೆ ತಂತ್ರಾಂಶಗಳಿಗೆ ಪರಿವರ್ತಿಸಲು ಯತ್ನಿಸಿದಲ್ಲಿ ಅಗಾಧ ವೆಚ್ಚ ವ್ಯಯಿಸಬೇಕಾಗುತ್ತದೆ. ಏಕೆಂದರೆ ಅಂತಹ 'ಲಾಕ್ ಇನ್'ಗಳನ್ನು ಮೈಕ್ರೋಸಾಫ್ಟ್ ಕಂಪನಿಯು ತನ್ನ ತಂತ್ರಾಂಶಗಳಿಗೆ ಅಳವಡಿಸುವ ಧೋರಣೆಯನ್ನು ಹೊಂದಿದೆ. ಹೀಗೆ ಕಾನೂನುಬಾಹಿರವಾಗಿ 'ಲಾಕ್ ಇನ್'ಗಳನ್ನು ಮಾಡಿ ಸಿಕ್ಕಿಬಿದ್ದಿದ್ದರಿಂದ ಯುರೋಪ್ ಮತ್ತು ಅಮೇರಿಕಾದ ನ್ಯಾಯಾಲಯಗಳಲ್ಲಿ ಮತ್ತು ತನ್ನ ಪ್ರತಿಸ್ಪರ್ಧಿ ಕಂಪನಿಗಳಿಗೆ ಹಲವಾರು ಕೋಟಿ ಮೊತ್ತದ ದಂಡವನ್ನು ತೆತ್ತಿದೆ. ಇದರ ಜೊತೆಗೆ ಕಂಪನಿಯ ಮುಂದುವರಿದ ತಂತ್ರಾಂಶಗಳನ್ನು ಕೊಂಡುಕೊಳ್ಳಬೇಕಾದರೆ ಹೆಚ್ಚಿನ ವೆಚ್ಚ ತಗಲುತ್ತದೆ.

ಮೈಕ್ರೋಸಾಫ್ಟ್ ಕಂಪನಿಯ ಉತ್ಪನ್ನಗಳು 'ಮಾಲೀಕತ್ವದ ಸಾಫ್ಟ್‌ವೇರ್' ಗಳಾಗಿದ್ದು ಈ ಸಾಫ್ಟ್‌ವೇರ್ ಉತ್ಪನ್ನಗಳನ್ನು ನಕಲು ಮಾಡುವ, ಮೂಲ ತಂತ್ರಾಂಶಗಳನ್ನು ಬಳಸುವ, ಇತರರಿಗೆ ತಂತ್ರಾಂಶವನ್ನು ವಿತರಿಸುವ ಯಾವುದೇ ಸ್ವಾತಂತ್ರ್ಯ ಬಳಕೆದಾರರಿಗೆ ಲಭ್ಯವಿರುವುದಿಲ್ಲ. ಸಾಫ್ಟ್‌ವೇರ್ ಬಳಕೆದಾರರು ಈ ಕಂಪನಿಯ ದಾಸರಾಗಬೇಕಾಗುತ್ತದೆ. ಈ ಕಂಪನಿಯ ಧೋರಣೆಯು ಸಾಫ್ಟ್‌ವೇರ್ ತಂತ್ರಜ್ಞರೂ ಕೂಡ ತಂತ್ರಾಂಶವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಸೃಜನಶೀಲತೆಯನ್ನೇ ಕೊಂದು ಹಾಕುತ್ತದೆ.

ಪರ್ಯಾಯ ತಂತ್ರಾಂಶಗಳು:

ಮಾಲೀಕತ್ವದ ತಂತ್ರಾಂಶಗಳಿಗೆ ಪರ್ಯಾಯವಾಗಿ ಸ್ವತಂತ್ರ ಹಾಗೂ ಮುಕ್ತ ಆಕರ ತಂತ್ರಾಂಶಗಳು (Free and Open Source Software) ಚಾಲ್ತಿಯಲ್ಲಿವೆ. ಅದರಲ್ಲೂ ಮುಖ್ಯವಾಗಿ ಮಾಲೀಕತ್ವದ ತಂತ್ರಾಂಶಗಳು ಕಸಿಯಲೆತ್ನಿಸುವ ಎಲ್ಲ ಹಕ್ಕುಗಳನ್ನು ಲಿನಕ್ಸ್ - ಆಧಾರಿತ ಸ್ವತಂತ್ರ ತಂತ್ರಾಂಶಗಳು ಒದಗಿಸುತ್ತವೆ. ಕೇರಳ, ತಮಿಳುನಾಡು ಮತ್ತು ಇತರೆ ಕೆಲವು ರಾಜ್ಯಗಳಲ್ಲಿ ಹಾಗೂ ವೆನಿಜುವೆಲ್ಲಾ, ಬ್ರೆಜಿಲ್ ಇತ್ಯಾದಿ ರಾಷ್ಟ್ರಗಳು ತಮ್ಮ ಕಾನೂನಿನಲ್ಲಿ ಕೇವಲ ಸ್ವತಂತ್ರ ತಂತ್ರಾಂಶಗಳ ಬಳಕೆಗೆ ಮಾತ್ರವೇ ಅವಕಾಶ ಕಲ್ಪಿಸಿವೆ. ಈ ಮಾದರಿಯಲ್ಲಿ ರಾಜ್ಯ ಸರ್ಕಾರವು ಸ್ವತಂತ್ರ ತಂತ್ರಾಂಶಗಳ ಬಳಕೆಗೆ ನಿರ್ದಿಷ್ಟ ತಂತ್ರಾಂಶ ನೀತಿ ರೂಪಿಸಿ ಅನುಷ್ಠಾನಕ್ಕೆ ತರುವ ಬದಲು ಮೈಕ್ರೋಸಾಫ್ಟ್‌ನಂತಹ ರಾಕ್ಷಸ ಕಂಪನಿಯ ದಾಸನಾಗಲು ಹೊರಟಂತಿದೆ.

ಈ ಹಿನ್ನೆಲೆಯಲ್ಲಿ ಸ್ವತಂತ್ರ ತಂತ್ರಾಂಶಗಳನ್ನು ಹೆಚ್ಚು ಪ್ರಚುರ ಪಡಿಸಲು ಮತ್ತು ಬಳಕೆಗೆ ತರಲು, ಕನ್ನಡ ಭಾಷೆಯ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಕನ್ನಡ ತಂತ್ರಾಂಶ ತಜ್ಞರು ಮತ್ತು ಶಿಕ್ಷಣ ಸಂಸ್ಥೆಗಳೊಂದಿಗೆ ಒಡಗೂಡಿ ಸಮಾಲೋಚಿಸಿ ತಂತ್ರಾಂಶ ನೀತಿಯನ್ನು ಜಾರಿಗೆ ತರುವ ಅತ್ಯಗತ್ಯವಿದೆ. ○

ಯಶಸ್ವಿ ಸೃಜನಶೀಲ ಯುವ ಕಲಾಶಿಬಿರ

'ರೈತಣ್ಣನ, ನೇಣು ಹಾಕ್ಯಾರೋ; ಬಡವರ ರಕ್ತ ಹೀರ್‍ಯಾರೋ', 'ಚಳುವಳಿಯ ಕತ್ತೋಣ ಬನ್ನಿರಿ', 'ಆ ಧರ್ಮ ಈ ಧರ್ಮ ಯಾವುದು ಮೇಲೋ ಮಾನವ ಧರ್ಮ ಮೇಲಲ್ಲೋ' .... ಈ ಸಾಲುಗಳು ಯಾವುದೋ ಪ್ರಸಿದ್ಧ ಕವಿಗಳು ಬರೆದದ್ದಲ್ಲ, ಬದಲಾಗಿ ಸಾಮಾನ್ಯ ಯುವಜನರ ಸುಪ್ತವಾಗಿ ಹುದುಗಿದ್ದ ಆಕ್ರೋಶದ ಅಂತರಾಳದ ನುಡಿಗಳು. ಡಿವೈಎಫ್‌ಐ ಸಮುದಾಯ ಹಾಗೂ ರಾಷ್ಟ್ರೀಯ ನಾಟಕ ಶಾಲೆಯ ಸಂಯೋಗದಲ್ಲಿ ಅಕ್ಟೋಬರ್ 28-30 ರಂದು ಮೂರು ದಿನಗಳ ಕಾಲ ಸಾಂಸ್ಕೃತಿಕ ನಗರಿ ಚಿತ್ರದುರ್ಗದಲ್ಲಿ ಯುವಕಲಾ ಶಿಬಿರ ಸಂಘಟಿಸಲಾಗಿತ್ತು. ಶಿಬಿರ ಉದ್ಘಾಟಿಸಿದ ಮುರುಘರಾಜೇಂದ್ರ ಸ್ವಾಮಿಗಳು ಯುವಜನರು ಕಟ್ಟುವ ಕೆಲಸದಲ್ಲಿ ತೊಡಗಬೇಕೆಂದು ಕರೆ ನೀಡಿ ಪರೋಕ್ಷವಾಗಿ ಕೋಮುವಾದದ ವಿರುದ್ಧ ನಿಲ್ಲುವಂತೆ ಕರೆ ನೀಡಿದರು. ಶಾಸಕ ತಿಪ್ಪಾರೆಡ್ಡಿ, ಜನಶಕ್ತಿ ವಾರ ಪತ್ರಿಕೆ ಎಸ್.ವೈ. ಗುರುಶಾಂತ್, ಕಿರುತೆರೆ ನಿರ್ದೇಶಕ ಬಿ.ಸುರೇಶ್, ಮಾತನಾಡಿದರು.

ಮೂರು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ರಂಗ ನಿರ್ದೇಶಕರಾದ ರಾಮದಾಸ್, ಸಿದ್ದರಾಜು ಹಾಗೂ ಸುಧಾ ಜೋಷಿಯವರು ಕಿರು ನಾಟಕ, ಹಾಡುಗಳ ತರಬೇತಿ ನೀಡಿದರು. 12 ಜಿಲ್ಲೆಗಳಿಂದ 100 ಜನ ಶಿಬಿರಾರ್ಥಿಗಳನ್ನು 6 ತಂಡಗಳಾಗಿ ವಿಂಗಡಿಸಿ, ಜಾತಿ ಅಸ್ಪೃಶ್ಯತೆ, ಕೋಮುವಾದ, ನಿರುದ್ಯೋಗ, ಮೂಢನಂಬಿಕೆ, ಜಾಗತೀಕರಣ, ಶಿಕ್ಷಣದ ಉದಾರೀಕರಣ ಇತ್ಯಾದಿ ವಿಷಯಗಳನ್ನು ನೀಡಿ ಹಾಡು ಹಾಗೂ ಸಣ್ಣ ನಾಟಕಗಳ ರಚಿಸಲು ಸೂಚಿಸಲಾಗಿ 20 ಕ್ಕೂ ಹೆಚ್ಚು ಹಾಡುಗಳು ಹಾಗೂ 6 ನಾಟಕಗಳನ್ನು ಈ ತಂಡಗಳು ರಚಿಸಿದರು. ಮಾತ್ರವಲ್ಲ ಹಾಡುಗಳಿಗೆ ಸ್ವತಃ ರಾಗ ಸಂಯೋಜನೆ ಕೂಡ ಮಾಡಿದರು. ಇದು ಯುವಜನರ ಆಸಕ್ತಿ, ಸೃಜನಶೀಲತೆಗೆ ಸಾಕ್ಷಿಯಾಗಿತ್ತು. ಉತ್ಸುಕತೆಯಿಂದ ಕುಡಿದ್ದ ಮೂರು ದಿನಗಳ ಈ ಶಿಬಿರವನ್ನು ಚಿತ್ರದುರ್ಗ ಜಿಲ್ಲೆಯ ಕಟ್ಟಡ ಕಾರ್ಮಿಕರು ಹಾಗೂ ಇತರೆ ಕಲಾಸಕ್ತರು, ಜನಪರರು ಸೇರಿ ಶಿಬಿರವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ವರದಿ: ಲಿಂಗರಾಜು



ಶಿಬಿರದ ಉದ್ಘಾಟನೆ ಶ್ರೀ ಮುರುಘರಾಜೇಂದ್ರ ಸ್ವಾಮಿಗಳಿಂದ.ಚಿತ್ರದಲ್ಲಿ ನಿರ್ದೇಶಕ ಬಿ.ಸುರೇಶ, ಶಾಸಕ ತಿಪ್ಪಾರೆಡ್ಡಿ, ಭರತ್‌ರಾಜ್ ಮುಂತಾದವರಿದ್ದಾರೆ.

ಚುಚ್ಚುಮದ್ದು

ಇದ್ದದ್ದು ಇದ್ದಾಂಗ

ಏನಿದು ವೈರುಧ್ಯ

......ಅಮೇರಿಕಾದ ಒತ್ತಡವೇನೂ ತಗ್ಗಿಲ್ಲ. ಅಂತರರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ (ಐಎಇಎ) ಹಾಗೂ ಪರಮಾಣು ಸಾಮಗ್ರಿ ಪೂರೈಕೆದಾರರ ಗುಂಪಿ (ಎನ್‌ಎಸ್‌ಜಿ) ನೊಡನೆ ಮಾತುಕತೆ ನಡೆಸಲು ಭಾರತಕ್ಕೆ ಅದು ವರ್ಷಾಂತ್ಯದ ಕಾಲ ಮಿತಿ ನಿಗದಿಪಡಿಸಿದೆ. ನೂರಾರು ಕೋಟಿ ಡಾಲರ್ ಮೌಲ್ಯದ ಅಣು ಸ್ಥಾವರ ಸಾಮಗ್ರಿಗಳನ್ನು ಭಾರತಕ್ಕೆ ಮಾರಲು ಅದು ಹೊಂಚು ಹಾಕಿದೆ...

.....ಒಪ್ಪಂದ ರದ್ದಾಗುವುದರಿಂದ ಅಮೇರಿಕಾಕ್ಕೆ ಹೆಚ್ಚಿನ ಹಾನಿಯೇನೂ ಇಲ್ಲ. ಅಣು ಸ್ಥಾವರ ನಿರ್ಮಾಣಕ್ಕೆ ಅದು ಪಡೆದ 'ಆರ್ಡರ್' ವಿಳಂಬವಾಗಬಹುದು ಅಷ್ಟೇ. ಆದರೆ ಭಾರತ ಸಾಕಷ್ಟು ಕಳೆದುಕೊಂಡಿದೆ.

ಕುಲದೀಪ್ ನಯ್ಯರ್
ಪ್ರಜಾವಾಣಿ 'ಅಂತರಂಗ' ಕಾಲಂನಲ್ಲಿ

★

'ಕರ್ನಾಟಕದ ರಾಜಕೀಯ ಬೆಳವಣಿಗೆಗಳು ಮಾನ ಮರ್ಯಾದೆಯ ಎಲ್ಲ ಜೆಲ್ಲೆಗಳನ್ನು ಮೀರಿವೆ. ಜೆಡಿ(ಎಸ್)' ಮತ್ತು ಬಿಜೆಪಿ ಮೈತ್ರಿ ಮುರಿದು ಬಿದ್ದ ಮೇಲೆ ಪರಸ್ಪರ ದೋಷಾರೋಪಣೆಯಲ್ಲಿ ಉಭಯ ಪಕ್ಷಗಳ ನಾಯಕರು ತೊಡಗಿದ್ದುದನ್ನು ನೋಡಿದರೆ ಈಗ ಆಗಿರುವ ಬೆಳವಣಿಗೆ ರಾಜಕೀಯ ಮೌಲ್ಯಗಳ ನೈತಿಕ ಅಧಃಪತನವೇ ಸರಿ. .. ...ಮತ್ತೆ ಕಚ್ಚಾಡಿ ರಾಜಕೀಯ ರಾಡಿ ಮಾಡಿಕೊಂಡು ಮತದಾರರ ಮುಂದೆ ಬೆತ್ತಲಾಗಿ ನಿಲ್ಲುವ ಸನ್ನಿವೇಶ ಆಹ್ವಾನಿಸಿಕೊಳ್ಳುವ ಬದಲು ಚುನಾವಣೆ ಬಗ್ಗೆ ರಾಜಕೀಯ ನಾಯಕರು ಯೋಚಿಸುವುದು ಒಳ್ಳೆಯದು'

ಪ್ರಜಾವಾಣಿ ಸಂಪಾದಕೀಯ

★

'ಪೌರಾಣಿಕ ಮಹತ್ವದ ರಾಮಸೇತುವನ್ನು ನಾಶ ಮಾಡುವ ನಿರ್ಧಾರ ಎನ್‌ಡಿಎ ಸರ್ಕಾರದ ಕಾಲದಲ್ಲಿ ಆಗಿರುವುದರಿಂದ ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್.ಕೆ.ಅಡ್ವಾಣಿ ಸೇರಿದಂತೆ ಇತರ ಉನ್ನತ ಮುಖಂಡರನ್ನು ಪಕ್ಷದಿಂದ ವಜಾ ಮಾಡುವ ಮೂಲಕ ಬಿಜೆಪಿ ಇತರ ರಾಜಕೀಯ ಪಕ್ಷಗಳಿಗಿಂತ ಭಿನ್ನ ಎಂಬುದನ್ನು ತೋರಿಸಬೇಕು'

ಗೋವಿಂದಚಾರ್ಯ, ಬಿಜೆಪಿಯ ಮಾಜಿ ಮುಖಂಡ

★

'ರಾಜ್ಯದಲ್ಲಿ ಬಿಜೆಪಿಯೊಂದಿಗೆ ಸರ್ಕಾರ ರಚಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ನನ್ನ ಪ್ರಯತ್ನ ವಿಫಲರಾದರೆ ಪಕ್ಷಕ್ಕೆ ರಾಜೀನಾಮೆ ನೀಡುತ್ತೇನೆ'

ಅಕ್ಟೋಬರ್ 31, 2007 ರಂದು,

ಖಾತೆಗಳ ಬಗೆಗೆ ಯಾವುದೇ ನಿರೀಕ್ಷೆ ಇಲ್ಲ. ಆದರೆ ಪಕ್ಷ ಜವಾಬ್ದಾರಿ ನೀಡಿದರೆ ಉಪಮುಖ್ಯಮಂತ್ರಿ ಹುದ್ದೆ ನಿರ್ವಹಿಸುತ್ತೇನೆ.

ನವೆಂಬರ್ 1, 2007 ರಂದು
ಮೆರಾಜುದ್ದೀನ್ ಪಟೇಲ್, ಜೆಡಿ(ಎಸ್) ರಾಜ್ಯಾಧ್ಯಕ್ಷರು

★

ಅಮೋಘ ಸಂಶೋಧನೆ

'ಮಾರ್ಕ್ಸ್ ಚರ್ಮ ವ್ಯಾಧಿಯಿಂದ ಬಳಲಿದ್ದರು. ಬೊಕ್ಕೆಗಳಿಂದ ಬಾಧಿತರಾಗಿದ್ದರು. ಇದರಿಂದ ಮಾಡಿದ ಮನೋ ವ್ಯಾಕುಲತೆಯೇ ಅವರ ಸಿದ್ದಾಂತ ರೂಪುತಳೆಯಲು ಕಾರಣವಾಯಿತು'....

ಪ್ರೊ: ಸ್ಯಾಮ್‌ಶುಸ್ಟರ್, ಬ್ರಿಟನ್ ಸಂಶೋಧಕ(!)

ಜಗತ್ತಿನ ಕೋಟ್ಯಾಂತರ ಜನರು ಮತ ನೀಡಿ, ಕಾರ್ಲ್ ಮಾರ್ಕ್ಸ್ 1001 ರಿಂದ 2000 ರ ಇಸವಿಯ ನಡುವಿನ ಒಂದು ಸಾವಿರ ವರ್ಷ ಅವಧಿಯ ಮಹಾನ್ ಚಿಂತಕ ಅಂತ ತೀರ್ಮಾನಿಸಿದ್ದರಲ್ಲ ಅವರಿಗೆ ಏನು ವ್ಯಾಧಿ ಇತ್ತು ಸ್ವಾಮಿ.



'ಸರ್ಕಾರ ರಚನೆ ಪ್ರಯತ್ನ ಕೈಬಿಡಿ, ಹೊಸ ಜನಾದೇಶ ಪಡೆಯಿರಿ' ಎಂಬ ಘೋಷಣೆ ಆಧಾರದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿಪಿಐ(ಎಂ) ನೇತೃತ್ವದಲ್ಲಿ ನವೆಂಬರ್ 2 ರಂದು ರಾಜ್ಯಾವ್ಯಾಪಿ ಪ್ರತಿಭಟನೆಗಳು ನಡೆದಿವೆ. ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯ ಚಿತ್ರ

ಪ್ರತ್ಯೇಕರಾಜ್ಯ....

ಪುಟ 3 ರಿಂದ

ಪ್ರದೇಶದ ಜನರನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವುದು ದುಡಿವ ಜನಸಮೂಹದ ಹಿತಗಳಿಗೆ ಮಾರಕವಾಗುತ್ತದೆ. ಇಂತಹ ಪ್ರಾದೇಶಿಕ ಅಸಮಾನತೆ, ತಾರತಮ್ಯಗಳು ಭೂಮಾಲಿಕ ಬಂಡವಾಳಶಾಹಿ ಅಭಿವೃದ್ಧಿ ಪಥದ ಸೃಷ್ಟಿಗಳು ಎಂಬುದನ್ನು ಮರೆಯಬಾರದು. ಆದ್ದರಿಂದ ಇಂದಿನ ಸರ್ಕಾರಗಳ ಅಭಿವೃದ್ಧಿ ದೃಷ್ಟಿಕೋನವೇ ಬದಲಾಗಬೇಕಿದೆ.

ಐಕ್ಯತೆ ಕಾಯಬೇಕು

ಇದರೊಟ್ಟಿಗೆ ಸಮಸ್ಯೆಗಳು ಎದ್ದುಬಂದಾಗ ಆಳುವ ಸರ್ಕಾರಗಳು ತನ್ನ ಮಿತಿಯಲ್ಲಾದರೂ ಬಗೆಹರಿಸಬಹುದಾದ ಸಮಸ್ಯೆಗಳಾಗಿದ್ದರೂ ಅವುಗಳನ್ನು ನಿರ್ಲಕ್ಷಿಸುತ್ತವೆ. ಬಾಣೆ ಭೂಮಿ ಹಕ್ಕಿನಂತಹ ಪ್ರಶ್ನೆಯ ಬಗ್ಗೆ ಸರ್ಕಾರದ ಪ್ರಸಕ್ತ ನಿಲುವು ಅರ್ಥಹೀನ. ಈ ವಿಷಯದಲ್ಲಿ ಹೊಸದೇನೂ ನಿರ್ಧರಿಸಬೇಕಿಲ್ಲ. ಹಿಂದಿನ ಸ್ಥಿತಿ ಪಾಲಿಸಿದರೆ ಸಾಕು. ಆದರೆ ಸರ್ಕಾರ ಜನರ ಹೇಳಿಕೆಗಳ ಬಗ್ಗೆ ಅಸಹಿಷ್ಣುತನದಿಂದ ವರ್ತಿಸುತ್ತಿದೆ. ಭೂಮಿ ಕೊಡುವುದಲ್ಲ, ಇರುವುದನ್ನು ಕಿತ್ತುಕೊಳ್ಳುವುದು ಎಂಬ ಜನವಿರೋಧಿ ನೀತಿ ಅನುಸರಿಸುತ್ತಿದೆ. ಉದಾರೀಕರಣ, ಜಾಗತೀಕರಣದ ಜಾರಿಯ ಈ ಆವೇಶದಲ್ಲಿ ಜನರನ್ನು ನಿರ್ಧಯವಾಗಿಯೂ ದಮನಿಸುತ್ತದೆ. ಹೀಗಾಗಿ ಬೇಕಿರುವುದು ಇಂತಹ ಸಮಸ್ಯೆಗಳ ವಿರುದ್ಧ ನೊಂದವರೆಲ್ಲರ ಐಕ್ಯತೆಯ ಹೋರಾಟ. ಇದನ್ನು ದುರ್ಬಲಗೊಳಿಸುವ ಯಾವುದೇ ಯತ್ನಗಳು ವಿಧಾನಗಳೂ ಮೂಲದಲ್ಲಿ ಜನವಿರೋಧಿ. ಈ ಪ್ರತ್ಯೇಕತೆಯ ಕೂಗು ಸಣ್ಣದಾದರೂ ಅಪಾಯಕಾರಿ. ಇಂತಹ ವಾದಗಳನ್ನು ದೃಢವಾಗಿ ಎದುರಿಸಬೇಕು.

.... ಅಕ್ಟೋಬರ್ ಕ್ರಾಂತಿ

ಪುಟ 9ರಿಂದ

ಕ್ರಾಂತಿಯ ಚಾರಿತ್ರಿಕ ಮಹತ್ವವನ್ನು ಮನಗಾಣುವಾಗಲೇ ಇಂದಿನ ನಮ್ಮ ಸಂದರ್ಭಕ್ಕೆ ಅಗತ್ಯವಾದ ಸಮಾಜವಾದದ ಕಲ್ಪನೆ ಬಗೆಗೆ ಸ್ಪಷ್ಟತೆಯೂ ಬೇಕಾಗುತ್ತದೆ.

ಇಂದಿನ 21ನೇ ಶತಮಾಣದ ಈ ಸಂದರ್ಭದಲ್ಲಿ ನಾವು ಸಮಾಜವಾದಿ ಸವಾಲನ್ನು ಕೈಗೆತ್ತಿಕೊಳ್ಳುವಾಗ ಹಿಂದೆ ಇದ್ದಂಥದ್ದೇ ಸನ್ನಿವೇಶ ಇಲ್ಲ. ಜಾಗತಿಕ ಬಂಡವಾಳಶಾಹಿಯು ಇಂದು ಕಾರ್ಯನಿರ್ವಹಿಸುವ ರೀತಿ ನೀತಿ, ಅದರ ಚಲನಶೀಲತೆ ಭಿನ್ನ. ಹೀಗಾಗಿ ಸೋವಿಯತ್ ರಷ್ಯಾದ ಅನುಭವದ ಗಂಭೀರವಾಗಿ ವಿಮರ್ಶೆಗೊಳಿಸಪಡಿಸಬೇಕಿದೆ. ಭವಿಷ್ಯದಲ್ಲಿ ಈ ಬಗ್ಗೆ ನಾವು ಸರಿಯಾದ ಕಣ್ಣೋಟದೊಂದಿಗೆ ಅದರ ಪಾಠವನ್ನು ಕಲಿಯಬೇಕಾಗಿದೆ.

ಈ ಒಟ್ಟು ವಿಚಾರದಲ್ಲಿ ನಾವು ಕಲಿಯಲೇ ಬೇಕಾದ ಕೆಲವು ಬಹುಮುಖ್ಯವಾದ ಪಾಠಗಳಿವು.

1. ಸಮಾಜವಾದಿ ಪ್ರಜಾಪ್ರಭುತ್ವ : ಪ್ರಜಾಪ್ರಭುತ್ವದ ವೇದಿಕೆಗಳನ್ನು ಸಾಂಸ್ಥಿಕರಿಸುವುದು ಮತ್ತು ರಾಜಕೀಯ ಮತ್ತು ಆರ್ಥಿಕ ನಿರ್ವಹಣೆಯಲ್ಲಿ ಜನ ಸಮೂಹಗಳ ಪಾತ್ರವನ್ನು ಖಾತ್ರಿ ಪಡಿಸುವುದು.

2. ಸಮಾಜವಾದಿ ಸಮಾಜದಲ್ಲಿ ಪ್ರಭುತ್ವ ಮತ್ತು ಕಾರ್ಮಿಕ ವರ್ಗದ ಪಕ್ಷದ ನಡುವೆ ಸರಿಯಾದ ಸಂಬಂಧ ವನ್ನೇರ್ಪಡಿಸುವುದು.

3. ಆರ್ಥಿಕತೆಯ ನಿರ್ವಹಣೆಯಲ್ಲಿ ಅಗತ್ಯ ಹೊಂದಾಣಿಕೆಗಳಿಗೆ ಸಿದ್ಧವಿರುವಂತಹ ಸ್ಥಿತಿಯನ್ನು ಕಾಯ್ದುಕೊಳ್ಳುವುದು. ಆಸ್ತಿಯ ಒಡೆತನದಲ್ಲಿ ವಿವಿಧ ಹಂತಗಳಿಗೆ ಅಗತ್ಯವಾದ ವೈವಿಧ್ಯಮಯ ಸ್ವರೂಪಗಳ ಅಸ್ತಿತ್ವಕ್ಕೆ ಅವಕಾಶ ಹೊಂದುವುದು.

ಇದು ಬಂಡವಾಳಶಾಹಿಯು ಪ್ರಾಬಲ್ಯ ಹೊಂದಿರುವ ಜಗತ್ತು. ಬಂಡವಾಳಶಾಹಿಯ ಬಲಗಣನೀಯ. ಅಂತಹ ಸನ್ನಿವೇಶವೊಂದರಲ್ಲಿ ಸಮಾಜವಾದವನ್ನು ಕಟ್ಟುವುದಕ್ಕೆ ಸೈದ್ಧಾಂತಿಕವಾದ ಸ್ಪಷ್ಟತೆ, ಖಚಿತತೆ ಬೇಕು. ಒಂದು, ಕಡಿಮೆ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶವೊಂದರಲ್ಲಿ ಸಮಾಜವಾದದ ಕಡೆಗಿನ ಪರಿವರ್ತನೆ, ಮತ್ತು ಅಂತಲ್ಲಿ ಸಮಾಜವಾದವನ್ನು ಕಟ್ಟುವುದು ಒಂದು ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆ ಮತ್ತು ಅದಕ್ಕೆ ಅಕ್ಟೋಬರ್ ಕ್ರಾಂತಿಯ ಪ್ರಭಾವದಲ್ಲಿ ಈ ಹಿಂದೆ ಅಂದು ಕೊಂಡಿದ್ದಕ್ಕಿಂತಲೂ ಸಂಕೀರ್ಣವಾದ ಪ್ರಕ್ರಿಯೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಕಣ್‌ಕಟ್ಟೇನಲ್ಲ

ಸೋವಿಯತ್ ಒಕ್ಕೂಟ ಇಂದು ಒಡೆದು ಚೂರಾಗಿದ್ದರೂ, ಸಮಾಜವಾದ ಕುಸಿದಿದ್ದರು ಸೋವಿಯತ್ತ್ ಒಕ್ಕೂಟದಲ್ಲಿ ಅದು ಮಾಡಿದ ಸಾಧನೆಯನ್ನು ಕಮ್ಯುನಿಸ್ಟ್ ವಿರೋಧಿಗಳೂ ಕೂಡ ಕಣ್ಕಟ್ಟು ಎಂದು ಕರೆಯಲಾಗದು. ಏಕೆಂದರೆ ಆ ಸಾಧನೆ ಇಡೀ ಜಗತ್ತಿನ ಮುಂದೆ ವಾಸ್ತವಿಕವಾಗಿ ತೆರೆದಿಟ್ಟಂತಹದ್ದಾಗಿತ್ತು. ಸಮಾಜವಾದಿ ಕ್ರಾಂತಿಯನ್ನು ಸಾಧಿಸುವುದಕ್ಕೇ ಆಗಲಿ ಅಥವಾ ಸಮಾಜವಾದವನ್ನು ಕಟ್ಟುವ ವಿಚಾರದಲ್ಲೆ ಆಗಲಿ ಯಾವುದೇ ಒಂದು ಸಿದ್ಧ ಮಾದರಿಯಿಲ್ಲ. ಅದು ವೈವಿಧ್ಯಮಯ ಪ್ರಕ್ರಿಯೆಗಳನ್ನು ಒಳಗೊಂಡಿರುವಂತಹವು ಎಂದು ಸೋವಿಯತ್ ಒಕ್ಕೂಟದ ಈ ಐತಿಹಾಸಿಕ ಸಾಧನೆಯ ಆಧಾರದಲ್ಲಿ ತೀರ್ಮಾನಕ್ಕೆ ಬರಬಹುದು.


ಮಾರ್ಕ್ಸ್‌ವಾದ ಸಮಾಜದ ಬದಲಾವಣೆ, ಬೆಳವಣಿಗೆಗೆ ಅನಿವಾರ್ಯವಾದ ವೈಜ್ಞಾನಿಕ ತತ್ವಗಳನ್ನು ಆಧರಿಸಿದ ಒಂದು ಅನನ್ಯ ಸಿದ್ಧಾಂತ. ಮಾರ್ಕ್ಸ್‌ವಾದದ ಮುಖಕ್ಕೆ ಕೆಸರೆರಚುವ ಯಾವುದೇ ಪ್ರಯತ್ನವನ್ನು ದೃಢತೆಯಿಂದ ಹಿಮ್ಮೆಟ್ಟಿಸುವುದು ಇಂದಿನ ಸಂದರ್ಭದ ಅಗತ್ಯವಾಗಿದೆ.

ಇಂದಿನ ಸಮಕಾಲೀನ ಜಗತ್ತಿನಲ್ಲಿ ಮಹಿಳಾ ಮತ್ತಿತರ ಲಿಂಗ ಸಂಬಂಧಿ ಚಳುವಳಿಗಳು ಹಾಗೂ ಪರಿಸರ ಚಳುವಳಿಗಳಿಂದ ಹಲವು ಪ್ರಶ್ನೆಗಳು ಎದ್ದು ಬಂದಿವೆ. ಅಲ್ಲದೆ ಹಲವು ಜನಾಂಗೀಯ ಪ್ರಶ್ನೆಗಳು ಎದ್ದು ಬಂದಿವೆ ಇವೆಲ್ಲವನ್ನು ಉದ್ದೇಶಿಸುವಂತಹ ರೀತಿಯಲ್ಲಿ ಮಾರ್ಕ್ಸ್‌ವಾದವನ್ನು ಸಜ್ಜುಗೊಳಿಸಿ ಮಾರ್ಕ್ಸ್‌ವಾದವನ್ನೊಂದು ನವೀಕ್ಕ... ಪರ್ಯಾಯವಾಗಿ ಮುಂದಿಡಬೇಕಾಗಿದೆ. ಆ... ಎಲ್ಲದರಕ್ಕೂ ಕಾರ್ಮಿಕ ವರ್ಗದ ತತ್ವವಾದ ವ... ದೃಷ್ಟಿಕೋನ, ವರ್ಗ ರಾಜಕೀಯ... ಆಧಾರಎಂಬುದನ್ನೇನು ಮತ್ತೆ ಬಿ... ಹೇಳಬೇಕಾದುದಿಲ್ಲ.

ಮುಂದಿನ ದಿನಗಳಲ್ಲಿ ಜಗತ್ತನ್ನು ಆವರಿಸಿರು... ತನ್ನ ಹಿಡಿತಗಳನ್ನು ಮತ್ತಷ್ಟು ಬಲಪಡಿಸ... ಸಾಮ್ರಾಜ್ಯಶಾಹಿ ತನ್ನ ಪಟ್ಟನ್ನು ಬಿಗಿಗೊಳಿಸುವ... ಶತಸಿದ್ದ. ಜಗತ್ತಿನ ಸಂಪನ್ಮೂಲಗಳನ್ನು ದೋಚು... ಪ್ರಯತ್ನಗಳು, ಸ್ವತಂತ್ರ ಸಾರ್ವಭೌಮ ದೇಶ... ಮೇಲಿನ ಆಕ್ರಮಣಗಳು ಮುಂದೆ ಇನ್ನ... ಹೆಚ್ಚಬಹುದು. ಇಂತಹ ಜಾಗತಿಕ ಸನ್ನಿವೇಶದ... 90 ವರ್ಷಗಳ ಹಿಂದಿನ ಅಕ್ಟೋಬರ್ ಕ್ರಾಂತಿ ಎ... ತೋರು ದೀಪ ಚೆಲ್ಲಿದ ಬೆಳಕಿನ ಆಧಾರದ... ಮುಂದಿನ ಹಾದಿ ಕಂಡುಕೊಳ್ಳಬೇಕಾಗುತ್ತದೆ.

ಅಕ್ಟೋಬರ್ ಕ್ರಾಂತಿಯ ನೇತಾರ ಲೆನಿ... ಕುರಿತು 'ಧಮನಿ ಧಮನಿಯಲಿ ಬಿಸಿನೆತ್ತರುಕ್ಕದ...
ನೆನೆಯಲಾರೆ ನಿನ್ನಂ ಲೆನಿನ್'

- ಎಂದ ರಾಷ್ಟ್ರಕವಿ ಕುವೆಂಪು ಅವರ... ಅಕ್ಟೋಬರ್ ಕ್ರಾಂತಿಯಿಂದ, ಅದರ ನೇತಾ... ಲೆನಿನ್‌ರಿಂದ ಸ್ಫೂರ್ತಿ ಪಡೆದುಕೊಂಡವ... ಅಸಂಖ್ಯಾತ ಜನ. 21ನೇ ಶತಮಾನ ಮಾತ್ರ... ಮುಂದೆ ಶತಶತಮಾನಗಳವರೆಗೆ ಮನುಕು... ಪಯಣಕ್ಕೆ ಕೈಮರ ನಿಲ್ಲುವಂಥದ್ದು ಈ ಅ... ಸ್ಫೂರ್ತಿಯ ಈ ವಿಪ್ಲವ.




■ ಜಯ

ಪರಮಾಣು ಸ್ಥಾವರಗಳ ವಿಧಗಳು

ಪ್ರಮುಖವಾಗಿ ಮೂರು ವಿಧದ ಪರಮಾಣು ಸ್ಥಾವರಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು. ಅವುಗಳೆಂದರೆ: ಭಾರ ಜಲ ವಿದ್ಯುತ್ ಸ್ಥಾವರಗಳು (Pressurized Heavy Water Reactors), ಕ್ಷಿಪ್ರ ಪ್ರಜನಕ ವಿದ್ಯುತ್ ಸ್ಥಾವರಗಳು (Fast breeder Reactors) ಮತ್ತು ಪ್ರಜನಕ ವಿದ್ಯುತ್ ಸ್ಥಾವರಗಳು (Breeder Reactors).

ಭಾರ ಜಲ ವಿದ್ಯುತ್ ಪರಮಾಣು ಸ್ಥಾವರಗಳು


ನಿಸರ್ಗದಲ್ಲಿ ದೊರೆಯುವ ಯುರೇನಿಯಂ ವಿಕಿರಣ ವಸ್ತುವನ್ನು ಭಾರ ಜಲ ವಿದ್ಯುತ್ ಸ್ಥಾವರಗಳಲ್ಲಿ ಇಂಧನವಾಗಿ ಬಳಸಲಾಗುತ್ತದೆ.



ಇದಕ್ಕೂ ಶಾಖೋತ್ಪನ್ನ ಸ್ಥಾವರಗಳಿಗೂ ಸಂಬಂಧವಿಲ್ಲ. ಭಾರ ಜಲ ಪರಮಾಣು ಸ್ಥಾವರಗಳಲ್ಲಿ ನ್ಯೂಟ್ರಾನೊಂದು ಯುರೇನಿಯಂನ್ನು ತಾಗಿಸಿ ಶಕ್ತಿಯನ್ನು ಬಿಡುಗಡೆ ಮಾಡುತ್ತದೆ. ಇಂತಹ ಪರಮಾಣು ಸ್ಥಾವರಗಳಲ್ಲಿ ನ್ಯೂಟ್ರಾನ್ ಮಾಡರೇಟರ್ ಎಂಬ ಉಪಕರಣವನ್ನು ಬಳಸಲಾಗುತ್ತದೆ. ನ್ಯೂಟ್ರಾನಿನಿಂದ ಯುರೇನಿಯಂ ಪರಮಾಣುವನ್ನು ತಾಗಿಸಿದಾಗ ಸರಣಿ ಪರಮಾಣು ಕ್ರಿಯೆ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಅಪರಿಮಿತ ಸಂಖ್ಯೆಯ ನ್ಯೂಟ್ರಾನುಗಳು ಬಿಡುಗಡೆಯಾಗುತ್ತವೆ. ಸರಣಿ ಪರಮಾಣು ಕ್ರಿಯೆಗೆ ಅವಶ್ಯವಿರುವಷ್ಟು ನ್ಯೂಟ್ರಾನುಗಳನ್ನು ಸ್ಥಾವರದಲ್ಲಿ ಉಳಿಸಿಕೊಂಡು ಅಧಿಕ ನ್ಯೂಟ್ರಾನುಗಳನ್ನು ಹೀರಿಕೊಳ್ಳಲು ಈ ಮಾಡರೇಟರ್‌ನ್ನು ಬಳಸುತ್ತಾರೆ. ಇಲ್ಲದಿದ್ದಲ್ಲಿ ನ್ಯೂಟ್ರಾನುಗಳು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದನೆಗೊಂಡು ಸರಣಿ ಪರಮಾಣು ಕ್ರಿಯೆಯನ್ನು ನಿಯಂತ್ರಿಸಲು ಅಸಾಧ್ಯವಾಗುತ್ತದೆ. ಹಾಗೆಯೇ ಕಡಿಮೆ ನ್ಯೂಟ್ರಾನುಗಳು ಉತ್ಪಾದನೆಯಾದಲ್ಲಿ ಮಾಡರೇಟರ್‌ನ್ನು ಬಳಸುವುದಿಲ್ಲ. ಹೆಚ್ಚಿನ ಬಳಕೆಯಲ್ಲಿರುವ ಸ್ಥಾವರಗಳೆಂದರೆ ಭಾರ ಜಲ ವಿದ್ಯುತ್ ಪರಮಾಣು ಸ್ಥಾವರಗಳು.


ಕ್ಷಿಪ್ರ ಪ್ರಜನಕ ವಿದ್ಯುತ್ ಸ್ಥಾವರಗಳು (Fast breeder Reactors):

ಇಲ್ಲಿ ವೇಗದ ನ್ಯೂಟ್ರಾನ್‌ಗಳಿಂದಾಗಿ ವಿದಳನ ಸರಣಿ ಕ್ರಿಯೆ ಜರುಗುತ್ತದೆ. ವೇಗವರ್ಧಿತ ನ್ಯೂಟ್ರಾನ್ ಶಕ್ತಿಯು ಸುಮಾರು 1 ಎಲೆಕ್ಟ್ರಾನ್ ವೋಲ್ಟ್‌ಗಿಂತಲೂ ಹೆಚ್ಚಿದ್ದು 1 ಮೆಗಾ ಎಲೆಕ್ಟ್ರಾನ್ ವೋಲ್ಟ್‌ನಷ್ಟಿರುತ್ತದೆ. ಅಂದರೆ ಪ್ರತಿ ಸೆಕೆಂಡಿಗೆ ಸುಮಾರು 14,000ಕಿ.ಮೀ ವೇಗ ಹೊಂದಿರುತ್ತದೆ. ನಿಧಾನಗತಿಯ ನ್ಯೂಟ್ರಾನ್ ಶಕ್ತಿಯು ಸುಮಾರು 1 ಎಲೆಕ್ಟ್ರಾನ್ ವೋಲ್ಟ್‌ಗಿಂತಲೂ ಕಡಿಮೆಯಿರುತ್ತದೆ. ಉಷ್ಣ ನ್ಯೂಟ್ರಾನ್ ಶಕ್ತಿಯು ಸುಮಾರು 0.0025 ಎಲೆಕ್ಟ್ರಾನ್ ವೋಲ್ಟ್‌ನಷ್ಟಿರುತ್ತದೆ. ಎಲೆಕ್ಟ್ರಾನ್ ವೋಲ್ಟ್‌ನ್ನು ಶಕ್ತಿಯ ಮಾನವಾಗಿ ಉಪಯೋಗಿಸಲಾಗುತ್ತದೆ. ನ್ಯೂಟ್ರಾನಿನ ಶಾಖವನ್ನು ನ್ಯೂಟ್ರಾನ್ ಶಕ್ತಿಯೆಂಥಲೂ ಕರೆಯುತ್ತಾರೆ. ಹೀಗಾಗಿ ಇಂಥಹ ಕ್ಷಿಪ್ರ ಪ್ರಜನಕ ವಿದ್ಯುತ್ ಸ್ಥಾವರಗಳಲ್ಲಿ ನ್ಯೂಟ್ರಾನ್‌ನ್ನು ಹೀರಿಕೊಳ್ಳುವ ಮಾಡರೇಟರ್ ಎಂಬ ಉಪಕರಣ ಅವಶ್ಯವಿಲ್ಲ. ಆದರೆ, ಹೆಚ್ಚಿನ ಸಾಂದ್ರತೆ ಹೊಂದಿರುವ ವಿದಳನ ವಸ್ತುಗಳನ್ನು ಇಂಧನವಾಗಿ ಬಳಸುವುದು ಇಲ್ಲಿ ಅವಶ್ಯ. ಯುರೇನಿಯಂ-238 ವಿಕಿರಣ ವಸ್ತುವನ್ನು ನೇರವಾಗಿ ಇಂಧನವಾಗಿ ಬಳಸಲು ಸಾಧ್ಯವಿಲ್ಲ. ಆದರೆ ಕ್ಷಿಪ್ರ ಪ್ರಜನಕ ವಿದ್ಯುತ್ ಸ್ಥಾವರಗಳು ಯುರೇನಿಯಂ-238 ನ್ನು ಪ್ಲುಟೋನಿಯಂ-239 ಆಗಿ ಪರಿವರ್ತಿಸುತ್ತವೆ. ಹೀಗೆ ಉತ್ಪತ್ತಿಯಾದ ಪ್ಲುಟೋನಿಯಂನ್ನು ಪರಮಾಣು ಸ್ಥಾವರಗಳಲ್ಲಿ ಇಂಧನವಾಗಿ ಬಳಸಬಹುದು. ಇಂತಹ ಸ್ಥಾವರಗಳಲ್ಲಿ ನ್ಯೂಟ್ರಾನ್‌ಗಳು ತಾವು ಉಪಯೋಗಿಸುವ ಪರಮಾಣು ಇಂಧನಕ್ಕಿಂತ ಹೆಚ್ಚಿನ ಪ್ರಮಾಣದ ವಿದಳನ ವಸ್ತುವನ್ನು ಬಿಡುಗಡೆಯಾಗುತ್ತದೆ. ಏಕೆಂದರೆ ಉಷ್ಣ ಪರಮಾಣು ಸ್ಥಾವರಗಳಲ್ಲಿಯಂತೆ, ಇಲ್ಲಿ ವಿದಳನ ಕ್ರಿಯೆಗೊಳಗಾಗುವ ಪರಮಾಣುಗಳು ಪೂರ್ಣಪ್ರಮಾಣದಲ್ಲಿ ಹಗುರ ಪರಮಾಣುಗಳಾಗಿ ವಿಭಜನೆ ಹೊಂದಿ ಅದರೊಡನೆ ಶಕ್ತಿಯು ಬಿಡುಗಡೆಯಾಗುತ್ತದೆ.



ಪ್ರಜನಕ ವಿದ್ಯುತ್ ಸ್ಥಾವರಗಳು (Breeder Reactors):

ಇಂತಹ ಸ್ಥಾವರಗಳು ಕ್ಷಿಪ್ರ ಪ್ರಜನಕ ವಿದ್ಯುತ್ ಸ್ಥಾವರಗಳಲ್ಲಿ ಬಿಡುಗಡೆಯಾದ ಪ್ಲುಟೋನಿಯಂ-239, ಯುರೇನಿಯಂ-233 ಮತ್ತು ಥೋರಿಯಂಗಳನ್ನು ಬಳಸಿಕೊಂಡು ವಿದ್ಯುತ್‌ನ್ನು ತಯಾರಿಸುತ್ತವೆ. ಈ ಸ್ಥಾವರಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಥೋರಿಯಂ ಬೇಕಾಗುವುದಿದ್ದು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಯುರೇನಿಯಂ ಅವಶ್ಯಕವಿದೆ. ನಮ್ಮ ರಾಷ್ಟ್ರದಲ್ಲಿ ನೈಸರ್ಗಿಕ ಯುರೇನಿಯಂ ಬಹಳ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತದೆ. ಆದರೆ ಥೋರಿಯಂ ನಿಕ್ಷೇಪದ ಪ್ರಮಾಣ ಅಂದಾಜು 5,18,000 ಟನ್‌ಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದೆ. ಹೀಗಾಗಿ ಇಂತಹ ಪ್ರಜನಕ ವಿದ್ಯುತ್ ಸ್ಥಾವರಗಳಿಗೆ ಅವಶ್ಯವಿರುವ



ಪ್ಲುಟೋನಿಯಂ-239 ಮತ್ತು ಯುರೇನಿಯಂ-233ಗಳನ್ನು ಕೆಲವುಟ್ಟಿಗೆ ಸಂಗ್ರಹಿಸಿಟ್ಟುಕೊಂಡು ಥೋರಿಯಂನಿಂದ ವಿದ್ಯುತ್ ತಯಾರಿಸುವ ಪೂರ್ಣ ಸಾಮರ್ಥ್ಯ ಹೊಂದಲು ಸಂಶೋಧನಾ ಕಾರ್ಯ ಪ್ರಗತಿಯಲ್ಲಿದೆ. ಪ್ರಜನಕ ವಿದ್ಯುತ್ ಸ್ಥಾವರಗಳ ತಂತ್ರಜ್ಞಾನದಲ್ಲಿ ಭಾರತ ಇಡೀ ವಿಶ್ವದಲ್ಲೇ ಮುಂಚೂಣಿಯಲ್ಲಿದೆ. ○

ಸಮಗ್ರ ಶಾಸನಕ್ಕೆ ಒತ್ತಾಯಿಸಿ ಅಸಂಘಟಿತ ಕಾರ್ಮಿಕರ ಪ್ರತಿಭಟನೆ

ಅಸಂಘಟಿತ ಕಾರ್ಮಿಕರಿಗಾಗಿನ ಅರ್ಜುನ್ ಸೇನ್‌ಗುಪ್ತಾ ಸಮಿತಿ ವರದಿ ಆಧಾರದಲ್ಲಿ ಅಂದರೆ ಸೇವಾ ನಿಯಮಾವಳಿಗಳಲ್ಲಿ ನಿಯಂತ್ರಣ ಕನಿಷ್ಠ ವೇತನ, ಸಾಮಾಜಿಕ ಭದ್ರತೆ, ತುಟ್ಟಿಭತ್ಯೆಗಳ ಜಾರಿ ಪಡಿತರ ವಿತರಣಾ ವ್ಯವಸ್ಥೆಯೂ ಸೇರಿದ ಇನ್ನೂ ಅನೇಕ ಅಂಶಗಳನ್ನೊಳಗೊಂಡು ಸಮಗ್ರ ಶಾಸನತರಬೇಕೆಂದು ಒತ್ತಾಯಿಸಿ, ಅಸಂಘಟಿತ ಕಾರ್ಮಿಕರ ಪ್ರತಿಭಟನೆ ಅಂಗವಾಗಿ 1.10.2007ರಂದು ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಪ್ರತಿಭಟನೆಗಳು ಯಶಸ್ವಿಯಾಗಿ ನಡೆದಿವೆ.

ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಸಭೆಯನ್ನು ಉದ್ದೇಶಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್, ಕೆ.ಎನ್. ಉಮೇಶ್, ಇ.ಕೆ.ಎನ್.ರಾಜನ್, ಮೀನಾಕ್ಷಿ ಸುಂದರಂ ಮಾತನಾಡಿ, ಗುತ್ತಿಗೆ ಕಾರ್ಮಿಕರಿಗೆ ಶಾಸನಬದ್ಧ ರಕ್ಷಣೆ, ಬೀಡಿ ಕಾರ್ಮಿಕರ ವೇತನ ಒಪ್ಪಂದ ಜಾರಿ, ಆಟೋ ಚಾಲಕರು, ಬೀಡಿ ಕಾರ್ಮಿಕರಿಗೆ ವಸತಿ ಕಾಲೋನಿ, ನಿವೇಶನ ರಹಿತರಿಗೆ ನಿವೇಶನ ಕೊಡಬೇಕೆಂದು ಮಾತನಾಡಿ ಈ ಎಲ್ಲಾ ಅಂಶಗಳನ್ನೊಳಗೊಂಡ ಮನವಿ ಪತ್ರವನ್ನು ರಾಜ್ಯಪಾಲರಿಗೆ ನಿಯೋಗದಲ್ಲಿ ತೆರಳಿಕೊಟ್ಟು ಜಾರಿಗೊಳಿಸಲು ಒತ್ತಾಯಿಸಿದರು.


ಬೆಂಗಳೂರಿನಲ್ಲಿ


ಗಂಗಾವತಿಯಲ್ಲಿ

ರಾಜ್ಯಾದ್ಯಂತ ಪ್ರತಿಭಟನೆ: ಸಮಗ್ರ ಶಾಸನ ಇತರ ಬೇಡಿಕೆಗಳಿಗಾಗಿ ರಾಜ್ಯದ ವಿವಿಧ ಜಿಲ್ಲೆಗಳಾದ, ಗುಲ್ಬರ್ಗಾ, ಬೆಳಗಾಂ, ಮಂಗಳೂರು, ಉತ್ತರ ಕನ್ನಡದ ಸಿರಸಿ, ಕಾರವಾರ, ಹೊನ್ನಾವರ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಶಿರುಗುಪ್ಪ, ರಾಯಚೂರು, ಗದಗ, ಮೈಸೂರು, ಮಂಡ್ಯ, ದಾವಣಗೆರೆ, ಚಿತ್ರದುರ್ಗ, ಗಂಗಾವತಿ, ತುಮಕೂರುಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಅಸಂಘಟಿತ ಕಾರ್ಮಿಕರ ಪ್ರತಿಭಟನಾ ಮೆರವಣಿಗೆಗಳು ಮತ್ತು ಧರಣಿಗಳು ಯಶಸ್ವಿಯಾಗಿ ನಡೆದಿವೆ. ○

ಸೂರ್ಯ ಮುಳುಗದ ರಾಜ್ಯ

ಸೂರ್ಯಮುಳುಗದ ರಾಜ್ಯ ಸೋತಿಲ್ಲ ಸೊರಗಿಲ್ಲ
ಮಿರಿ ಮಿರಿ ಮತ್ತೆ ಮಿಂಚುತ್ತೈತೆ
ಧರೆಯನ್ನೆಲ್ಲ ತನ್ನ ಉರಿನಾಲಿಗೆ ಶಾಸಿ
ಸರು ಪುರು ಸರುಪುರು ನೆಕ್ಕುತ್ತೈತೆ :1:

ಸತ್ತ ಸಿಂಹಾಸನ ಧುತ್ತನೆ ಮೇಲೆದ್ದು
ಸುತ್ತಲು ಸಾಂಭ್ರಾಜ್ಯ ಕಟ್ಟುತ್ತೈತೆ
ಜಗದಗಲುದ್ದಕ್ಕೂ ಬೆತ್ತಲೆ ಸುಲಿಗೆಗೆ
ಒಪ್ಪಿಗೆ ಮುದ್ರೆಯು ಬಿದ್ದೈತೆ :2:

ಕುಸುರಿಯ ಮುಖವಾಡ ಅದ್ಭುತಪವಾಡ
ಕುಂತಲ್ಲೆ ಬಲೆ ಜೇಡ ಹೆಣೆದೈತೆ
ಹಸಿವಿನ ಶೂಲಕ್ಕೇರಿಸಿ ದುಡಿಮೆಗೆ
ಹೊಸ ಹೊಸ ಸಂಕೋಲೆ ತೊಡಿಸೈತೆ:3:

ಕಸುವನೆ ಕಳಕೊಂಡು ಬೆವರಿನ ಬೆಲೆಯು
ಕಾಸಿನ ತೂಕಕೆ ಇಳುದೈತೆ
ಕೊಸರಿ ಮೇಲೇಳದೆ ಶೋಷಣೆ ತಾಳದೆ
ಶ್ರಮಜೀವಿ ಟಿಸು ಪುಸುಗುಟ್ಟುತ್ತೈತೆ:4:

ತುತ್ತಿನ ಚೀಲವ ಹೊತ್ತಿಗೆ ತುಂಬಲು
ನಿತ್ಯವು ಪರದಾಟ ನಡದೈತೆ
ಬತ್ತಿದ ಮುಖಗಳು ಸುಪ್ತದಿ ಜಾಗ್ರತ
ಗೊಂಡ್ಹೋರಾಟಕೆ ಇಳುದೈತೆ :5:

ನರಸಿಂಹಪ್ಪ, ಸಿಂಧನೂರು




■ ಕಿಟ್ಟಿ

ಪ್ರೀತಿ ಇಲ್ಲದ ಮೇಲೆ ಅದು 'ಸಿನಿಮಾ' ಆದೀತು ಹೇಗೆ?

ಪ್ರೀತಿ ಪ್ರೇಮದ ಎಳೆ ಇಲ್ಲದಿದ್ದಲ್ಲಿ ಅಂತಹ ಚಲನಚಿತ್ರವೇ ಅಪೂರ್ಣ ಎಂಬಷ್ಟರ ಮಟ್ಟಿಗೆ ಪ್ರೀತಿ ಪ್ರೇಮದ ವಿಷಯಗಳು ಚಲನಚಿತ್ರಗಳನ್ನು ಆವರಿಸಿಕೊಂಡು ಬಿಟ್ಟಿವೆ. 'ಲವ್' ಎಂಬ ವಿಷಯವೊಂದು ಇಲ್ಲದಿದ್ದರೆ ಅಂಥದ್ದೊಂದು ಚಿತ್ರವನ್ನು ಯಾಕಾದರೂ ನೋಡಬೇಕು ಎಂದು ಭಾವಿಸುವವರ ಸಂಖ್ಯೆಯು ಬಹಳ ದೊಡ್ಡದೆ ಇದೆ. ಅಷ್ಟೊಂದು ಆಕರ್ಷಣೆ ಇದೆ ಈ ವಿಷಯಕ್ಕೆ.

ಪ್ರೀತಿ ಪ್ರೇಮದ ವಿಷಯ ಯಾಕಿಷ್ಟು ಅಗಾಧ ಪ್ರಮಾಣದಲ್ಲಿ ಚಲನಚಿತ್ರಗಳನ್ನು ಆವರಿಸಿಕೊಂಡಿದೆ ಎಂದು ವಿಶ್ಲೇಷಿಸುವುದು ತುಂಬಾ ಕುತೂಹಲಕರವಾದ ಸಂಗತಿಯಾಗಿದೆ. ಇವತ್ತಿಗೂ ನಮ್ಮ ಸಮಾಜದಲ್ಲಿ ನಡೆಯುವ ಮದುವೆಗಳಲ್ಲಿ ಪ್ರೇಮ ವಿವಾಹಗಳ ಸಂಖ್ಯೆ ಶೇ.5 ರಷ್ಟೂ ಇಲ್ಲ. ಪ್ರೀತಿ ಪ್ರೇಮದ ಭಾವನೆಗಳು ಸಹಜವಾಗಿ ಮೂಡುವ ವಯೋಮಾನದ ಯುವಕ ಯುವತಿಯರಲ್ಲಿ ಎಷ್ಟು ಜನ ವಾಸ್ತವಿಕವಾಗಿ 'ಇಂತಹವರನ್ನು ಮದುವೆಯಾಗಬೇಕು. ಬಾಳಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳಬೇಕು' ಎಂದು ನಿರ್ಧರಿಸುತ್ತಾರೆ. ಅಂದರೆ 'ಪ್ರೀತಿಸುವ' ಧೈರ್ಯ ತೋರುತ್ತಾರೆ? ವಿಫಲ ಪ್ರೇಮ ಪ್ರಕರಣಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಸಹ ಇಂತಹ ಸಾಹಸಕ್ಕಿಳಿಯುವವರ ಸಂಖ್ಯೆ ನಮ್ಮ ಸಮಾಜದಲ್ಲಿ ಭಾರಿ ಕಡಿಮೆಯೇ. ಏಕೆಂದರೆ ಈ ಪ್ರೀತಿ ಪ್ರೇಮವೂ ಈಗಲೂ ಒಂದು ದುಸ್ಸಾಹಸ, ಅಪರಾಧ ಎಂಬ ಪರಿಸ್ಥಿತಿಯೇ ನಮ್ಮ ಸಮಾಜದಲ್ಲಿರುವುದು.



ಪರಿಸ್ಥಿತಿ ಹೀಗಿದ್ದರೂ ಪ್ರೀತಿ ಪ್ರೇಮದ ಕಥೆಗಳ ಚಿತ್ರಗಳಿಗೆ ಎಂದೂ ಕೊರತೆ ಬಂದಿಲ್ಲ. ಇದಕ್ಕೆ ಬಹಳ ದೊಡ್ಡ ಪ್ರೇಕ್ಷಕ ವರ್ಗವೇ ಇದೆ. ಇದು ಹೇಗೆ? ಇದು ವೈರುಧ್ಯ ಅಲ್ಲವೇ? ಯುವಜನರಿಗೆ ತಮ್ಮ ನಿಜ ಜೀವನದಲ್ಲಿ ವಾಸ್ತವಿಕವಾಗಿ ತಮ್ಮ ಸಹಜ ಪ್ರೇಮ ಭಾವನೆಗಳಿಗೆ ಅವಕಾಶ ಇಲ್ಲದೇ ಇರುವುದರಿಂದಲೇ ಈ ಪ್ರೀತಿ ಪ್ರೇಮ ಸಿನಿಮಾಗಳಲ್ಲಿ ಇಷ್ಟೊಂದು ವಿಜೃಂಭಿಸುತ್ತದೆ ಎನ್ನುತ್ತಾರೆ ವಿಶ್ಲೇಷಕರು.

ವ್ಯಕ್ತಪಡಿಸಲಾಗದ, ಈಡೇಲಾರದ ಸುಪ್ತ ಬಯಕೆಗಳು ರಾತ್ರಿಯ ಕನಸುಗಳಲ್ಲಿ ವಿವಿಧ ರೂಪ ಪಡೆದು ಈಡೇರುವಂತೆ ಈ ಸಿನಿಮಾಗಳೂ ಸಹ. ಬಹುಶಃ ಅದಕ್ಕೆ. ಈ ಸಿನಿಮಾ ಉದ್ದಿಮೆಯನ್ನು 'ಕನಸುಗಳ ವ್ಯಾಪಾರ' ಎಂದು ಕರೆಯುವುದು.

ನಾಯಿ ಕೊಡೆ 'ಪ್ರೀತಿ'

ವ್ಯಾಪಾರಿ ಸಿನಿಮಾಗಳಲ್ಲಿ ಪ್ರೀತಿಯನ್ನು ಬಿಂಬಿಸಲಾಗುತ್ತಿರುವ ಪರಿಯನ್ನು ಸ್ವಲ್ಪ ಪರಿಶೀಲಿಸುವುದು ಅಗತ್ಯವಿದೆ. ಪ್ರೀತಿ ಅಂದರೆ ಇಲ್ಲಿ ಹೆಚ್ಚಿನ ಸಾರಿ ದೈಹಿಕ ಆಕರ್ಷಣೆಯನ್ನೇ ಪ್ರೀತಿ ಅಂತ ಬಿಂಬಿಸಲಾಗುತ್ತದೆ.

ಇಬ್ಬರು ಪ್ರೇಮಿಗಳ ನಡುವೆ ದೈಹಿಕ ಆಕರ್ಷಣೆ ತಮ್ಮ ಪ್ರೇಮದ ಸಾಮಾನ್ಯ ಕನಿಷ್ಟ ಕಾರ್ಯಕ್ರಮವಿದ್ದಂತೆ. ಆದರೆ ಅಷ್ಟೇ ಸಾಕೆ?

ಪ್ರಥಮ ನೋಟದಲ್ಲೇ ಪ್ರೀತಿ

ಇದು ಸಿನಿಮಾಗಳಲ್ಲಿ ಬಹಳಷ್ಟು ಬಾರಿ ಆಗುತ್ತದೆ. ಹುಡುಗ ಹುಡುಗಿ ಇಬ್ಬರೂ ಪರಸ್ಪರರನ್ನು ನೋಡಿದ ಮೊದಲ ನೋಟದಲ್ಲಿ ಪ್ರೀತಿಯ ಆರಂಭವೇ ಆಗಿ ಬಿಡುತ್ತದೆ.

ತನ್ನ ಬಾಳ ಸಂಗಾತಿಯಾಗುವ ಹುಡುಗ ಅಥವಾ ಹುಡುಗಿಯ ಗುಣಗಳೇನು, ಸ್ವಭಾವವೇನು? ಆಸಕ್ತಿ, ಅಭಿರುಚಿ, ವ್ಯಕ್ತಿತ್ವವೇನು, ಸಾಮರ್ಥ್ಯಗಳೇನು? ಕೊರತೆ ದೌರ್ಬಲ್ಯಗಳೇನು ಎಂದು ಪರಸ್ಪರರಿಗೆ ತಿಳಿಯುವುದು ಬೇಡವೇ? ಪರಸ್ಪರ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದೂ ಇಲ್ಲ. ಇದೇನು ಇಲ್ಲ ಎಂದಾದ ಮೇಲೆ ಇಂತಹ ಪ್ರೀತಿ ಬರಿಯ ದೈಹಿಕ ಆಕರ್ಷಣೆ ಅಲ್ಲವೇ?

ಕೇವಲ ದೈಹಿಕ ಆಕರ್ಷಣೆಯ ಆಧಾರದಲ್ಲಿ ಮದುವೆಯಾದವರ ಜೀವನದಲ್ಲಿ ಪ್ರೀತಿ ಬಹಳ ದಿನ ಉಳಿಯುವುದೇ? ದೈಹಿಕ ಆಕರ್ಷಣೆ ಕುಗ್ಗಿದ ಮೇಲೆ ಸಂಸಾರದಲ್ಲಿ ಬಿರುಕುಗಳು ಮೂಡಲಾರದೇ?

ಇಷ್ಟೆಲ್ಲಾ ಯಾಕಾಗಿ ಯೋಚಿಸಬೇಕಾಗಿದೆ ಎಂದರೆ ಸಿನಿಮಾಗಳ ನಾಯಕ ನಾಯಕಿಯರನ್ನು, ಸಿನಿಮಾಗಳನ್ನು ಮಾದರಿಯಾಗಿ ತೆಗೆದುಕೊಳ್ಳುವ ಯುವಕ ಯುವತಿಯರ ಸಂಖ್ಯೆಯೇನೂ ಕಡಿಮೆಯಿಲ್ಲ. ಅದಕ್ಕೆ ಮಣಿರತ್ನಂರವರ ಬಾಂಬೆ ಈ ವಿಷಯಕ್ಕೆ ಒಂದು ಉದಾಹರಣೆ. ನಾಯಕಿಯನ್ನು ನೋಡಿದ ಮೊದಲ ನೋಟದಲ್ಲೇ ನಾಯಕನ ಎದೆಯಲ್ಲಿ 'ಪ್ರೀತಿ' ಶುರು.

ಇಂಟರ್‌ವಲ್ ನಂತರ ಪ್ರೀತಿ

ಇದು ಇನ್ನೊಂದು ಬಗೆಯ ಪ್ರೀತಿ. ನಾಯಕ ನಾಯಕಿಯರ ನಡುವೆ ಬರೋಬರಿ ಅರ್ಧ ಸಿನಿಮಾ ಪೂರ್ತಿ ಜಗಳ. ನಾಯಕನ ಮೂತಿ ಕಂಡರೆ ನಾಯಕಿಗೆ ಆಗದು. ನಾಯಕಿಯ ಮೂತಿ ಕಂಡರೆ ನಾಯಕನಿಗೆ ಆಗದು ಒಂದೂವರೆ ಗಂಟೆ ಪ್ರೇಕ್ಷಕರಿಗೆ ಕೋಳಿ ಜಗಳದ ಮನರಂಜನೆ.

ಮಧ್ಯಂತರ ಆದ ಮೇಲೆ ಕತೆಗೆ ಏನಾದರೊಂದು ಭಾವನಾತ್ಮಕ ತಿರುವು. ಆ ತಿರುವಿನಲ್ಲೇ ಪ್ರೀತಿಯ ಆರಂಭ ಬಿಂದು.

ಜಂಭದ ಕೋಳಿಯ ಸೊಕ್ಕು ಮುರಿಯುವುದು

ಇಂತಹ ಸಿನಿಮಾಗಳಲ್ಲಿ ಹಲವಾರು ಬಾರಿ ನಾಯಕಿ ಶ್ರೀಮಂತನ ಮಗಳಾಗಿರುತ್ತಾಳೆ. ನಾಯಕ ಬಡವನಾಗಿರುತ್ತಾನೆ. ನಾಯಕಿ ಕಾರ್ಖಾನೆ ಮಾಲೀಕನ ಮಗಳಾಗಿರುತ್ತಾಳೆ. ನಾಯಕ ಕಾರ್ಖಾನೆಯ ಕಾರ್ಮಿಕನಾಗಿರುತ್ತಾನೆ. ನಾಯಕಿ ನಾಯಕನ ಕಛೇರಿಯಲ್ಲಿ ಬಾಸ್‌ನ ಮಗಳಾಗಿರುತ್ತಾಳೆ. ನಾಯಕ ಸಾಮಾನ್ಯ ನೌಕರನಾಗಿರುತ್ತಾನೆ.

ನಾಯಕನ ಉದ್ಯೋಗ ಅಥವಾ ಆರ್ಥಿಕ ಸ್ಥಿತಿ ಅಷ್ಟೇ ಸಾಮಾನ್ಯ. ಉಳಿದಂತೆ ಅವನೊಬ್ಬ ಅಸಾಮಾನ್ಯ. ನಾಯಕಿಯ ದುರಹಂಕಾರ, ಸೊಕ್ಕನ್ನು ಇಳಿಸುವವನು.

ಜಂಭದ ಕೋಳಿಯ ಸೊಕ್ಕನ್ನು ಮುರಿಯುವ ಭರದಲ್ಲಿ ನಾಯಕ ಮಾಡದ ಸಾಹಸವೇ ಇಲ್ಲ. ನಾಯಕಿಯನ್ನು ಅಪಹರಿಸುವುದು, ಹಗ್ಗ ಕಟ್ಟಿ ಅವಳನ್ನು ಬೀದಿ ಬೀದಿಯಲ್ಲಿ ಎಳೆದಾಡುವುದು, ಕೈಕಾಲು ಕಟ್ಟಿ ಕುದುರೆ ಮೇಲೆ ಹೇರಿಕೊಂಡು ಹೋಗುವುದು, ಆಕೆಯ ಇಚ್ಛೆಗೆ ವಿರುದ್ಧವಾಗಿ ಆಕೆಯನ್ನು ಬಲಾತ್ಕಾರದಿಂದ ಕುಣಿಸುವುದು, ನೀರಿನೊಳಕ್ಕೆ ಎತ್ತಿ ಎಸೆದು ಖುಷಿ ಪಡುವುದು, ಓಹೋ ಒಂದೇ ಎರಡೇ, ನಾಯಕ ಇಷ್ಟೆಲ್ಲಾ ಮಾಡಿದರೂ ಕೊನೆಗೆ ನಾಯಕಿಗೆ ಅದು ಹೇಗೋ ಆತನಲ್ಲಿ ಪ್ರೀತಿ ಉಕ್ಕಿ ಹರಿದುಬಿಡುತ್ತದೆ. ಅವಳು ಪೂರ್ಣ ಬದಲಾಗಿ ಹೋಗುತ್ತಾಳೆ.

ರವಿಚಂದ್ರನ್ ಇಂತಹ ಸಿನಿಮಾಗಳ ಸರದಾರ ಎಂದರೂ ತಪ್ಪಿಲ್ಲ. ಅವರ ರಣಧೀರ ಸೇರಿದಂತೆ ಹಲವಾರು ಚಿತ್ರಗಳನ್ನು ಈ ಸಾಲಿನಲ್ಲಿ ನಿಲ್ಲಿಸಬಹುದು.

ಈ ವಿಷಯ ಹೇಳುವಾಗ ನಮ್ಮ 'ಭೂತಯ್ಯನ ಮಗ ಅಯ್ಯು' ಈ ಖ್ಯಾತಿಯ ಸಿದ್ದಲಿಂಗಯ್ಯನ ಮಗ ಮುರುಳಿಯವರ ಒಂದು ಚಿತ್ರದ ಬಗೆಗೆ ಹೇಳಲೇ ಬೇಕು. ಆತ ಒಬ್ಬ ಸಾಮಾನ್ಯ ಹುಡುಗ. ಶ್ರೀಮಂತರ ಮನೆಯ ಜಂಭದ ಹುಡುಗಿಗೂ ಈತನಿಗೂ ನಿತ್ಯ ಜಗಳ. ಜಿದ್ದಾಜಿದ್ದಿ ಕಾದಾಟ. ಈ ಜಿದ್ದಾಜಿದ್ದಿ ನಡೆಯುತ್ತಿರುವಾಗಲೇ ಆತ ಹುಡುಗಿಗೆ ಒಂದು ಸವಾಲು ಹಾಕುತ್ತಾನೆ.

ಆ ಸವಾಲಿನಂತೆ ಆತ ಆ ಶ್ರೀಮಂತನ ಮನೆಗೆ ನುಗ್ಗಿ ಕುಟುಂಬದವರ ಎದುರಿಗೆ ಹುಡುಗಿಯನ್ನು ಆಕೆಯ ಇಷ್ಟಕ್ಕೆ ವಿರುದ್ಧವಾಗಿ ಬಲಾತ್ಕಾರದಿಂದ ನಡುಮನೆಯಲ್ಲಿ ಅವಳನ್ನು ತಬ್ಬಿಕೊಂಡು ತುಟಿಗೆ ಮುತ್ತು ಕೊಡುತ್ತಾನೆ.

ಮುಂದೆ ಏನು? ಹುಡುಗಿಯ ತಂದೆ ತಾಯಿಗಳು ಪೋಲಿಸ್ ಕಂಪ್ಲೆಂಟ್ ಕೊಡುತ್ತಾರೆ ಎಂದೋ ಗೂಂಡಾಗಳನ್ನು ಬಿಟ್ಟು ನಾಯಕನನ್ನು ಹೊಡೆಸುತ್ತಾರೆ ಎಂದೋ ನೀವು ಕಲ್ಪಿಸಿಕೊಂಡರೆ ನೀವೂ ಮೂರ್ಖರಾಗುತ್ತೀರಿ ಅಷ್ಟೇ?

ಇಂತಹದ್ದಾವುದೂ ಈ ಚಿತ್ರದಲ್ಲಿ ನಡೆಯುವುದಿಲ್ಲ. ಬದಲಿಗೆ ಆ ಹುಡುಗಿಯಲ್ಲಿ ನಾಯಕನ ಬಗ್ಗೆ ದಿಢೀರನೆ ಪ್ರೀತಿ ಚಿಗುರುತ್ತದೆ! ಎಂತಹ ಅದ್ಭುತ ತಿರುವು. ಎಂತಹ ಧೈರ್ಯಶಾಲಿ ನಾಯಕ!! ಇವನೇನು ನಾಯಕನೋ ಇಲ್ಲ, ಕ್ರಿಮಿನಲ್ ಗೂಂಡಾನೋ? ನಿಜ ಜೀವನದಲ್ಲಿ ಇಂತಹದ್ದೊಂದು ಘಟನೆ ನಮ್ಮ ಜೀವನದಲ್ಲಿ ನಡೆದರೆ ನಮ್ಮ ಪ್ರತಿಕ್ರಿಯೆ ಹೀಗಿರಲು ಸಾಧ್ಯವೇ?

ಶತ್ರುವಿನ ಮಗಳೇ ಪ್ರಿಯತಮೆ

'ಜಂಭದ ಕೋಳಿಯ ಸೊಕ್ಕು ಮುರಿಯುವ' ಬ್ರ್ಯಾಂಡ್‌ನ ಸಿನಿಮಾಗಳಲ್ಲಿ ಇದು ಮತ್ತೊಂದು ಬಗೆ. ಹುಡುಗಿಯ ಅಪ್ಪ ಸಿನಿಮಾದ ವಿಲನ್. ಆ ಕೇಡಿಗಳ ತಂಡದ ನಾಯಕ ಆಗಿರುತ್ತಾನೆ. ಇಲ್ಲವೇ ದುಷ್ಟ ಜಮೀನ್ದಾರನಾಗಿ ಜನರನ್ನು ಹಿಂಸಿಸುತ್ತಿರುತ್ತಾನೆ. ಮಗಳು ತಂದೆಗೆ ತಕ್ಕಂತೆ ಬಜಾರಿ. ಕೊನೆಗೆ ತನ್ನ ಹಾಗೂ ತನ್ನ ತಂದೆಯ ತಪ್ಪಿನ ಅರಿವಾಗಿ ನಾಯಕನ ಪಕ್ಷ ಸೇರುತ್ತಾಳೆ.



ಡಾ. ರಾಜ್‌ಕುಮಾರರ ಸಂಪತ್ತಿಗೆ ಸವಾಲ್ ಇಂತಹ ಪ್ರೀತಿಯ ಒಂದು ಪ್ರಸಿದ್ಧ ಉದಾಹರಣೆ.

'ಪಂಚಮವೇದ' ಬ್ರ್ಯಾಂಡ್

ಹುಡುಗ ಹುಡುಗಿ ಪರಸ್ಪರ ಪ್ರೀತಿಸುತ್ತಾರೆ. ಹುಡುಗಿಯ ಮನೆಯವರು ಒಪ್ಪುವುದಿಲ್ಲ. ಹುಡುಗನಿಗೆ ಹೊಡೆದು ಬಡಿದು ಮಾಡುತ್ತಾರೆ. ಅಸ್ವಸ್ಥ ನಾಯಕನನ್ನು ದೋಣಿ[...] ಮಲಗಿಸಿಕೊಂಡು ಊರಿಂದ ತಪ್ಪಿಸಿಕೊ[...] ಹೋಗುವಾಗ ಮನೆಯವರು ಬೆನ್ನಟ್ಟಿ ಬರು[...] ಇನ್ನು ತಪ್ಪಿಸಿಕೊಳ್ಳಲಾರೆ ಎನಿಸಿದಾಗ ನಾ[...] ದೋಣಿಯಲ್ಲಿನ ಸೀಮೆಎಣ್ಣೆ ಡಬ್ಬದಿಂದ[...] ಪ್ರೇಮಿಯ ಮೇಲೆ ಎಣ್ಣೆ ಸುರಿದು ತಾ[...] ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುತ್ತಾಳೆ. ಇ[...] ನೀರ ಮೇಲೆ ಉರಿದು ಸಾಯುತ್ತಾರೆ.

ಪ್ರೀತಿ ವಿಫಲವಾದರೆ ಆತ್ಮಹತ್ಯೆಯಲ್ಲದೇ[...] ದಾರಿಯೇ ಇಲ್ಲ ಎಂದು ಬಿಂಬಿಸುವ ಸಿನಿಮಾ[...] ಹಲವು. ತಮ್ಮ ಪ್ರೀತಿ ಪ್ರೇಮಕ್ಕೆ ಕುಟ[...] ವರ್ಗದಿಂದ ತೊಂದರೆಗಳು ಎದುರಾ[...] ನಿರಾಶರಾಗಿ ಆತ್ಮಹತ್ಯೆಗಳನ್ನು ಮಾಡಿಕೊ[...] ಎಷ್ಟೋ ಪ್ರೇಮಿಗಳಿಗೆ ಇಂತಹ ಚಿತ್ರ[...] ಸ್ಫೂರ್ತಿಯೇ ಏನೋ?

ಜೀವನದ ಕೊನೆಯೇ?

ಒಂದೊಮ್ಮೆ ಪ್ರೀತಿ ವಿಫಲವಾಗಿ ಹೋ[...] ಅದೇನು ಜೀವನದ ಕೊನೆಯಲ್ಲ. ಆ ನಂತ[...] ಬಾಳಿ ಬದುಕಲು ಬೇಕಾದಷ್ಟು ಕಾರಣಗಳಿ[...] ಜೀವನ ಅಷ್ಟು ಮಹತ್ವದ್ದು, ಅಮೂಲ್ಯವಾ[...] ಎಂಬ ವಾಸ್ತವವನ್ನು ಬಿಂಬಿಸುವ ಸಿನಿಮಾ[...] ಬಹಳ ಕಡಿಮೆ.

ಮದುವೆಯಾಗಲಾರದ ಪ್ರಿಯತಮ[...] ನೆನಪಿನಲ್ಲಿ ಮದುವೆಯಾದ ಹೆಂಡತಿ[...] ಸೇರಲಾರದೆ ತೊಳಲಾಡುವ ಪ್ರೇಮಿಯ[...] 'ಎರಡು ಕನಸು'. ಕೊನೆಗೆ ತನ್ನ ಪ್ರೇ[...] ಮದುವೆಯಾಗಿದೆ, ಆಕೆ ಗಂಡನೊ[...] ಸುಖವಾಗಿದ್ದಾಳೆಂದಾಗ ಈ ಪ್ರೇಮಿಯ 'ಅ[...] ಪ್ರೇಮ'ದ ಭ್ರಮೆಯ ಪರದೆ ಹರಿಯುತ್ತದೆ. ಜೀ[...] ಇಂತಹ ವಾಸ್ತವವನ್ನು ತರೆದಿ[...] ಸಿನಿಮಾಗಳಾಗಲಿ ಅಥವಾ ಇದೇ ಮಾದ[...] 'ಅಮರ ಪ್ರೇಮವೆಂಬ ಹುಚ್ಚು ಆ[...] (ನಾ.ಡಿಸೋಜಾ) ದಂತಹ ಕತೆಗಳು [...] ಕಡಿಮೆಯೇ. ಆತ್ಮಹತ್ಯೆ ಇಲ್ಲ ಕೊಲೆಗೆ ಪ್ರೇರೇ[...] ಚಿತ್ರಗಳೇ ಅಧಿಕ.

ಜಾತೀಯನೇಕೆ ಮರೆ ಮಾಚುವರೋ

ಹುಡುಗ ಹುಡುಗಿಯ ಪ್ರೀತಿ ಪ್ರೇಮಕ್ಕೆ ನ[...] ಸಾಮಾನ್ಯವಾಗಿ ಅಡ್ಡಿ ಬರುವುದು ಜಾತಿ, ಸಾಮ[...] ಪ್ರಶ್ನೆ. ಆದರೆ ಹೆಚ್ಚಿನ ಸಿನಿಮಾಗಳಲ್ಲಿ ಜಾ[...] ಪ್ರಶ್ನೆಯನ್ನೇ ಮರೆ ಮಾಚಲಾಗುತ್ತದೆ.

ಹುಡುಗಿಯ ಅಪ್ಪ[...] ಅಮ್ಮನೋ ಅಣ್ಣ[...] ಯಾರೋ ಪ್ರೀತಿಗೆ [...] ಬರುವವರು ಹುಡುಗನ[...] ಪಾಸ್ತಿ, ಅಂತಸ್ತಿನ ಕುರಿತು[...] ಮಾಡುತ್ತಾರೆ ಹೊ[...] ಜಾತಿಯ ಬಗ್ಗೆ ಮ[...] ಆಡುವುದಿಲ್ಲ. ಅಬ್ಬ ಮ[...] 'ಜಾತ್ಯಾತೀತ' ಸಮಾಜ[...] ಸಿನಿಮಾಗಳಲ್ಲಿ.

ಇಂತಹ ಸಿನಿಮಾ[...] ವಾಸ್ತವದಿಂದ ಎಷ್ಟು [...] ಇದೆ ಎನ್ನುವುದಕ್ಕೆ ಇದೊ[...] ಒಂದು ಉದಾಹರಣೆ [...] ಮೇಲೆ ಹೇಳಲಾದ 'ಮೊದಲ ನೋಟದಲ್ಲೇ ಪ್ರ[...] 'ಮೊದಲು ಜಗಳ ಜಿದ್ದಾಜಿದ್ದಿ- ಆ ಮೇಲೆ ಪ್ರ[...] ಇಂತಹವುಗಳು ನಿಜ ಜೀವನದಲ್ಲಿ ಹ[...] ನಡೆಯಲೂಬಹುದು.

ಆದರೆ ಅದೊಂದು ಆದರ್ಶವೆಂಬ[...] ಅದೊಂದು ಅನುಕರಣೀಯ ಮಾದರಿ ಎಂ[...] ಅಥವಾ ಪ್ರೀತಿಯಲ್ಲಿ ಇವೆಲ್ಲಾ ಬಾರಿ [...] ಎಂಬಂತೆ ಯುವಜನರ ಮುಂದಿ[...] ಆಗಬಹುದಾದ ಅಥವಾ ಆಗುತ್ತಿ[...] ಅನಾಹುತಗಳಿಗೆ ಯಾರು ಹೊಣೆ?

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH